ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 10 ಸಂಚಿಕೆ 01 ಜನವರಿ 03, 2016 ಪುಟ 16 ರೂ.10/-

Blog : janashakthi.wordpress.com e-mail : js_weekly@yahoo.com

ಅತಿಥಿ ಅಂಕಣ



ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್ ಲೇಖನ



ಕಾರ್ಮಿಕ ನಾಯಕ ಸಂಗಾತಿ ಪ್ರಸನ್ನಕುಮಾರ್ ಇನ್ನಿಲ್ಲ





ಕಠಿಣ ಹಾದಿಯ ಬೆಳಕಿನ ಕಿರಣ ಜನನುಡಿ

ಬ್ರಿಗೇಡ್ ಚಲೋ

ಬಲಿಷ್ಠ ಪಕ್ಷ ಕಟ್ಟೋಣ!



ಜಿ.ಎಸ್.ಟಿ. ನೆನೆಗುದಿಗೆ ಬಿಜೆಪಿಯೇ ಕಾರಣ

ಭಾರತವನ್ನು ದೋಷಿಯಾಗಿಸುವ ಪ್ಯಾರೀಸ್ ಒಪ್ಪಂದ

WTO ನೈರೋಬಿ ಸಭೆಯಲ್ಲಿ ಭಾರತದ ಹಿತಾಸಕ್ತಿ ಬಲಿ

ಹರ್‍ಯಾಣ ಪಂಚಾಯತ್ ಶಾಸನ ತಿದ್ದುಪಡಿ ಬಗ್ಗೆ ಸುಪ್ರಿಂ ಕೋರ್ಟ್ ತೀರ್ಪು ಸಂವಿಧಾನದ ಆಶಯಕ್ಕೆ ವಿರುದ್ಧ –ಸೀತಾರಾಂ ಯೆಚೂರಿ

ಪಂಚಾಯತು ಚುನಾವಣೆಗಳಲ್ಲಿ ಸ್ಪರ್ಧಿಸಲು ಕನಿಷ್ಟ ಶೈಕ್ಷಣಿಕ ಅರ್ಹತೆಯನ್ನು ವಿಧಿಸಿರುವ ಮಾಡಿರುವ ಹರ್‍ಯಾಣ ಸರಕಾರದ ಕ್ರಮವನ್ನು ಎತ್ತಿ ಹಿಡಿಯುವ ತೀರ್ಪನ್ನು ಸುಪ್ರಿಂ ಕೋರ್ಟ್ ಡಿಸೆಂಬರ್ 10ರಂದು ನೀಡಿದೆ. "ಶಿಕ್ಷಣ ಮಾತ್ರವೇ ಮಾನವ ಜೀವಿಗೆ ತಪ್ಪು ಮತ್ತು ಸರಿಯ ನಡುವೆ, ಒಳ್ಳೆಯದು ಮತ್ತು ಕೆಟ್ಟದವರ ನಡುವೆ ವ್ಯತ್ಯಾಸ ಕಾಣುವ ಶಕ್ತಿಯನ್ನು ಕೊಡುವಂತದ್ದು" ಎಂದು ಇದಕ್ಕೆ ಕಾರಣ ಕೊಟ್ಟಿರುವ ತೀರ್ಪು ಮನೆಯಲ್ಲಿ ಶೌಚಾಲಯ ಹೊಂದಿರದೆ 'ನೈರ್ಮಲ್ಯದ ಮೂಲ ನಿಯಮ'ವೂ ಇಲ್ಲದ ಒಬ್ಬ ಅಭ್ಯರ್ಥಿಯನ್ನು ಸ್ಪರ್ಧೆಗೆ ಅನರ್ಹಗೊಳಿಸುವುದು ಸರಿಯಾಗಿಯೇ ಇದೆ ಎಂದೂ ಹೇಳಿದೆ.

ಆದರೆ ಶಿಕ್ಷಣ ಅಥವ ನೈರ್ಮಲ್ಯದ ಕೊರತೆಗೆ ಸಂಬಂಧಪಟ್ಟ ವ್ಯಕ್ತಿ ಹೊಣೆಯೇ ಅಥವ ಸಮಾಜ/ಸರಕಾರ ಹೊಣೆಯೇ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ನಮ್ಮ ಸಂವಿಧಾನ ಕರ್ತೃಗಳು ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕನ್ನು ಕೊಡುವ ಮೊದಲು ಈ ಬಗ್ಗೆ ಸಾಕಷ್ಟು ಚರ್ಚೆ ನಡೆಸಿ ಅದನ್ನು ಶಿಕ್ಷಣ, ಆಸ್ತಿ, ನಂಬಿಕೆ ಇತ್ಯಾದಿಗಳೊಂದಿಗೆ ಜೋಡಿಸಬಾರದು ಎಂಬ ತೀರ್ಮಾನಕ್ಕೆ ಬಂದ ಮೇಲೆಯೇ ಈ ಹಕ್ಕನ್ನು ನೀಡಿರುವುದು. ಆದ್ದರಿಂದ ಈ ತೀರ್ಪು ಸಂವಿಧಾನದ ಆಶಯಕ್ಕೆ ವಿರುದ್ಧವಾದದ್ದು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಈ ತೀರ್ಪಿನ ಬಗ್ಗೆ ಪಕ್ಷದ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ಚುನಾವಣೆಯಲ್ಲಿ ಮತದಾನದ ಹಕ್ಕು ಎಂದರೆ ಅದರಲ್ಲಿ ಚುನಾವಣೆಗಳಲ್ಲಿ ಸ್ಪರ್ಧಿಸುವ ಹಕ್ಕು ಕೂಡ ತಂತಾನೇ ಸೇರಿರುತ್ತದೆ. ಆದ್ದರಿಂದ ಈ ಹಕ್ಕನ್ನು ಸೀಮಿತಗೊಳಿಸುವುದನ್ನು ಎತ್ತಿ ಹಿಡಿದಿರುವುದು ದೇಶದ ಎಲ್ಲ ನಾಗರಿಕರಿಗೆ ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕನ್ನು ಮತ್ತು ಕಾನೂನಿನ ಎದುರು ಸಮಾನತೆಯ ನೀತಿಯನ್ನು ಕೊಡಮಾಡಿರುವ ಸಂವಿಧಾನದ ಮೂಲಭೂತ ಲಕ್ಷಣವನ್ನು ಉಲ್ಲಂಘಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ. ಈ ರೀತಿ ಪಂಚಾಯತು ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪರ್ಧಿಸಲು ಪೂರ್ವ ಶರತ್ತುಗಳನ್ನು ವಿಧಿಸುವ ಮೂಲಕ ಗ್ರಾಮೀಣ ಬಡವರ ಬಹುದೊಡ್ಡ ವಿಭಾಗವನ್ನು ಪ್ರತಿನಿಧಿಗಳಾಗಿ ಚುನಾಯಿತರಾಗುವ ಹಕ್ಕಿನಿಂದ ಹೊರ ಹಾಕಿದಂತಾಗಿದೆ ಎಂದು ಅದು ಹೇಳಿದೆ.

ಸಂಸತ್ತಿನ ಚಳಿಗಾಲದ ಅಧಿವೇಶನದ ಆರಂಭದಲ್ಲಿ ಸಂವಿಧಾನವನ್ನು ಜಾರಿ ಮಾಡಲು ಬದ್ಧರಾಗಿದ್ದೇವೆ ಎಂದು ಮತ್ತೆ ದೃಢಪಡಿಸಲಾಗಿದೆ, ಮತ್ತು ಕೇಂದ್ರ ಸರಕಾರ ಈ ವರ್ಷದಿಂದ ನವಂಬರ್ 26ರಂದು ಸಂವಿಧಾನ ದಿನದ ಹೊಸ ಆಚರಣೆಯನ್ನು ಆರಂಭಿಸಿದೆ. ಇಂತಹ ಹಿನ್ನೆಲೆಯಲ್ಲಿ ಈ ತೀರ್ಪನ್ನು ಸಂವಿಧಾನದ ಪೂರ್ಣ ಸಂವಿಧಾನ ಪೀಠ ಪುನರ್ವಿಮರ್ಶೆ ಮಾಡುವುದು ಅಗತ್ಯ ಎಂದು ಭಾವಿಸುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಅಂಬೇಡ್ಕರ್ ಕಣ್ಣೋಟಕ್ಕೆ ಅಪಚಾರ

ಸಂಸತ್ತು ಬಾಬಾಸಾಹೇಬ್ ಅಂಬೇಡ್ಕರ್ ಅವರ 125ನೇ ಜಯಂತಿಯನ್ನು ಆಚರಿಸಿದೆ, ಆದರೆ ಅದೇ ವೇಳೆಯಲ್ಲಿ 'ಒಬ್ಬ ವ್ಯಕ್ತಿ ಒಂದು ಮತ' ಮತ್ತು ಒಂದು ಮತ, ಒಂದು ಮೌಲ್ಯ' ಎಂದು ಸ್ವತಃ ಅಂಬೇಡ್ಕರ್ ಅವರು ಹೇಳಿದ ಸಂವಿಧಾನದ ನೀತಿಯನ್ನು ಬುಡಮೇಲು ಮಾಡಲಾಗುತ್ತಿದೆ, ಇದು ವಿಪರ್ಯಾಸ ಎಂದು ಅವರು ಹೇಳಿದ್ದಾರೆ.

ಕೇಂದ್ರ ಸರಕಾರ ಈ ವಿಷಯವನ್ನು ಪೂರ್ಣ ಸಂವಿಧಾನ ಪೀಠಕ್ಕೆ ವಹಿಸುವಂತೆ ಮಾಡಲು ತಕ್ಷಣವೇ ಮುಂದಾಗಬೇಕು ಎಂದು ಸೀತಾರಾಂ ಯೆಚುರಿಯುವರು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಹೇಳಿದ್ದಾರೆ.

ಸರಕಾರ ಏಕೆ ಅಂಬೇಡ್ಕರ್ ಅವರ ಕಣ್ಣೋಟದ ವಿರುದ್ಧ ಹೋಗುತ್ತಿದೆ ಎಂಬ ಪ್ರಶ್ನೆಯನ್ನು ಕೇಳಿದಾಗ ಯೆಚುರಿಯವರು "ಇದು ನಾನೂ ಕೇಳಬೇಕೆಂದಿರುವ ಪ್ರಶ್ನೆ, ಸರಕಾರಗಳು ಉತ್ತರ ಕೊಡಬೇಕು, ಹರ್ಯಾಣ ಸರಕಾರ ಮಾತ್ರವಲ್ಲ, ಮಧ್ಯಪ್ರದೇಶ, ರಾಜಸ್ತಾನ ಮತ್ತು ಗುಜರಾತ್ ಸರಕಾರಗಳೂ ಕೂಡ " ಎಂದುತ್ತರಿಸಿದರು. ಇವೆಲ್ಲವೂ ಬಿಜೆಪಿ ಆಳ್ವಿಕೆಯ ರಾಜ್ಯಗಳಾಗಿರುವುದು ಕೇವಲ ಆಕಸ್ಮಿಕವಲ್ಲ ಎಂದೂ ಅವರು ಹೇಳುತ್ತಾರೆ. ಏಕೆಂದರೆ ಬಿಜೆಪಿಗೆ ಸಾರ್ವತ್ರಿಕ ಸಮಾನತೆಯಲ್ಲಿ ನಂಬಿಕೆಯಿಲ್ಲ. ಅವರಿಗೆ ಧರ್ಮಗಳ ನಡುವೆಯಂತೂ ಸಮಾನತೆಯಲ್ಲಿ ನಂಬಿಕೆಯಿಲ್ಲ, ಜಾತಿಗಳ ಸಮಾನತೆಯಲ್ಲೂ ಅವರಿಗೆ ನಂಬಿಕೆಯಿಲ್ಲ. ಅದು ಹಿಂದು ಸಮಾಜದ ವರ್ಣವ್ಯವಸ್ಥೆಗೆ ಬದ್ಧವಾಗಿರುವಂತದ್ದು. ಇದು ಅದರ ಮನೋದೆಸೆಯ, ಹಿಂದೂರಾಷ್ಟ್ರ ಪ್ರಾಜೆಕ್ಟನ್ನು ಸಾಕಾರಗೊಳಿಸುವುದರ ಭಾಗವೇ ಆಗಿದೆ.


ಜನತೆಯ ಪ್ರತಿನಿಧಿಗಳು ಒಂದು ಮಾದರಿಯನ್ನು ಹಾಕಿಕೊಡಬೇಕು ಎಂಬುದು ಸುಪ್ರಿಂ ಕೋರ್ಟಿನ ಆಶಯವಿರಬಹುದಲ್ಲವೇ, ಇಲ್ಲಿ ಶಿಕ್ಷಣ ಮತ್ತು ನೈರ್ಮಲ್ಯ ಮುಖ್ಯವಾಗುವುದಿಲ್ಲವೇ ಎಂದು ಹಲವರು ಕೇಳಬಹುದು. "ಮೇಲ್ನೋಟಕ್ಕೆ ಇದು ಎಷ್ಟೇ ತರ್ಕಬದ್ಧವೆನಿಸಿದರೂ ಶಿಕ್ಷಣ ಮತ್ತು ನೈರ್ಮಲ್ಯ ಲಭ್ಯಗೊಳಿಸುವುದು ಸರಕಾರಗಳ ಹೊಣೆ, ಪ್ರಜೆಗಳದ್ದಲ್ಲ. ಜನ ತಾವಾಗಿಯೇ ಅನಕ್ಷರತೆಯನ್ನು ಆಯ್ಕೆ ಮಾಡಿಕೊಂಡಿಲ್ಲ. 1960ರೊಳಗೆ ಎಲ್ಲ 6ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಪುಕ್ಕಟೆಯಾಗಿ, ಕಡ್ಡಾಯವಾಗಿ ಶಿಕ್ಷಣ ಒದಗಿಸಬೇಕು ಎಂಬುದು ಸಂವಿಧಾನದ ನಿರ್ದೇಶಕ ಸೂತ್ರಗಳಲ್ಲಿ ಒಂದು. ಅದರಲ್ಲಿ ಸರಕಾರಗಳು ವಿಫಲಗೊಂಡಿದ್ದರೆ ಅದಕ್ಕೆ ನೀವು ಜನತೆಯನ್ನು ಏಕೆ ಶಿಕ್ಷಿಸಬೇಕು?" ಎಂದು ಯೆಚುರಿ ಕೇಳುತ್ತಾರೆ. ಅದೇ ರೀತಿ ಗುಜರಾತ ಸರಕಾರ ವಿಧಿಸಿರುವ ನೈರ್ಮಲ್ಯದ ಶರತ್ತು ಮತ್ತು ಮಧ್ಯಪ್ರದೇಶ ಮತ್ತು ರಾಜಸ್ತಾನ ಸರಕಾರಗಳು ವಿಧಿಸಿರುವ ಇತರ ಶರತ್ತುಗಳು. ಅವು ಸರಕಾರಗಳ ವಿಫಲತೆಗಳಿಂದಾದದ್ದು, ಅದಕ್ಕೆ ಜನರನ್ನೇಕೆ ಶಿಕ್ಷಿಸಬೇಕು?

ಅನಕ್ಷರತೆ, ಬಡತನ, ಶೌಚಾಲಯಗಳಿಲ್ಲದಿರುವುದು ಇತ್ಯಾದಿಗಳನ್ನು ಮಾನದಂಡಗಳಾಗಿ ಮಾಡುವುದೆಂದರೆ ಈಗಾಗಲೇ ಅಸಮಾನತೆಗೆ ಬಲಿಯಾದವರಿಗೇ ಮತ್ತಷ್ಟು ಶಿಕ್ಷೆ ವಿಧಿಸಿದಂತೆ. ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಯೆಚುರಿ ಹೇಳಿದ್ದಾರೆ. ಬಿಜೆಪಿ ಇನ್ನೇನು ಶರತ್ತುಗಳನ್ನು ತರಲಿದೆ ಎಂದು ಅವರು ವ್ಯಂಗ್ಯವಾಡಿದ್ದಾರೆ.

ಬಿಜೆಪಿ ನೇತೃತ್ವದ ರಾಜ್ಯ ಸರಕಾರಗಳೇ ಇದನ್ನು ತಂದಿರುವಾಗ ಕೇಂದ್ರದ ಬಿಜೆಪಿ ಸರಕಾರ ಈ ತೀರ್ಪಿನ ಮರುವಿಮರ್ಶೆ ಕೇಳಲು ಮುಂದಾಗುತ್ತದೆಯೇ? ಅದಾಗಿ ಮಾಡಲಿಕ್ಕಿಲ್ಲ, ಜನತೆಯ ಒತ್ತಡದಿಂದ ಮಾತ್ರ ಅದು ಸಾಧ್ಯ. ಸಂಸತ್ತಿನೊಳಗೆ ಒತ್ತಡ ಮತ್ತು ಹೊರಗೆ ಜನಗಳನ್ನು ಅಣಿನೆರೆಸುವ ಮೂಲಕ ಮಾತ್ರ ಇದು ಸಾಧ್ಯ ಎಂದು ಸೀತಾರಾಂ ಯೆಚುರಿ ಹೇಳಿದ್ದಾರೆ.

aÀiÁvEÁAzÀgÉ EzÀÄ

ಹಾಗೆ ನೋಡಿದರೆ ನಾನು ಹಿಂದೂ ಅಂತ
ಹೇಳಿಕೊಳ್ಳೋದೆ ಇಲ್ಲ. ನಾನು ಹಿಂದೂ ಅಲ್ಲ.
ಹಿಂದೂ ಅಂದರೆ ಗಂಗಾ–ಗಾಯತ್ರಿ–ಗೋವು ಇವು
ಪವಿತ್ರ ಅಂತ ಭಾವಿಸೋದು...
ನಮ್ಮ ಮಲೆನಾಡಿನ ತುಂಗಾ ಪವಿತ್ರ ಅಲ್ಲವೇ?
ಗಾಯತ್ರಿ ಪ್ರಾರ್ಥನೆ ಆದರೆ ನಾನು ಹಾಡೋ
ಪದ್ಯಾನೂ ಗಾಯತ್ರಿನೇ. ಇನ್ನು ಗೋವು ಕಡಿಬಾರ್‍ದು
ಅನ್ನೋದಾದ್ರೆ, ಬೇರೆ ಪ್ರಾಣಿಗಳೇನು ಪಾಪ
ಮಾಡಿದ್ದಾವೆ? ಪೂಜೆ, ಪುನಸ್ಕಾರ,
ವಿಧಿ ಇಂಥವುಗಳನ್ನು ಮಾಡೋರು ಹಿಂದುಗಳಾದರೆ
ಇದಾವುದನ್ನೂ ನಾನು
ಮಾಡೋದಿಲ್ಲ. ನೀವು
ಹೇಳುವ ಹಿಂದುವಿನ ಯಾವ
ಲಕ್ಷಣಗಳೂ ನನ್ನಲ್ಲಿ ಇಲ್ಲ.



–ಕುವೆಂಪು

"ಜಿಎಸ್‌ಟಿ ನೆನೆಗುದಿಗೆ ಬಿಜೆಪಿ, ಮೋದಿ ಸರಕಾರವೇ ಕಾರಣ"

ದೇಶದ ಆರ್ಥಿಕಕ್ಕೆ , ಆಮೂಲಕ ಜನತೆಗೆ ಸಮೃದ್ಧಿ ತರಬಲ್ಲ ಸರಕು ಮತ್ತು ಸೇವೆಗಳ ತೆರಿಗೆ(ಜಿಎಸ್‌ಟಿ) ಮಸೂದೆಯನ್ನು ಕಾಯ್ದೆಯಾಗಿ ಮಾಡಲು ಪ್ರತಿಪಕ್ಷಗಳು ಬಿಡುತ್ತಿಲ್ಲ ಎಂದು ಮೋದಿ ಸರಕಾರದ ಹಣಕಾಸು ಮಂತ್ರಿಗಳು ದಿನ ಬೆಳಗಾದರೆ ದೂಷಿಸುತ್ತಿರುತ್ತಾರೆ. ಆದರೆ ವಾಸ್ತವವಾಗಿ ಈಗಲೂ ಇದಕ್ಕೆ ಮೋದಿ ಸರಕಾರವೇ ಕಾರಣ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಸುಮಾರು ಒಂದು ದಶಕದ ಹಿಂದೆ ಮನಮೋಹನ್‌ಸಿಂಗ್ ನೇತೃತ್ವದ ಸರಕಾರ ಈ ಮಸೂದೆಯನ್ನು ಮಂಡಿಸಿತ್ತು. ಮೋದಿ ಸರಕಾರ ಬರುವ ವರೆಗೂ ಅದು ಕಾಯ್ದೆಯಾಗಿರದಿದ್ದರೆ ಅದಕ್ಕೆ ಬಿಜೆಪಿಯೂ ಪ್ರಮುಖ ಕಾರಣ. ಆಗ ಮೋದಿ ನೇತೃತ್ವದಲ್ಲಿದ್ದ ಗುಜರಾತ್ ಸರಕಾರವೂ ಸೇರಿದಂತೆ ಬಿಜೆಪಿ ನೇತೃತ್ವದ ಸರಕಾರಗಳು ಇದನ್ನು ವಿರೋಧಿಸಿದ್ದವು. ಈಗ ಅಧಿಕಾರಕ್ಕೆ ಬಂದ ಮೇಲೆ ಅದರ ನಿಲುವು ಸಂಪೂರ್ಣ ಬದಲಾಗಿದೆ. ಏಕಿರಬಹುದು?

ಆ ಮಸೂದೆಯಲ್ಲಿ ಇದಕ್ಕೆ ಕಾರಣವೂ ಇತ್ತು. ವ್ಯಾಟ್(ಮೌಲ್ಯವರ್ಧಿತ) ತೆರಿಗೆ ಬಂದು ರಾಜ್ಯಗಳ ಆದಾಯದಲ್ಲಿ ಗಮನಾರ್ಹ ಕಡಿತವಾಗಿತ್ತು. ಈ ಜಿಎಸ್‌ಟ್ ಬಂದ ಮೇಲೆ ರಾಜ್ಯ ಸರಕಾರಗಳಿಗೆ ಇದ್ದಬದ್ದ ತೆರಿಗೆ ಆದಾಯವೂ ಇಲ್ಲದಂತಾಗುತ್ತದೆ. ಅವು ಕೇಂದ್ರದ ಉದಾರ ದಾನಕ್ಕೆ ಕೈಯೊಡ್ಡಿ ನಿಲ್ಲುವಂತಹ ಪರಿಸ್ಥಿತಿ ಉಂಟಾಗುತ್ತದೆ. ಇದನ್ನು ಮೋದಿ ಸರಕಾರ ಬದಲಿಸ ಬಯಸುತ್ತಿದೆಯೇ? ಅದಕ್ಕೆ ಮೋದಿ ಸರಕಾರದ ಬಳಿ ಏನಾದರೂ ಕ್ರಮಗಳಿವೆಯೇ? ಈ ಬಗ್ಗೆ ಮೋದಿ ಸರಕಾರ ಏನನ್ನೂ ಹೇಳುತ್ತಿಲ್ಲ. ರಾಜ್ಯ ಸರಕಾರಗಳ ಈ ಆತಂಕವನ್ನು ನಿವಾರಿಸಲು ಒಂದು ಸರ್ವಪಕ್ಷ ಸಭೆ ಕರೆದು ಚರ್ಚಿಸಿ ಎಂದು ಸಿಪಿಐ(ಎಂ) ಮತ್ತು ಎಡಪಕ್ಷಗಳು ಆಗ್ರಹಿಸುತ್ತ ಬಂದಿವೆ. ಇದೊಂದು ಗಂಭೀರ ಸಂಗತಿ, ಇದರಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಮಾತುಕತೆಯಿಂದ ಒಮ್ಮತಕ್ಕೆ ಬರಲು ಸಾಧ್ಯವಿಲ್ಲ. ಆದರೆ ಸದಾ ಜಿಎಸ್‌ಟಿ ಮಂತ್ರ ಜಪಿಸುವ ಸರಕಾರ ಅಂತಹ ಒಂದು ಸಭೆಯನ್ನು ಕರೆಯಲು ಹಿಂದೇಟು ಹಾಕುತ್ತಿದೆ, ಆಗಿನ ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಹಣಕಾಸು ಮಂತ್ರಿ ಅಶೀಮ್ ದಾಸ್‌ಗುಪ್ತ ಅಧ್ಯಕ್ಷರಾಗಿದ್ದ ಸಮಿತಿ ಕೆಲವು ಶಿಫಾರಸುಗಳನ್ನು ಕೊಟ್ಟಿತು, ಅವುಗಳ ಗತಿಯೇನಾಗಿದೆ ಎಂದೂ ಸರಕಾರ ಹೇಳುತ್ತಿಲ್ಲ.

ಪ್ರಸಕ್ತ ಅಧಿವೇಶನ ಕೊನೆಗೊಳ್ಳುತ್ತಿದ್ದು ಈ ಅಧಿವೇಶನದಲ್ಲಿ ಅದನ್ನು ಪಾಸು ಮಾಡಿಕೊಳ್ಳಬೇಕೆಂಬ ಸರಕಾರದ ಬಯಕೆ ಈಡೇರುವ ಲಕ್ಷಣಗಳಿಲ್ಲ. ಸ್ವತಃ ಸರಕಾರದ ಒಂದು ವಿಭಾಗವೇ ಇದಕ್ಕೆ ವಿರುದ್ಧವಾಗಿದೆ ಎಂದು ಹೇಳಲಾಗುತ್ತಿದೆ. ಅಂದರೆ ಸರಕಾರವೇ ಇದು ಕಾಯ್ದೆಯಾಗದಂತೆ ಮುತುವರ್ಜಿ ವಹಿಸಿದಂತೆ ಕಾಣುತ್ತದೆ, ಸರಕಾರದ ಕ್ರಮಗಳೇ ಅದು ಪಾಸಾಗದಂತೆ ಮಾಡುತ್ತಿವೆ ಎಂದು ಸೀತಾರಾಂ ಯೆಚುರಿ ಸಂದೇಹ ವ್ಯಕ್ತಪಡಿಸಿದ್ದಾರೆ.

ನೈರೋಬಿ ಡಬ್ಲ್ಯುಟಿಒ ಸಭೆಯಲ್ಲಿ ದೇಶಕ್ಕೆ ಕೈಕೊಟ್ಟ ಬಿಜೆಪಿ ಸರಕಾರ

ನೈರೋಬಿಯಲ್ಲಿ ನಡೆದ ವಿಶ್ವ ವ್ಯಾಪಾರ ಸಂಘಟನೆ–ಡಬ್ಲ್ಯುಟಿಒದ 10ನೇ ಮಂತ್ರಿಮಟ್ಟದ ಸಭೆ ಭಾರತದ ಮಟ್ಟಿಗೆ ನಿರಾಶಾದಾಯಕ, ಮಾತ್ರವಲ್ಲ, ಒಂದು ಹಿನ್ನಡೆ ಕೂಡ, ಮೋದಿ ನೇತೃತ್ವದ ಬಿಜೆಪಿ ಸರಕಾರ ದೇಶಕ್ಕೆ ಸಂಪೂರ್ಣವಾಗಿ ಕೈಕೊಟ್ಟಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಆಹಾರ ಭದ್ರತೆ ಕೋಟ್ಯಂತರ ಭಾರತೀಯರ ಹಸಿವಿನ ಅಗತ್ಯಗಳನ್ನು ಪೂರೈಸಲು ಅತ್ಯಗತ್ಯ. ಸಾರ್ವಜನಿಕ ದಾಸ್ತಾನು ಕಾರ್ಯಕ್ರಮಗಳು ಇದರ ಜೀವಾಳ. ಈ ಪ್ರಶ್ನೆಯ ಮೇಲೆ 162 ದೇಶಗಳು ಭಾಗವಹಿಸುವ ಈ ಸಭೆಯಲ್ಲಿ ಒಂದು ಪರಿಹಾರ ಸಿಗಬಹುದು ಎಂಬ ನಿರೀಕ್ಷೆಯೊಂದಿಗೆ ಭಾರತ ಈ ಮಾತುಕತೆಗಳಿಗೆ ಹೋಗಿತ್ತು. ಸಾಕಷ್ಟು ಸಂಪನ್ಮೂಲಗಳಿಲ್ಲದ, ಕಡಿಮೆ ಆದಾಯದ ಭಾರತದ ರೈತರನ್ನು ಮುಂದುವರೆದ ದೇಶಗಳ ಅತ್ಯಂತ ಹೆಚ್ಚು ಸಬ್ಸಿಡಿ ಪಡೆದ ಕೃಷಿ ಉತ್ಪನ್ನಗಳ ವ್ಯಾಪಕ ಆಮದಿನಿಂದ ರಕ್ಷಿಸಲು ಸುಂಕಪಟ್ಟಿಗಳ ಒಂದು ವಿಶೇಷ ರಕ್ಷಕ ವ್ಯವಸ್ಥೆಯ ಬಗ್ಗೆ ಪರಿಣಾಮಕಾರಿಯಾದ ಮತ್ತು ಪಾರದರ್ಶಕವಾದ ಒಪ್ಪಂದದ ಕರಡನ್ನು ಭಾರತ ಮುಂದಿಟ್ಟಿತ್ತು. ಇಂಡೋನೇಸ್ಯ ನೇತೃತ್ವದ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೈತ್ರಿಕೂಟವಾದ ಜಿ–33 ಜತೆಗೂಡಿ ಇದನ್ನು ಮಂಡಿಸಲಾಗಿತ್ತು. ಆದರೆ ಇ ಎರಡೂ ವಿಷಯಗಳಲ್ಲಿ ಭಾರತದ ಹಿತಗಳನ್ನು ರಕ್ಷಿಸುವ ಯಾವುದೇ ಭರವಸೆಯನ್ನು ಪಡೆಯುವುದರಲ್ಲಿ ಬಿಜೆಪಿ ಸರಕಾರ ಶೋಚನೀಯವಾಗಿ ಶರಣಾಗಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಅಲ್ಲದೆ ದೋಹಾ ಅಭಿವೃದ್ಧಿ ಅಜೆಂಡಾದಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಹಿತ

ಪುಟ 12 ನೋಡಿ

ಹವಾಮಾನ ಬದಲಾವಣೆಯ ಪ್ರಶ್ನೆ:

ಭಾರತದಂತಹ ದೇಶಗಳನ್ನು ದೋಷಿಗಳಾಗಿಸುವ ಪ್ಯಾರಿಸ್ ಒಪ್ಪಂದ

ಪ್ರಧಾನ ಮಂತ್ರಿಗಳು ಪ್ಯಾರಿಸ್ ಹವಾಮಾನ ಒಪ್ಪಂದವನ್ನು ಒಂದು ಮಹಾಯಶಸ್ಸು ಎಂದು ಹಾಡಿ ಹೊಗಳಿದ್ದಾರೆ. ಡಿಸೆಂಬರ್ 16ರಂದು ಲೋಕಸಭೆಯಲ್ಲಿ ಪರಿಸರ ಮಂತ್ರಿಗಳು ಪ್ಯಾರಿಸ್‌ನಲ್ಲಿ ವಿಭಿನ್ನ ಮಟ್ಟದ ಹೊಣೆಗಾರಿಕೆ ಮತ್ತು ಸಮತ್ವ ಗಳಿಸುವಲ್ಲಿ ಭಾರತ ಸರಕಾರಕ್ಕೆ ಯಶಸ್ಸು ದೊರಕಿದೆ ಎಂದು ಹೇಳಿಕೊಂಡಿದ್ದಾರೆ. ಇದು ಅತ್ಯಂತ ಖೇದದ ಸಂಗತಿ, ಏಕೆಂದರೆ ಪ್ಯಾರಿಸ್ ಒಪ್ಪಂದ ವಾಯುಮಾಲಿನ್ಯ ಉಂಟು ಮಾಡುವ ಉತ್ಸರ್ಜನೆಗಳನ್ನು ಸುರಕ್ಷಿತ ಮಟ್ಟಗಳಿಗೆ ಇಳಿಸುವಲ್ಲಿಯೂ ಮತ್ತು ಪ್ರಸ್ತಾವಿತ ಅಂತರ್ರಾಷ್ಟ್ರೀಯ ಉತ್ಸರ್ಜನೆಯ ಹತೋಟಿ ವ್ಯವಸ್ಥೆಯಲ್ಲೂ ಅತ್ಯಂತ ದೋಷಪೂರಿತವಾಗಿದೆ. ಈ ಹಿಂದೆ ಅಮೆರಿಕಾದಂತಹ ಮುಂದುವರೆದ ದೇಶಗಳು ಮಾಡಿರುವ ಪರಿಸರ ಲೂಟಿಯನ್ನು ಉಪೇಕ್ಷಿಸಿ, ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳೇ ಹವಾಮಾನ ಬದಲಾವಣೆಯ ಸಮಸ್ಯೆ ಬಿಡಾಯಿಸುತ್ತಿರುವ ಪ್ರಮುಖ ಅಪರಾಧಿಗಳಾಗಿ ಕಾಣುವಂತೆ ಮಾಡಿದೆ, ಇದಕ್ಕೆ ಮುಂಬರುವ ದಿನಗಳಲ್ಲಿ ಭಾರತ ಭಾರೀ ಬೆಲೆ ತೆರಬೇಕಾಗುತ್ತದೆ ಎಂದು ಸಿಪಿಐ(ಎಂ) ಎಚ್ಚರಿಸಿದೆ.

ಹವಾಮಾನ ಬದಲಾವಣೆಯ ಸಮಸ್ಯೆ ಇಡೀ ಮಾನವಕುಲಕ್ಕೆ ಬೆದರಿಕೆ ಒಡ್ಡಿರುವ ಜಾಗತಿಕ ಸಮಸ್ಯೆ. ಇದನ್ನು ಎದುರಿಸಲು ಎಲ್ಲ ದೇಶಗಳನ್ನು ಒಟ್ಟಿಗೆ ತರುವ ಒಂದು ಅಂತರ್ರಾಷ್ಟ್ರೀಯ ಒಪ್ಪಂದಕ್ಕಾಗಿ ಜಗತ್ತು ಹಲವು ವರ್ಷಗಳಿಂದ ಕಾತುರದಿಂದ ಕಾಯುತ್ತಿತ್ತು. ಆದರೆ ಕಳೆದ ವಾರ ಪ್ಯಾರಿಸ್‌ನಲ್ಲಿ ಆದ ಒಪ್ಪಂದ ಇದನ್ನು ನ್ಯಾಯಯುತವಾಗಿ ಎದುರಿಸಿಲ್ಲ.

ಇದರಲ್ಲಿ ವಿಶ್ವ ಸಂಸ್ಥೆ ಹವಾಮಾನ ಬದಲಾವಣೆ ಚೌಕಟ್ಟು ಸಮಾವೇಶ(ಯುಎನ್‌ಎಫ್‌ಸಿಸಿಸಿ) ಒಪ್ಪಿಕೊಂಡಿರುವ ಅಭಿವೃದ್ಧಿಶೀಲ ದೇಶಗಳು ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ನಡುವೆ "ಸಾಮಾನ್ಯ, ಆದರೆ ವಿಭಿನ್ನೀಕರಿಸಿದ ಹೊಣೆಗಾರಿಕೆ"(ಸಿಬಿಡಿಆರ್) ಎಂಬುದಕ್ಕೆ ಪ್ಯಾರಿಸ್ ಒಪ್ಪಂದದಲ್ಲಿ ಬಾಯುಪಚಾರದ ಪ್ರಸ್ತಾಪವಷ್ಟೇ ಇದೆ. ವಾಸ್ತವವಾಗಿ ಅದು ಅಭಿವೃದ್ಧಿ ಹೊಂದಿರುವ ದೇಶಗಳು ಈ ಹಿಂದೆ ಮಾಡಿರುವ ಪರಿಸರ ಲೂಟಿಗೆ ಅವನ್ನು ಪ್ರಮುಖ ಹೊಣೆಗಾರರಾಗಿ ಮಾಡಿಲ್ಲ. ಈ ಮೂಲಕ ಅದು ಪರಿಸರವನ್ನು ಮಲಿನ ಮಾಡುವ ಉತ್ಸರ್ಜನೆಗಳನ್ನು ಕಡಿಮೆ ಮಾಡುವ ಪುಟ

ಪುಟ 13 ನೋಡಿ

ಕಾಂ. ಎಸ್.ಪ್ರಸನ್ನ ಕುಮಾರ್



ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ಯ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿ.ಐ.ಟಿ.ಯು) ನ ಅಖಿಲ ಭಾರತ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಿ.ಐ.ಟಿ.ಯು ವಿನ ಪ್ರಧಾನ ಕಾರ್ಯದರ್ಶಿ, ಹಲವಾರು ಕಾರ್ಮಿಕ ಸಂಘಗಳ ನಾಯಕರಾದ ಕಾಂ. ಎಸ್.ಪ್ರಸನ್ನ ಕುಮಾರ್ ರವರು 23 ಡಿಸೆಂಬರ್ 2015 ರಂದು ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 51 ವರ್ಷವಯಸ್ಸಾಗಿತ್ತು. ಅವರಿಗೆ ಪತ್ನಿ ಮತ್ತು ಇಬ್ಬರು ಮಕ್ಕಳಿದ್ದಾರೆ. ಅವರ ಹಠಾತ್ ನಿಧನ ಕಮ್ಯೂನಿಸ್ಟ್ ಚಳುವಳಿ ಹಾಗೂ ಕಾರ್ಮಿಕ ರಂಗಕ್ಕೆ ತುಂಬಲಾರದ ನಷ್ಟವುಂಟಾಗಿದೆ. ಸಾವಿರಾರು ಕಾರ್ಮಿಕರು ಮತ್ತು ಪಕ್ಷದ ಕಾರ್ಯಕರ್ತರು ನೆರೆದು ತಮ್ಮ ಅತೀವ ಶೋಕವನ್ನು ವ್ಯಕ್ತಪಡಿಸಿದರು.

ಮೂಲತಃ ಬಳ್ಳಾರಿಯಲ್ಲಿ ಜನಿಸಿದ ಇವರು ವಿಧ್ಯಾರ್ಥಿ ದೆಸೆಯಿಂದಲೇ ಭಾರತ ವಿದ್ಯಾರ್ಥಿ ಫೆಡೆರೇಷನ್(ಎಸ್.ಎಫ್.ಐ)ನ ಮೂಲಕ ವಿದ್ಯಾರ್ಥಿ ಚಳುವಳಿಯ ಮುಂಚೂಣಿಯಲ್ಲಿ ತೊಡಗಿಸಿಕೊಂಡ ಅವರು ಕಾರ್ಮಿಕ ವರ್ಗದ ಸಂಘಟನೆಗೆ ಮುಂದಾದರು.

ಮಾರ್ಕ್ಸ್‌ವಾದಿ ಲೆನಿನ್ ವಾದಿ ಸಿದ್ಧಾಂತಕ್ಕೆ ಪೂರ್ಣ ಬದ್ಧರಾದ ಅವರು ತಮ್ಮ ಇಡೀ ಜೀವನವನ್ನು ದುಡಿಯುವ ಜನರಿಗಾಗಿ ಮುಡುಪಿಟ್ಟರು. ಅವರು ಬಳ್ಳಾರಿಯ ಸಿ.ಐ.ಟಿ.ಯು ಜಿಲ್ಲಾ ಕಾರ್ಯದರ್ಶಿಯಾಗಿ, ಮತ್ತು ಸಿ.ಪಿ.ಐ.(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿ 1985 ರಿಂದ 1995ರ ವರೆಗೆ ಅವಿರತವಾಗಿ ದುಡಿದಿದ್ದರು. ಸಿ.ಐ..ಟಿ.ಯು ರಾಜ್ಯ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ ಅವರು ಸಿ.ಐ.ಟಿ.ಯು ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ 2008 ರಿಂದ ಜವಾಬ್ದಾರಿ ನಿರ್ವಹಿಸುತ್ತಿದ್ದರು. ನಂತರ ಸಿ.ಪಿ.ಐ (ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯರಾಗಿ ಮತ್ತು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ತಮ್ಮ ಕೊನೆಯ ಉಸಿರಿನವರೆಗೂ ದುಡಿಯುವ ಜನರ ಏಳ್ಗೆಗಾಗಿ ಶ್ರಮಿಸಿದವರು.

ಅವರ ನೇತೃತ್ವದಲ್ಲಿ ಹಲವಾರು ಧೀರೋದಾತ್ತ ಹೋರಾಟಗಳನ್ನು ಯಶಸ್ವಿಯಾಗಿ ನಡೆಸಿ ಜನಪ್ರಿಯ ನಾಯಕರಾಗಿ ಹೊರಹೊಮ್ಮಿದರು. ಬಳಿಕ ಅವರು ರಾಜ್ಯದ ಕಾರ್ಮಿಕ ಚಳುವಳಿಯ ಮುಖಂಡತ್ವಕ್ಕೆ ಆಯ್ಕೆಯಾದರು. ರಾಜ್ಯದ ಅಸಂಘಟಿತ ಕ್ಷೇತ್ರಗಳಾದ ಷುಗರ್ ಕ್ಯಾಂಟ್ ವರ್ಕರ್ಸ್, ಹಮಾಲಿ ಕಾರ್ಮಿಕರು, ಕರ್ನಾಟಕ ಸಾರಿಗೆ ಸಂಸ್ಥೆಯ ಕಾರ್ಮಿಕರ ಸಂಘ, ಹಾಗೂ ಘನ ಕೈಗಾರಿಕೆಗಳಾದ ಬಿ.ಇ.ಎಲ್, ಐ.ಟಿ.ಸಿ, ಇಂಡಾಲ್, ಕಿರ್ಲೋಸ್ಕರ್,ಮೈಕೋ ಕಾರ್ಮಿಕರ ಸಂಘಗಳ ಅಧ್ಯಕ್ಷರಾಗಿ ಜವಾಬ್ದಾರಿ ನಿರ್ವಹಿಸಿದವರು.

ಸಿ.ಐ.ಟಿ.ಯು ಅಖಿಲ ಭಾರತ 14 ನೇ ಸಮ್ಮೇಳನದಲ್ಲಿ ಅಖಿಲ ಭಾರತ ಕಾರ್ಯದರ್ಶಿಯಾಗಿ ಅವರು ಆಯ್ಕೆಯಾದರು. ಕರ್ನಾಟಕದ 11 ನೇ ರಾಜ್ಯ ಸಮ್ಮೇಳನದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

2008 ರಲ್ಲಿ ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಆಯ್ಕೆಯಾಗಿ ಇಲ್ಲಿಯವರೆಗೂ ಆ ಸ್ಥಾನದಲ್ಲಿ ರಾಜ್ಯ ನಾಯಕರಾಗಿ ಕೆಲಸ ಮಾಡುತ್ತಿದ್ದರು

ಅಂತರ ರಾಷ್ಟ್ರೀಯ ಮಟ್ಟದಲ್ಲಿಯೂ ಇವರು ಭಾರತದ ಪ್ರತಿನಿಧಿಯಾಗಿ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ.ಎಲ್.ಓ) ಸಮ್ಮೇಳನದಲ್ಲಿ ಸಿ.ಐ.ಟಿ.ಯು. ಪ್ರತಿನಿಧಿಯಾಗಿಯೂ, 45 ನೇ ಐ.ಎಲ್.ಸಿ ಸಮಾವೇಶದಲ್ಲಿ ಪಾಲ್ಗೊಂಡು ಪರಿಣಾಮಕಾರಿ ಪಾತ್ರ ವಹಿಸಿದ್ದರು.

ಸ್ವತಃ ಕಾನೂನು ಪದವಿ ಪೂರೈಸಿದ ಅವರು ದುಡಿಯುವ ಜನರ ಪರವಾಗಿ ತಮ್ಮನ್ನು ಪೂರ್ಣಕಾಲದ ಕಾರ್ಯಕರ್ತರಾಗಿ ಅರ್ಪಿಸಿಕೊಂಡಿದ್ದರು. ಅವರ ಪಾರ್ಥಿರ ಶರೀರವನ್ನು ಅಂತಿಮ ದರ್ಶನಕ್ಕಾಗಿ ಸಿ.ಪಿ.ಐ.(ಎಂ) ಪಕ್ಷದ ರಾಜ್ಯ ಸಮಿತಿ ಕಛೇರಿ ಇ.ಎಂ.ಎಸ್. ಭವನದಲ್ಲಿ ಇಡಲಾಯಿತು. ಮರು ದಿನ ಡಿಸೆಂಬರ್ 24 ರಂದು ಬಳ್ಳಾರಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

(ವರದಿ ಪುಟ 9 ಮತ್ತು 16)

ನ್ಯಾ. ಅಡಿ ಪದಚ್ಯುತಿ ಹುಚ್ಚಾಟ ನಿಲ್ಲಿಸಿ !

ಸಂಪಾದಕೀಯ

ಉಪಲೋಕಾಯುಕ್ತ ನ್ಯಾ. ಅಡಿ ಅವರ ಪದಚ್ಯುತಿಯ ಸಂಬಂಧದಲ್ಲಿ ಕರ್ನಾಟಕ ಕಾಂಗ್ರೆಸ್ ಸರಕಾರದ ನಡೆಗಳು ಹುಚ್ಚಾಟದಂತೆ ಕಾಣುತ್ತಿವೆ. ಸರಕಾರದ ಅಡ್ವೋಕೇಟ್ ಜನರಲ್, ಕಾನೂನು ಮಂತ್ರಿ, ಹೇಳಿಕೆಗಳು ವಿರೋಧಾಭಾಸಗಳಿಂದ ಕೂಡಿವೆ. ಅಡ್ವೋಕೇಟ್ ಜನರಲ್ ಮತ್ತು ಕಾನೂನು ಮಂತ್ರಿಗಳ ಹೇಳಿಕೆಗಳು ನಿಲುವುಗಳು ಹೆಜ್ಜೆ ಹೆಜ್ಜೆಗೂ ಬದಲಾಗುತ್ತಿದ್ದು ತೀವ್ರ ಗೊಂದಲ ಉಂಟು ಮಾಡುತ್ತಿವೆ. ಪದೇ ಪದೇತಪ್ಪು ಹೆಜ್ಜೆ ಇಡುತ್ತಿದ್ದು ಸರಕಾರಕ್ಕೆ ಹೈಕೋರ್ಟಿನಲ್ಲೂ, ಸಾರ್ವಜನಿಕರ ಎದುರೂ ತೀವ್ರ ಮುಜುಗುರ ಉಂಟು ಮಾಡುತ್ತಿವೆ.

ವಿರೋಧ ಪಕ್ಷಗಳು ಲೋಕಾಯುಕ್ತ ನ್ಯಾ.ಭಾಸ್ಕರರಾವ್‌ಅವರ ಪದಚ್ಯುತಿ ಬಗ್ಗೆ ಮಂಡಿಸಿದ ನಿರ್ಣಯವನ್ನು ಬೆಂಬಲಿಸಬೇಕೆ ಬೇಡವೇ ಎಂದು ಮೀನ ಮೇಷ ಎಣಿಸಿದ ಕಾಂಗ್ರೆಸ್ ಇದ್ದಕ್ಕಿದ್ದ ಹಾಗೆ ಉಪಲೋಕಾಯುಕ್ತ ನ್ಯಾ. ಅಡಿ ಅವರ ಪದಚ್ಯುತಿ ಬಗ್ಗೆ ನಿರ್ಣಯ ಮಂಡಿಸಿತು. ನ್ಯಾ.ಭಾಸ್ಕರರಾವ್ ಅವರ ಅಧಿಕಾರ ದುರ್ಬಳಕೆ ಬಗ್ಗೆ ಸಾರ್ವಜನಿಕ ವಲಯದಲ್ಲಿ ಇದ್ದಷ್ಟು ಆಪಾದನೆಗಳು, ಅವರ ಮಗ ಲೋಕಾಯುಕ್ತ ಕಚೇರಿಯ ದುರ್ಬಳಕಗಳ ಬಗ್ಗೆ ಮೇಲ್ನೋಟಕ್ಕೆ ಕಾಣುವ ಹಾಗೂ ತನಿಖೆಯಿಂದ ಹೊರ ಬರುತ್ತಿರುವ ಹಲವು ಸಂಶಯಾಸ್ಪದ ನಡವಳಿಕೆಗಳು, ಉಪಲೋಕಾಯುಕ್ತ ನ್ಯಾ. ಅಡಿ ಅವರ ಬಗ್ಗೆ ಇರಲಿಲ್ಲ ಎಂಬುದು ಮೊದಲಿನಿಂದಲೂ ಸ್ಪಷ್ಟವಿತ್ತು.

ನ್ಯಾ.ಭಾಸ್ಕರರಾವ್ ಅವರ ಬಗೆಗೆ ಇರುವ ಸಾಕ್ಷ್ಯಾಧಾರಗಳು ಅವರ ಪದಚ್ಯುತಿಗೆ ಸಾಕೇ ಎಂಬ ಬಗ್ಗೆನೇ ಹಲವು ಕಾನೂನು ಪರಿಣತರು ಸಂಶಯ ವ್ಯಕ್ತಪಡಿಸಿರುವಾಗ, ಕಾಂಗ್ರೆಸ್‌ನ ಈ ಅವಸರದ ನಡೆ ಹಲವು ಬೇಜವಾಬ್ದಾರ ನಡೆಗಳಿಗೆ ಹೆಸರಾಗಿರುವ ಸಿದ್ಧರಾಮಯ್ಯ ಸರಕಾರದ ಮಾನದಂಡವನ್ನು ತೆಗೆದುಕೊಂಡರೂ ತೀರಾ ಬೇಜವಾಬ್ದಾರಿಯದ್ದಾಗಿತ್ತು. ಕಾಂಗ್ರೆಸ್ ಪಕ್ಷದ ಸಭೆಯಲ್ಲೂ ಕೆಲವಾದರೂ ಶಾಸಕರು ಈ ನಡೆಯ ಕಾನೂನುಬದ್ಧತೆ ಮತ್ತು ರಾಜಕೀಯ ಅಪಾಯಗಳ ಬಗ್ಗೆ ಎಚ್ಚರಿಸಿದರೂ, ಕೊನೆಗೂ ಅದನ್ನು ಮಂಡಿಸಿ 78ಕ್ಕೂ ಹೆಚ್ಚು ಶಾಸಕರ ಬೆಂಬಲದಿಂದ ಸದನದಲ್ಲಿ ಗೊಂದಲದ ನಡುವೆ ಮಂಡಿಸಲಾಯಿತು. ವಿರೋಧ ಪಕ್ಷಗಳು ಸಚಿವ ಆಂಜನೇಯ ರಾಜೀನಾಮೆ ಒತ್ತಾಯಿಸಿ ಧರಣಿ ನಡೆಸುತ್ತಿದ್ದಾಗ ಪಾಸು ಮಾಡಲಾಯಿತು.ಸ್ಪೀಕರ್ ಕಾಗೋಡು ತಿಮ್ಮಪ್ಪಅವರು ಆಪಾದನೆಗಳ ಬಗ್ಗೆ ಹೆಚ್ಚಿನ ಮಾಹಿತಿ ತರಿಸಿಕೊಂಡು ಪರಿಶೀಲಿಸಿ ಆ ಮೇಲೆ ಹೈಕೋರ್ಟು ನ್ಯಾಯಮೂರ್ತಿಗೆ ಕಳಿಸುವುದಾಗಿ ಹೇಳಿದ್ದರು. ತಾಂತ್ರಿಕವಾಗಿ ನಿರ್ಣಯ ಇನ್ನೂ ವಿಧಾನಸಭೆ ಸ್ಪೀಕರ್ ಕಾಗೋಡು ತಿಮ್ಮಪ್ಪ ಅವರ ಕೈಯಲ್ಲೇಇದೆ.

ಈ ನಡುವೆ ಸದನದಲ್ಲಿ ಪದಚ್ಯುತಿ ನಿರ್ಣಯ ಮಂಜೂರಾದ ನಂತರ ಉಪಲೋಕಾಯುಕ್ತ ನ್ಯಾ. ಅಡಿ ಅವರು ಕಾರ್ಯನಿರ್ವಹಿಸಬಹುದೇ ಎಂಬ ಪ್ರಶ್ನೆ ಎದುರಾಯಿತು. ನ್ಯಾ. ಅಡಿ ಅವರು ಈ ಬಗ್ಗೆ ಹೈಕೋರ್ಟಿನ ಸ್ಪಷ್ಟನೆ ಕೇಳಿದರು. ಅಡ್ವೋಕೇಟ್ ಜನರಲ್ ಕಾರ್ಯನಿರ್ವಹಣೆ ಮುಂದುವರೆಸಬಹುದು ಎಂದು ಹೈಕೋರ್ಟಿಗೆ ತಿಳಿಸಿದರೆ, ಕಾನೂನು ಮಂತ್ರಿ ವಿರುದ್ಧ ಹೇಳಿಕೆ ನೀಡಿದರು. ಅದೇ ದಿನ ಸಂಜೆ ಕಾನೂನು ಮಂತ್ರಿ ನಿಲುವು ಬದಲಿಸಿ 'ಪದಚ್ಯುತಿ ನಿರ್ಣಯ ಮಂಡನೆಯಾಗಿದೆ ಅಷ್ಟೆ, ಸ್ಪೀಕರ್ ಅದನ್ನುಇನ್ನೂ ಒಪ್ಪಿಕೊಂಡಿಲ್ಲ. ಆದ್ದರಿಂದ ನ್ಯಾ. ಅಡಿ ಕಾರ್ಯ ನಿರ್ವಹಿಸಬಹುದು' ಎಂದರು. ಈ ನಡುವೆ ಸ್ಪೀಕರ್ ನಿರ್ಣಯ ಅಂಗೀಕಾರ ಆಗಿದೆ ಎಂದು ಹೇಳಿದನ್ನು ನಾವೇ ಕೇಳಿದ್ದೇವೆ ಎಂದು ಆ ಬಗ್ಗೆ ದಾಖಲೆ ಇದೆಎಂದು ಹೇಳಿ ವಿರೋಧ ಪಕ್ಷದ ನಾಯಕ ಸುರೇಶ್‌ಕುಮಾರ್ ವಿವಾದಕ್ಕೆ ಇನ್ನೊಂದು ಆಯಾಮ ಕೊಟ್ಟರು. ಆದರೆ ವೆಬ್ ಸೈಟಿನಲ್ಲಿ ಇರುವ ದಾಖಲೆಯಲ್ಲಿ ಸ್ಪೀಕರ್ ಮಾಹಿತಿ ತರಿಸಿಕೊಂಡು ಅಂತಿಮ ನಿರ್ಣಯ ಕೈಗೊಳ್ಳುವುದಾಗಿ ಇದೆ ಎಂದು ಸ್ಪಷ್ಟೀಕರಣ ನೀಡಲಾಗಿದೆ. ಆದರೆ ಸ್ಪೀಕರ್ ಅವರ ಕಾರ್ಯದರ್ಶಿ ಲೋಕಾಯುಕ್ತ ಹಂಗಾಮಿ ರಿಜಿಸ್ಟ್ರಾರ್ ಅವರಿಗೆ ಪತ್ರ ಬರೆದು ನ್ಯಾ. ಅಡಿ ಕಾರ್ಯ ನಿರ್ವಹಿಸುವಂತಿಲ್ಲ ಎಂದು ಪತ್ರ ಬರೆದಿದ್ದರು ಎಂಬುದು ಈ ವಿವಾದದ ಇನ್ನೊಂದು ಗೊಂದಲಕಾರಿ ಸಂಗತಿ.

ಆದರೆ ಮೊದಲಿನಿಂದಲೂ ಸ್ಪೀಕರ್ ಈ ವಿಚಾರದಲ್ಲಿ ಸರಕಾರದ ಒತ್ತಡ ಇದ್ದಾಗ್ಯೂ ಎಚ್ಚರಿಕೆಯ ಹೆಜ್ಜೆಗಳನ್ನಿಡುತ್ತಾ ಬಂದಿದ್ದು ಈಗ ಸರಕಾರ ಮತ್ತು ಸದನವನ್ನು ತಾವು ಇನ್ನೂ ನಿರ್ಣಯವನು ಒಪ್ಪಿಕೊಂಡಿಲ್ಲ ಎನ್ನುವ ಮೂಲಕ ಇನ್ನಷ್ಟು ಮುಜುಗರದಿಂದ ಪಾರು ಮಾಡಿದ್ದಾರೆ. ಸಾಕಷ್ಟು ಸಮರ್ಥನೀಯ ಸಾಕ್ಷ್ಯಾಧಾರಗಳು ಇಲ್ಲದಿರುವುದರಿಂದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಿಗೆ ನಿರ್ಣಯ ಕಳಿಸುವುದು ಬೇಡ ಎಂಬ ಕಾನೂನು ಸಲಹೆ ಬಂದಿದೆ. ಹೈಕೋರ್ಟಿನ ಎದುರು ಮುಖಭಂಗ ಆಗುವುದು ಬೇಡ ಎಂಬ ಕಾರಣಕ್ಕಾಗಿ ನ್ಯಾ. ಅಡಿ ಅವರ ಪದಚ್ಯುತಿ ನಡೆಯನ್ನು ಸರಕಾರ ಮುಂದುವರೆಸುವುದಿಲ್ಲ. ಸರಕಾರ ಯೂ–ಟರ್ನ್ ಹೊಡೆದಿದೆ ಎಂದು ಹೇಳಲಾಗಿದೆ.

ಕೆಲವು ಮಂತ್ರಿಗಳ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಒತ್ತಡದಿಂದ ನ್ಯಾ. ಅಡಿ ಅವರ ವಿರುದ್ಧ ಪದಚ್ಯುತಿ ಮಾಡುವ ಬೇಜವಾಬ್ದಾರ ನಿರ್ಣಯ ತೆಗೆದುಕೊಳ್ಳಲಾಗಿತ್ತು. ಅದನ್ನು ಮುಂದಕ್ಕೆ ನಿರ್ವಹಿಸಿದ ರೀತಿಯಂತೂ ತೀರಾ ಹುಚ್ಚಾಟದ್ದಾಗಿತ್ತು. ಸರಕಾರ ಮತ್ತು ಕಾಂಗ್ರೆಸ್ ತನಗೆ ಭ್ರಷ್ಟಾಚಾರ ನಿಗ್ರಹದ ಬಗ್ಗೆ ಮತ್ತು ಲೋಕಾಯುಕ್ತ ಸಂಸ್ಥೆ ಬಗ್ಗೆ ಎಳ್ಳಷ್ಟು ಕಾಳಜಿ ಇಲ್ಲ ಎಂದು ಜಗಜ್ಜಾಹೀರು ಮಾಡಿದೆ. ಲೋಕಾಯುಕ್ತ ನ್ಯಾ. ಭಾಸ್ಕರರಾವ್ ಅವರ ರಾಜೀನಾಮೆ/ಪದಚ್ಯುತಿಗೆ ಮಾಡಿದ ವಿಳಂಬ, ಉಪಲೋಕಾಯುಕ್ತ ನ್ಯಾ. ಅಡಿ ಅವರ ಪದಚ್ಯುತಿಗೆ ನಡೆಸಿದ ಈ ಹುಚ್ಚಾಟ, ಕಾಂಗ್ರೆಸ್ ಸರಕಾರ ಲೋಕಾಯುಕ್ತ ಸಂಸ್ಥೆಯನ್ನು ಬುಡಮೇಲು ಮಾಡಲು ಹೊರಟಿದೆ ಎಂಬ ಗುಮಾನಿ ಹರಡಿದೆ. ಈ ಹುಚ್ಚಾಟವನ್ನು ನಿಲ್ಲಿಸಬೇಕು. ಆದಷ್ಟು ಬೇಗ ಹೊಸ ಲೋಕಾಯುಕ್ತರನ್ನು ನೇಮಿಸಿ ರಾಜ್ಯದ ಹೆಮ್ಮೆಯ ಈ ಸಂಸ್ಥೆಯನ್ನು ಕೆಲಸ ಮಾಡಲು ಬಿಡಬೇಕು. ಅದನ್ನು ಇನ್ನಷ್ಟು ಗಟ್ಟಿಗೊಳಿಸುವ ಕ್ರಮ ಕೈಗೊಳ್ಳಬೇಕು. ಸರಕಾರದ ಇಂತಹ ಬೇಜವಾಬ್ದಾರ ನಡೆಗಳ ಬಗ್ಗೆ ಜನತೆ ತೀವ್ರವಾಗಿ ಪ್ರತಿಭಟಿಸಬೇಕು. ಈ ಬಗ್ಗೆ ಸರಕಾರ ಉತ್ತರಿಸುವಂತೆ ಒತ್ತಾಯಿಸಬೇಕು.

ದಲಿತರು ಸಬಲರಾಗದೇ ದೇಶ ಸೂಪರ್ ಪವರ್ ಆಗಲು ಸಾಧ್ಯವೇ ಇಲ್ಲ.– ಬಿ.ವಿ. ರಾಘವುಲು.

ದೇಶ ಇಂದು ಸೂಪರ್ ಪವರ್ ಆಗಲಿದೆ ಎಂದು ಹೇಳಲಾಗುತ್ತಿದೆ. ಅಮೆರಿಕದಲ್ಲಿ ಶ್ರಮಕ್ಕೆ ಒಂದಷ್ಟು ಗೌರವವಿದೆ. ಚೀನಾದಲ್ಲಿಯೂ ಶ್ರಮಕ್ಕೆ ಗೌರವ ಇದೆ. ಆದರೆ ಭಾರತದಲ್ಲಿ ದಲಿತರ ಮೇಲೆ ನಿರಂತರವಾಗಿ ದೌರ್ಜನ್ಯಗಳು ನಡೆಯುತ್ತಿದೆ. ಇಲ್ಲಿ ಶ್ರಮಕ್ಕೆ ಗೌರವವಿಲ್ಲ. ದಲಿತರ ಶ್ರಮಕ್ಕೆ ಸೂಕ್ತ ಪ್ರತಿಫಲ ಕೊಡದೇ ವಂಚಿಸಲಾಗುತ್ತಿದೆ. ದಲಿತರು ಸಬಲರಾಗದೇ ದೇಶ ಸೂಪರ್ ಪವರ್ ಆಗಲು ಸಾಧ್ಯವೇ ಇಲ್ಲ ಎಂದು ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯುರೋ ಸದಸ್ಯರು ಹಾಗು ಆಂಧ್ರ ಪ್ರದೇಶದ ಪ್ರಬಲ ಅಸ್ಪೃಶ್ಯತಾ ವಿರೋಧಿ ಆಂದೋಲನದ ಮುಖಂಡರಾದ ಬಿ.ವಿ. ರಾಘವುಲು ಅವರು ಹೇಳಿದರು.

ಹೆಚ್ಚುತ್ತಿರುವ ದಲಿತರ ಮೇಲಿನ ಜಾತಿ ದೌರ್ಜನ್ಯ, ಅಸ್ಪೃಶ್ಯತೆ ಮತ್ತು ಸಾಮಾಜಿಕ ನ್ಯಾಯ–ಕ್ಕೆ ವಿರುದ್ಧವಾದ ಜಾಗತೀಕರಣ ನೀತಿಗಳನ್ನು ವಿರೋಧಿಸಿ ಮತ್ತು ದಲಿತರ ಹಕ್ಕುಗಳ ಸಂರಕ್ಷಣೆಗಾಗಿ, ಖಾಸಗಿ ರಂಗದಲ್ಲಿ ಮೀಸಲಾತಿ ಇತ್ಯಾದಿಗಳಿಗಾಗಿ 'ದಲಿತ ಹಕ್ಕುಗಳ ಸಮಿತಿ–ಕರ್ನಾಟಕ' ನೇತೃತ್ವದಲ್ಲಿಂದು ಇಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನ,(ಫ್ರೀಡಂ ಪಾರ್ಕ್)ನಲ್ಲಿನಡೆದ ಬೃಹತ್ ರ್‍ಯಾಲಿಯನ್ನು ಉದ್ಘಾಟಿಸಿ ಜನರನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ರಾಘವುಲು ಅವರು ಬಾಬಾ ಸಾಹೇಬ್ ಅಂಬೆಡ್ಕರ್ ಅವರ 125 ನೇ ಜನ್ಮ ಶತಮಾನೋತ್ಸದ ಸಂದರ್ಭದಲ್ಲಿ ಚಳಿಗಾಲದಲ್ಲಿ ಸಂಸತ್ತಿನಲ್ಲಿ ಎರಡು ದಿನಗಳ ವಿಶೇಷ ಅಧಿವೇಶನ ನಡೆಸಲಾಯಿತು. ಪಾರ್ಲಿಮೆಂಟಿನ ಈ ಚರ್ಚೆಯಲ್ಲಿ ದಲಿತ ಸಮುದಾಯ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಿಗೆ ಪರಿಹಾರ ರೂಪುಗೊಳ್ಳುವುದೆಂದು ನಿರೀಕ್ಷಿಲಾಗಿತ್ತು. ಆದರೆ ಪಾರ್ಲಿಮೆಂಟ್ ಚರ್ಚೆಯಲ್ಲಿ ಅಂತಹ ಪರಿಹಾರಗಳೇನೂ ರೂಪುಗೊಳ್ಳಲಿಲ್ಲ. ಪರಿಶಿಷ್ಟ ಜಾತಿ–ಪಂಗಡಗಳ ಮೇಲಿನ ದೌರ್ಜನ್ಯ (ನಿವಾರಣಾ)ಕಾಯ್ದೆಗೆ ತಿದ್ದುಪಡಿ ತಂದು ಅದನ್ನು ಉತ್ತಮಪಡಿಸಬೇಕೆಂದು ಒತ್ತಾಯಿಸಲಾಗುತ್ತಿದ್ದರೂ ಆ ಕೆಲಸವೂ ಆಗಲಿಲ್ಲ. ಸ್ವಾತಂತ್ರ್ಯ ಬಂದು 68 ವರ್ಷವಾದರೂ ದಲಿತರ ಮೇಲೆ ನಿರಂತಂತರ ದೌರ್ಜನ್ಯಗಳು ನಡೆಯುತ್ತಿವೆ. ಕಳೆದ 7 ದಶಕಗಳ ಅನುಭವ ಎಂದರೆ ಕಾಯ್ದೆ ತುಂಬಾ ದುರ್ಬಲವಾಗಿರುವುದರಿಂದ ದಲಿತರಿಗೆ ನ್ಯಾಯ ಸಿಗುತ್ತಿಲ್ಲ. ಈ ಕಾಯ್ದೆಗೆ ತಿದ್ದುಪಡಿ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಲಾಗಿದೆ. ದಲಿತಪರ ಚಳುವಳಿ, ಸಂಘಟನೆಗಳು ಈ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಬೇಕೆಂದು ಒತ್ತಾಯಿಸುತ್ತಿವೆ. ಆದರೆ ಈಗಿನ ಕೇಂದ್ರ ಸರಕಾರ ಈ ವಿಷಯದ ಬಗೆಗೆ ಆಸಕ್ತಿವಹಿಸುತ್ತಿಲ್ಲ.

ರಾಜಸ್ತಾನದ ಒಂದು ಗ್ರಾಮದಲ್ಲಿ ಮೇಲ್ಜಾತಿಯ ಹುಡುಗಿ ದಲಿತ ಹುಡುಗ ಪ್ರೀತಿಸಿದ್ದಾರೆ. ಈ ಪ್ರಕರಣದಲ್ಲಿ ದಲಿತ ಯುವಕನ ಕೊಲೆ ಮಾಡಲಾಯಿತು. ಆದರೆ ಪೋಲಿಸರು ಕೊಲೆ ಪ್ರಕರಣವನ್ನು ದಾಖಲಿಸಲು ಕೂಡ ನಿರಾಕರಿಸುವ ಪರಿಸ್ಥಿತಿ ಇದೆ. ಬಾಬಾಸಾಹೇಬರು ಕೊಟ್ಟ ಸಂವಿಧಾನದಲ್ಲಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡಿದ–ರೆ ಮಾತ್ರ ದಲಿತರು ಅಭಿವೃದ್ಧಿ ಹೊಂದಲು ಸಾ ಧ್ಯ ಎಂದು ಅದರಲ್ಲಿ ಇದೆ. ಆದರೆ ಈ ನೀತಿಯು ಸಮರ್ಪವಾಗಿ ಜಾರಿಗೆ ಬರುತ್ತಿಲ್ಲ. ಜಾಗತೀಕರಣ, ಖಾಸಗೀಕರಣ ನೀತಿಗಳು ತೀವ್ರಗೊಂಡಿರುವುದರಿಂದ ಸಾರ್ವಜನಿಕ ವಲಯದಲ್ಲಿ ಉದ್ಯೋಗಾವಕಾಶವು ಕಡಿಮೆಯಾಗುತ್ತಿದೆ. ಖಾಸಗೀಕರಣ ರಂಗದಲ್ಲಿ ಮೀಸಲಾತಿ ನೀಡುವುದಾಗಿ ಬಿಜೆಪಿ, ಕಾಂಗ್ರೆಸ್ ಎರಡೂ ಪಕ್ಷಗಳು ಹೇಳಿವೆ. ಆದ–ರೆ ಬಿಜೆಪಿ ಆ ಬಗೆಗೆ ಯಾವ ಗಮನವನ್ನೂ ನೀಡುತ್ತಿಲ್ಲ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗಲೂ ಈ ಕೆಲಸ ಮಾಡಲಿಲ್ಲ ಎಂದೂ ಅವರು ಹೇಳಿದರು.



ಪರಿಶಿಷ್ಟರ ವಿಶೇಷ ಘಟಕ ಯೋಜನೆ ಪ್ರಕಾರ ದಲಿತರ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ 23 ಶೇ. ಹಣವು ದಲಿತ ಸಬಲೀಕರಣಕ್ಕೆ ಬಳಕೆಯಾಗಬೇಕು. ಆದರೆ ಇಂದು ಶೇ. 4 ರಷ್ಟು ಮಾತ್ರ ಹಣವನ್ನು ನೀಡಲಾಗುತ್ತಿದೆ. ಆ ಹಣದಲ್ಲಿಯೂ ಇತ–ರೆ ಸಾರ್ವಜನಿಕ ಕೆಲಸಗಳಿಗೆ ಬಳಸುವುದನ್ನು, ದುರುಪಯೋಗ ಮಾಡುವುದನ್ನು ದೇಶದಲ್ಲಿ ನೋಡುತ್ತಿದ್ದೇವೆ. ಆಂಧ್ರದಲ್ಲಿ ಒಂದೆಡೆ ಸಾರ್ವಜನಿಕ ಪಾರ್ಕಿನಲ್ಲಿ ಕುರ್ಚಿಗಳನ್ನು ಅಳವಡಿಸಿ ಅಲ್ಲಿ ದಲಿತರು, ಇತರರು ಎಲ್ಲರೂ ಕುರ್ಚಿ ಬಳಸುತ್ತಾರೆ ಆದ್ದರಿಂದ ಇದು ದಲಿತ ಸಬಲೀಕರಣದ ಕೆಲಸ ಎಂದು ವಾದಿಸಲಾಗುತ್ತಿದೆ. ಆದರೆ ದಲಿತರ ಸಬಲೀಕರಣಕ್ಕೆ ಸಿಗಬೇಕಾದ ಹಣ ಅದೇ ಉದ್ದೇಶಕ್ಕೆ ಬಳಕೆಯಾಗಬೆಕೆಂದು ಹೋರಾಟ ನಡೆಸಬೇಕಿದೆ. ದಲಿತರ ಅಭಿವೃದ್ದಿಗೆ ಶಿಕ್ಷಣ ಮತ್ತು ಭೂಮಿ ಬಹಳ ಮುಖ್ಯ ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹೇಳಿದ್ದಾರೆ.

ಸರಕಾರಿ ಶಾಲಾ ಕಾಲೇಜುಗಳನ್ನು ಮುಚ್ಚಲು, ಶಿಕ್ಷಣ ರಂಗವನ್ನು ಖಾಸಗಿಕರಣ ಮಾಡಲು ಪ್ರಯತ್ನಿಸಲಾಗುತ್ತಿದೆ. ಭೂಮಿ ಹಂಚಿಕೆಯಲ್ಲಿ ತುಂಬಾ ಅಸಮಾನತೆ ಇದೆ. ಬಹುತೇಕ ದಲಿತರು ಭೂಹೀನರಾಗಿದ್ದಾರೆ. ಸಿ.ಪಿ. ಅಲೆಕ್ಸಾಂಡರ್ ಸಮಿತಿ ದೇಶದಲ್ಲಿ ಸಾಕಷ್ಟು ಭೂಮಿ ಇದೆ. ಅದನ್ನು ದಲಿತರಿಗೆ ಹಂಚಿ ಕೊಡಬೇಕೆಂದು ವರದಿ ನೀಡಿದೆ. ಆದರೆ ಭೂಸುದಾರಣೆಯ ನೀತಿಗಳು ಜಾರಿಗೆ ಬರುತ್ತಿಲ್ಲ ಎಂದು ರಾಘವುಲು ಅವರು ಹೇಳಿದರು.

ಕೇಂದ್ರದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ಮೇಲೆ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚಾಗಿವೆ – ಜಿ.ವಿ.ಶ್ರೀರಾಮರೆಡ್ಡಿ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳಾದ ಜಿ.ವಿ.ಶ್ರೀರಾಮರೆಡ್ಡಿಯರು ಈ ಸಂದರ್ಭದಲ್ಲಿ ಮಾತನಾಡಿ ಕೇಂದ್ರದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ಮೇಲೆ ದೌರ್ಜನ್ಯಗಳು ಹೆಚ್ಚಾಗಿವೆ. ಕರ್ನಾಟಕದಲ್ಲಿ ಸಿದ್ದರಮಯ್ಯನವರ ಸರಕಾರದ ಅಡಿಯಲ್ಲಿಯೂ ದಲಿತರ ಮೇಲೆ ಅವ್ಯಾಹತವಾದ ದಬ್ಬಾಳಿಕೆ ಮತ್ತು ದೌರ್ಜನ್ಯಗಳು ನಡೆಯುತ್ತಿವೆ. ದಲಿತರ ಎಲ್ಲ ಮೂಲಭೂತ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ. ಕುಡಿಯುವ ನೀರು, ಶಿಕ್ಷಣ, ದೇವಸ್ಥಾನ ಪ್ರವೇಶದ ಅವಕಾಶದ ಎಲ್ಲ ವಿಷಯಗಲ್ಲಿಯೂ ತಾರತಮ್ಯದ ಸ್ಥಿತಿ ಇದೆ.

ಹರ್ಯಾಣದಲ್ಲಿ ಮೂರು ದಿವಸದ ದಲಿತ ಮಕ್ಕಳನ್ನು ಬೆಂಕಿಗೆ ಹಾಕಿ ಸುಡಲಾಯಿತು. ಉತ್ತರ ಪ್ರದೇಶದಲ್ಲಿ ಅಂತರ ಜಾತಿಯ ಮದುವೆ ಆಗಿದ್ದಕ್ಕಾಗಿ ಮೂವರು ಯುವತಿಯವರನ್ನು ಪೋಲಿಸ್ ಠಾಣೆಯಲ್ಲಿ ಬೆತ್ತಲೆಯಾಗಿ ನಿಲ್ಲಿಸಿ ಹಿಂಸಿಸಲಾಯಿತು.

ಕರ್ನಾಟಕದಲ್ಲಿ ಯುವಕವಿ ಉಚ್ಚಂಗಿ ಪ್ರಸಾದ್ ದಲಿತರ ನೋವಿನ ಬಗೆಗೆ ಕವನ ಬರೆದದ್ದೇ ಕಾರಣವಾಗಿ ಅವರ ತಲೆ ಕಡಿಯಲು ಜಾತಿವಾದಿ ಕೊಮುವಾದಿಗಳು ಯತ್ನಿಸಿದರು. ಏಟು ಗುರಿ ತಪ್ಪಿ ಕೈಗೆ ಏಟು ಬಿದ್ದಿದೆ. ಸಿದ್ದರಾಮಯ್ಯ ಸರಕಾರದಲ್ಲಿ ಮರುಕುಂಬಿಯಲ್ಲಿ ದಲಿತರ ಮೇಲಿನ ದೌರ್ಜನ್ಯಗಳಿಗೆ ಪ್ರಯೋಗಶಾಲೆಯಾಗಿದೆ. ದಲಿತರ ಮನೆಗಳಿಗೆ ಬೆಂಕಿ ಹಚ್ಚಲಾಯಿತು. ಬೆದರಿದ ದಲಿತರಿಗೆ ಪೋಲೀಸ್ ರಕ್ಷಣೆ ಸಿಗಲಿಲ್ಲ. ಪೋಲೀಸರಿಗೆ ದಲಿತರ ಮೇಲೆ ದೌರ್ಜನ್ಯ ನಡೆಸಿದವರ ಮನೆಗಳಲ್ಲೇ ಊಟ ವ್ಯವಸ್ಥೆ ಮಾಡಲಾಗುತ್ತಿತ್ತು. ದೌರ್ಜನ್ಯದ ಸಾಕ್ಷಿಯಾಗಿದ್ದ ದಲಿತ ವಿರೇಶ್ ಅವರನ್ನು ಜಾತಿವಾದಿಗಳು ಕೊಲೆಗೈದು ರೈಲ್ವೆ ಹಳಿಗಳ ಮೇಲೆ ಎಸೆದರು. ಈ ಪ್ರಕರಣದಲ್ಲಿ ಅಪರಾಧಿಗಳನ್ನು ಪತ್ತೆ ಹಚ್ಚುವ ಕೆಲಸ ಆಗಿಲ್ಲ. ಕೊಪ್ಪಳದಲ್ಲಿ ಜಿಲ್ಲಾ ಪಂಚಾಯ್ತಿಯ ಭ್ರಷ್ಟಾಚಾರದ ಬಗೆಗೆ ಮಾತನಾಡಿದ ದಲಿತ ಯಲ್ಲಾಲಿಂಗನ ಕೊಲೆಯಾಯಿತು. ಈ ಪ್ರಕರಣದಲಿಯೂ ನ್ಯಾಯ ಸಿಗಲಿಲ್ಲ. ಮಾಜಿ ಪ್ರದ–ಾನಿ ದೇವೇಗೌಡರ ಊರಿನ ಸಮೀಪದ ಸಿಗರನ ಹಳ್ಳಿಯಲ್ಲಿ ದಲಿತ ಮಹಿಳೆಯರು ದೇವಸ್ಥಾನ ಪ್ರವೇಶಿಸಿದ್ದಕ್ಕಾಗಿ ಅವರಿಗೆ ಬಹಿಷ್ಕಾರ ಹಾಕಲಾಗಿದೆ. ಈ ಪ್ರಕರಣವನ್ನು ವರದಿ ಮಾಡಿದ ದಲಿತ ವರದಿಗಾರರನ್ನು ದೇವೇಗೌಡರ ಪ್ರಭಾವದಿಂದ ಕೊಪ್ಪಳಕ್ಕೆ ವರ್ಗಾವಣೆ ಮಾಡಲಾಗಿದೆ. ಜಿಲ್ಲಾಡಳಿತ ಸಿಗರನ ಹಳ್ಳಿ ದಲಿತರಿಗೆ ರಕ್ಷಣೆ ನೀಡುವ ಬದಲು ದೌರ್ಜನ್ಯಕೋರರ ಪರ ಇದೆ. ಪ್ರತಿಭಟನಾಕಾರರನ್ನು ಬಂಧಿಸಲಾಗಿದೆ ಎಂದರು.

ಸಮಾಜ ಕಲ್ಯಾಣ ಸಚಿವರಿಗೆ ಮನವಿ

ರಾಜ್ಯದ ಸಮಾಜ ಕಲ್ಯಾಣ ಸಚಿವರಾದ ಆಂಜನೇಯ ಅವರು ಬಹಿರಂಗ ಸಭೆಗೆ ಭೇಟಿ ನೀಡಿದ್ದರು. ದಲಿತ ಹಕ್ಕು ಸಮಿತಿ ಪರವಾಗಿ ಮುಖ್ಯಮಂತ್ರಿಗಳಿಗೆ ನೀಡಲಾದ ಮನವಿಯನ್ನು ಸ್ವೀಕರಿಸಿದರು. ಮತ್ತು ಸಮಸ್ಯೆಗಳು ಮತ್ತು ಚಳುವಳಿಯ ಬೇಡಿಕೆ ಈಡೇರಿಸಲು ಸಭೆಯನ್ನು ಕರೆದು ಸಕಾರಾತ್ಮಕವಾಗಿ ಸ್ಪಂದಿಸಲಾಗುವುದು ಎಂದು ಅವರು ಭರವಸೆ ನೀಡಿದರು. ಕರ್ನಾಟಕ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಮುಖಂಡರಾದ ಡಿ. ಶಿವಶಂಕರ್, ಪ್ರೊ. ಬಿ.ಎಸ್. ಚಂದ್ರಶೇಖರ್, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಪ್ರದಾನ ಕಾರ್ಯದರ್ಶಿ ರೇಣುಕ ಅವರು ಈ ಸಂದರ್ಭದಲ್ಲಿ ಮಾತನಾಡಿದರು.

ವಿವಿಧ ಜನಚಳುವಳಿಗಳ ನಾಯಕರಾದ ನಿತ್ಯಾನಂದಸ್ವಾಮಿ, ಮಾರುತಿ ಮಾನ್ಪಡೆ, ಯು. ಬಸವರಾಜು, ಎಸ್. ವರಲಕ್ಷ್ಮಿ, ಮೀನಾಕ್ಷಿ ಸುಂದರಂ, ಕೆ.ಎನ್. ಉಮೇಶ್, ಮಾಳಮ್ಮ ಮುಂತಾದವರು ವೇದಿಕೆಯಲ್ಲಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗೋಪಾಲಕೃಷ್ಣ ಅರಳಹಳ್ಳಿಯವರು ವಹಿಸಿದ್ದರು. ಕಾರ್ಯಕ್ರಮದ ನಿರ್ವಹಣೆಯನ್ನು ಬಿ. ರಾಜಶೇಖರ ಮೂರ್ತಿ ಮಾಡಿದರು. ಆರಂಭದಲ್ಲಿ ಸ್ವಾಗತವನ್ನು ಎನ್. ನಾಗರಾಜ್ ನೆರವೇರಿಸಿದರು. ಚಂದ್ರಶೇಖರ್.ಜಿ. ವಂದನಾರ್ಪಣೆ ಸಲ್ಲಿಸಿದರು.

ವಿವಿಧ ಜನ ಚಳುವಳಿಗಳ ಮುಖಂಡರಾದ ಮಾರುತಿ ಮಾನ್ಪಡೆ, ಚಂದ್ರಪ್ಪ ಹೊಸ್ಕೆರಾ, ಅಂಬರೀಶ್., ಕೆ. ಮಹಾಂತೇಶ್, ಮಹದೇಶ್, ನಾಗರಾಜ್, ಕೃಷ್ಣ, ಜಂಜಯ್ಯ ನಾಯಕ್, ನಾಗರಾಜ ಗಂಗಾವತಿ ಮುಂತಾದವರು ವೇದಿಕೆಯಲ್ಲಿದ್ದರು.

ಈ ರ್‍ಯಾಲಿಗೆ ಪೂರಕವಾಗಿ ಕೊಪ್ಪಳ ಜಿಲ್ಲೆ ಗಂಗಾವತಿಯ ಮರುಕುಂಬಿ, ಚಾಮರಾಜನಗರ, ಚಿಕ್ಕಬಳ್ಳಾಪುರ ಕಾಲ್ನಡಿಗೆ ಜಾಥಾಗಳು ಹಾಗೂ ಬೆಳ್ತಂಗಡಿಯಿಂದ ವಾಹನ ಜಾಥಾಗಳು ಮಾರ್ಗ ಮಧ್ಯೆ ಜನಜಾಗೃತಿ ಸಭೆಗಳನ್ನು ನಡೆಸಿಕೊಂಡು ಬೆಂಗಳೂರು ತಲುಪಿದ್ದವು. ಬೆಳಿಗ್ಗೆ ನಗರದ ರೈಲ್ವೆ ನಿಲ್ದಾಣದಿಂದ ಸ್ವಾಂತಂತ್ರ್ಯ ಉದ್ಯಾನದವರೆಗೆ ಮೆರವಣಿಗೆಯನ್ನು ನಡೆಸಲಾಯಿತು.

ಮರುಕುಂಬಿಯ ಕೊಲೆಯಾದ ದಲಿತ ವಿರೇಶಪ್ಪನ ಮಗ ಯಮುನಪ್ಪ, ತಲೆಕಡಿದು ಕೊಲೆಗೈಯ್ಯಲಾದ ದಲಿತಕೂಲಿಕಾರರ ಕುಟುಂಬದವರಾದ ಮಂಡ್ಯ ಜಿಲ್ಲೆ ದೇಶವಳ್ಳಿಯ ಕೃಷ್ಣಯ್ಯ ಅವರ ಮಡದಿ ಮಕ್ಕಳು, ಕಾವುದವಾಡಿಯ ನಂಜಯ್ಯ ಅವರ ಮಡದಿ, ಮಕ್ಕಳು ಸಹ ಬಹಿರಂಗ ಸಭೆಯ ವೇದಿಕೆಯಲ್ಲಿದ್ದರು.

ಚಿಕ್ಕಬಳ್ಳಾಪುರ ಜಾಥಾದ ಮುಂಖಂಡರಾದ ನಾಗರಾಜ ಬಾಗೇಪಲ್ಲಿ, ಚಾಮರಾಜನಗರ ಜಾತಾದ ಪಾರ್ವತಮ್ಮ, ಮರುಕುಂಬಿಯಿಂದ ರಿಂದ ಪಾದಯಾತ್ರೆಯಲ್ಲಿ ಬಂದ ತಂಡದ ಮುಖಂಡರಾದ ಬಸವರಾಜ, ಬೆಳ್ತಂಗಡಿ ಜಾಥಾದ ಮುಖಂಡರಾದ ವಿಠಲ ಮಲೆಕುಡಿಯ ಸಹ ವೇದಿಕೆಯಲ್ಲಿದ್ದರು. ದಲಿತರ ಮೇಲಿನ ದೌರ್ಜನ್ಯಗಳ ತಡೆಗಾಗಿ ಒತ್ತಾಯಿಸಿ 'ಪರಿಶಿಷ್ಟ ಜಾತಿಗಳ ಮೇಲಿನ ದೌರ್ಜನ್ಯ(ತಡೆ)ಕಾಯ್ದೆ–1989–ಕ್ಕೆ ತಿದ್ದುಪಡಿ ತಂದು ಕಾಯ್ದೆಯನ್ನು ಬಲಪಡಿಸುವುದು ಸೇರಿದಂತೆ ಹಲವು ಕ್ರಮಗಳನ್ನು ಒತ್ತಾಯಿಸುವ ನಿರ್ಣಯವನ್ನು ಕೆ. ಮಹಾಂತೇಶ್ ಅವರು ಸಭೆಯ ಮುಂದೆ ಮಂಡಿಸಿದರು. ಬಹಿರಂಗ ಸಭೆಯು ಒಕ್ಕೊರಲಿನಿಂದ ಈ ನಿರ್ಣಯವನ್ನು ಬೆಂಬಲಿಸಿತು.



ಎಡಪಕ್ಷಗಳ ಪ್ರಚಾರಾಂದೋಲನ

ಕೋಮುವಾದವನ್ನು ಎದುರಿಸುವ ಜವಾಬ್ದಾರಿ ಎಡಪಕ್ಷಗಳದ್ದು - ಜಿ.ವಿ. ಶ್ರೀರಾಮರೆಡ್ಡಿ

ಸ್ವಾತಂತ್ರ್ಯದ ಅನಂತರ ಮೊದಲ ಬಾರಿಗೆ 1992ರಲ್ಲಿ ಬಾಬ್ರಿ ಮಸೀದಿ ಧ್ವಂಸದಿಂದ ದೇಶ ಆತಂಕಕ್ಕೆ ಒಳಗಾಗಿದ್ದರೆ, ಇದೀಗ ನರೇಂದ್ರ ಮೋದಿ ನೇತೃತ್ವದ ಕೇಂದ್ರಾಡಳಿತ ಬಂದ ಮೇಲೆ ಎರಡನೇ ಬಾರಿಗೆ ಆತಂಕಕ್ಕೊಳಗಾಗಿದೆ. ಈಗಿನ ಪರಿಸ್ಥಿತಿ ಹಿಂದಿನದಕ್ಕಿಂತಲೂ ಗಂಭೀರವಾಗಿದೆ. ಹಿಂದೆ ಕೋಮುವಾದಿ ಶಕ್ತಿಗಳು ಅಲ್ಪಸಂಖ್ಯಾಕರ ಮೇಲೆ ಮಾತ್ರ ಆಕ್ರಮಣ ಮಾಡುತ್ತಿದ್ದರೆ, ಈಗಿನ ಆಕ್ರಮಣಗಳು ದಲಿತರ ವಿರುದ್ದವೂ ನಡೆಯುತ್ತಿದೆ. ಹಿಂದೂ ಧರ್ಮ, ಹಿಂದೂ ದೇಶ, ಹಿಂದಿ ಈ ರೀತಿಯ ಏಕ ಸಂಸ್ಕೃತಿ, ಏಕ ಬಾಷೆ, ಏಕ ಧರ್ಮದ ಸರ್ವಾಧಿಕಾರವುಳ್ಳ ವರ್ಣಾಶ್ರಮ ಧರ್ಮದ ಹಿಂದುತ್ವದ ಜಾರಿಯೇ ಆರ್‌ಎಸ್‌ಎಸ್‌ನ ಗುಪ್ತ ಅಜೆಂಡಾವಾಗಿದೆ. ಬೇರೆ ದೇಶಗಳಲ್ಲಿ ಅಲ್ಪಸಂಖ್ಯಾಕ ಭಯೋತ್ಪಾದನೆ ನಡೆಯುತ್ತಿದ್ದರೆ, ಭಾರತದಲ್ಲಿ ಬಹುಸಂಖ್ಯಾಕರ ಭಯೋತ್ಪಾದನೆ ನಡೆಯುತ್ತಿದೆ. ಇಂತಹ ಗುಪ್ತ ಕಾರ್ಯಸೂಚಿಯಿರುವ ಗುಂಪಿಗೆ ಇವತ್ತು ರಾಜಕೀಯ ಅಧಿಕಾರ ಸಿಕ್ಕಿರುವುದು ಆತಂಕ-ಕ್ಕೆ ಕಾರಣವಾಗಿದೆ ಎಂಬುದಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಹೇಳಿದರು.

ಅವರು ಮಂಗಳೂರಿನ ಡಾನ್‌ಬಾಸ್ಕೋ ಸಭಾಂಗಣದಲ್ಲಿ ಇವತ್ತು (ಡಿ. 8ರಂದು) ಸಿಪಿಐ ಮತ್ತು ಸಿಪಿಐ(ಎಂ) ಪಕ್ಷಗಳು ನಡೆಸಿದ ಕೋಮುವಾದದ ವಿರುದ್ಧ ರಾಜಕೀಯ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ದ.ಕ ಜಿಲ್ಲೆಯಲ್ಲಿ ಮುಸ್ಲಿಮರು ಹಾಗೂ ಇತರ ಅಲ್ಪಸಂಖ್ಯಾಕರ ಮೇಲೆ ನಡೆಸುತ್ತಿರುವ ದಾಳಿಗಳನ್ನು ತಾವೇ ಆಯೋಜಿಸುತ್ತಿರುವುದಾಗಿ ಆರ್‌ಎಸ್‌ಎಸ್ ಕಾರ್ಯಕರ್ತರು ಪತ್ರಿಕೆಯೊಂದು ನಡೆಸಿದ ಸ್ಟಿಂಗ್ ಆಪರೇಶನ್ ವೇಳೆ ತಿಳಿಸಿದ್ದು, ಅದು ಈಗಾಗಲೇ ಜನಜನಿತವಾಗಿದೆ. ಜಿಲ್ಲೆಯ ಪೊಲೀಸರಲ್ಲಿ 60% ಮೀರಿ ಸಂಘ ಪರಿವಾರದ ಬೆಂಬಲಿಗರಿದ್ದಾರೆ ಎಂದವರು ಅಲ್ಲಿ ಹೇಳಿಕೊಂಡಿದ್ದಾರೆ. ಹೀಗಾಗಿಯೇ ಕಳೆದ ದಶಕದಲ್ಲಿ 600ಕ್ಕೂ ಮೀರಿ ಕೋಮು ಗಲಭೆಗಳು ದ.ಕ ಜಿಲ್ಲೆಯಲ್ಲಿ ನಡೆದರೂ, ಕಲ್ಲಡ್ಕ ಪ್ರಭಾಕರ ಭಟ್ಟರ ಮೇಲೆ ಕೋಮು ಪ್ರಚೋದನೆಯ ಆರೋಪಗಳಿದ್ದರೂ ಪೊಲೀಸರು ಅವರನ್ನು ಈಗಿನ ಕಾಂಗ್ರೆಸ್ ಆಡಳಿತ ಕಾಲದಲ್ಲೂ ಬಂಧಿಸಿಲ್ಲ ಎಂದು ಅವರು ತಿಳಿಸಿದರು.

ಇಡೀ ದೇಶದಲ್ಲಿ ಕೋಮುವಾದೀಕರಣದ ಸಿದ್ಧತೆ ನಡೆಸಲಾಗುತ್ತಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಣದಲ್ಲೂ ಅದು ಮೂಡಿ ಬರಲಿದೆ. ಬರಹಗಾರ, ವಿಚಾರವಾದಿ, ಸಂಶೋಧಕರನ್ನು ಕೊಲ್ಲಲಾಗಿದೆ. ಬಂದೂಕಿನಿಂದ ಮಾತನಾಡುವವರ ಬಾಯಿಯನ್ನು ಮುಚ್ಚಿಸಲಾಗುತ್ತಿದೆ. ಪ್ರಜಾಪ್ರಭುತ್ವದ ಹಕ್ಕಾದ ಅಭಿವ್ಯಕ್ತಿಯ ಸ್ವಾತಂತ್ರ್ಯಕ್ಕೆ ಬೆದರಿ-ಕೆ ಬಂದಿದೆ. ವೈಚಾರಿಕತೆಯನ್ನು ವಿಚಾರದಿಂದ ಸೋಲಿಸುವ ಶಕ್ತಿ ಅವರಿಗಿಲ್ಲ; ಹಾಗಾಗಿ ದಾಳಿ, ಹತ್ಯೆ ನಡೆಸುತ್ತಿದ್ದಾರೆ. ಜರ್ಮನಿಯಲ್ಲಿ ಹಿಟ್ಲರ್ ಮಾಡಿದ್ದು ಇದನ್ನೇ. ಆತನ ಸಿದ್ಧಾಂತಗಳೇ ಹೆಡಗೇವಾರ್, ಸಾವರ್ಕರ್, ಗೋಲ್ವಾಲ್ಕರ್ ಅವರ ಬರಹಗಳಲ್ಲಿವೆ. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ವಿಚಾರಗಳ ಆಧಾರದಲ್ಲಿ ಮಾತನಾಡುತ್ತಾರೆ. ದಾದ್ರಿಯಲ್ಲಿ ಮುಸ್ಲಿಮರ ಮೇಲೆ ದಾಳಿ ಮಾಡಿದವರೇ ಇದೀಗ ಶುದ್ಧೀಕರಣ ಮಾಡುತ್ತಾರೆ. ಉತ್ತರ ಪ್ರದೇಶದಲ್ಲಿ ಎರಡು ಎಳೆಯ ದಲಿತ ಮಕ್ಕಳನ್ನು ಸುಟ್ಟು ಹಾಕಲಾಗಿದೆ. ಅಂತರ್ಜಾತಿ ವಿವಾಹದ ಕಾರಣಕ್ಕಾಗಿ ಮೂವರು ದಲಿತ ಮಹಿಳೆಯರನ್ನು ಠಾಣೆಯಲ್ಲಿ ಬೆತ್ತಲೆ ಮಾಡಲಾಗಿದೆ. ಮೂರು ಬುದ್ಧಿಜೀವಿಗಳ ಕೊಲೆಯಾಗಿದ್ದರೂ ಪ್ರಧಾನಿ ನರೇಂದ್ರ ಮೋದಿ ಮೌನವಾಗಿರುತ್ತಾರೆ. ವಿದೇಶಕ್ಕೆ ಹೋಗಿ ಗಾಂಧೀವಾದ ಪಠಿಸುತ್ತಾರೆ. ದೇಶದ ಒಳಗೆ ಗೋಡ್ಸೆ ಹುತಾತ್ಮ ದಿನ ನಡೆಯುತ್ತದೆ. ಪ್ರಧಾನ ಮೋದಿಯನ್ನು ಮೌನವಾಗಿಸಿದವರು ಯಾರು? ಆರ್‌ಎಸ್‌ಎಸ್ ಅಲ್ಲದೆ ಮತ್ತಾರು ಅಲ್ಲ ಎಂದು ಶ್ರೀರಾಮರೆಡ್ಡಿ ಟೀಕಿಸಿದರು.

ಕರ್ನಾಟಕದಲ್ಲಿ ತಾನು ಅಹಿಂದ ನಾಯಕ ಎನ್ನುವ ಕಾಂಗ್ರೆಸಿನ ಸಿದ್ದರಾಮಯ್ಯರವರಿಗೆ ದಲಿತ ಬರಹಗಾರ ಉಚ್ಚಂಗಿ ಪ್ರಸಾದ್ ಮೇಲಿನ ಹಲ್ಲೆಗೆ ಏನೂ ಮಾಡಲಾಗಿಲ್ಲ. ಟಿಪ್ಪು ವಿಷಯದಲ್ಲಿ ಮಡಿಕೇರಿಯಲ್ಲಿ ಗಲಭೆ ಮಾಡಿದ ಕೋಮುವಾದಿಗಳನ್ನು ನಿರ್ಬಂಧಿಸಿಲ್ಲ. ದ.ಕನ್ನಡದಲ್ಲಿ ಹಿಂದುತ್ವ ದಾಳಿಗಳನ್ನು ನಿಯಂತ್ರಿಸಲು ವಿಫಲರಾಗಿದ್ದಾರೆ ಎಂದು ಖಂಡಿಸಿದರು.

ಇವತ್ತು ಜಾತ್ಯತೀತತೆ ಅಥವಾ ಸೆಕ್ಯುಲಾರಿಸಂನ ಬಗ್ಗೆ ಅಪನಂಬಿಕೆಯಿರುವವರೆ ಸಂವಿಧಾನ ದಿನವನ್ನು ಆಚರಿಸುತ್ತಾರೆ. ತಮ್ಮನ್ನು ಜಾತ್ಯತೀತ ಎಂದು ಹೇಳಿಕೊಂಡಿರುವ ಕಾಂಗ್ರೆಸ್ ಜಾತ್ಯತೀತತೆಯನ್ನು ಕಾಪಾಡಲು ವಿಫಲವಾಗಿದೆ. ಪ್ರಾದೇಶಿಕ ಪಕ್ಷಗಳೂ ವಿಫಲವಾಗಿದೆ. ಜಾತ್ಯತೀತತೆ-ಯ ರಕ್ಷಣೆಗಾಗಿ ಮೊದಲಿನಿಂದಲೂ ನಿರಂತರವಾಗಿ ಹೋರಾಡುತ್ತಿರುವುದು ಎಡಪಕ್ಷಗಳು ಮಾತ್ರವೇ ಆಗಿವೆ. ಈಗಾಗಲೇ ದೇಶದ ವಿಚಾರವಾದಿಗಳು, ಇತಿಹಾಸಕಾರರು, ವಿಜ್ಞಾನಿಗಳು, ಸಾಂಸ್ಕೃತಿಕ ಕ್ಷೇತ್ರದ ಗಣ್ಯರು ಹಲವು ರೀತಿಯಲ್ಲಿ ಹಿಂದುತ್ವದ ಅಸಹಿಷ್ಣುತೆಯ ವಿರುದ್ಧ ಪ್ರತಿಭಟಿಸಿದ್ದಾರೆ. ಅಲ್ಪಸಂಖ್ಯಾಕರು ಮತ್ತು ದಲಿತರ ಮೇಲೆ ನಡೆಯುವ ದಾಳಿಗಳನ್ನು ತಡೆಯುವ ಜವಾಬ್ದಾರಿಯನ್ನು ಪ್ರಗತಿಪರರೊಂದಿಗೆ ಎಡಪಕ್ಷಗಳು ವಹಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ಶ್ರೀರಾಮರೆಡ್ಡಿ ವಿವರಿಸಿದರು.

ಸಿಪಿಐ ರಾಜ್ಯ ಸಮಿತಿ ಕಾರ್ಯದರ್ಶಿ ಪಿ. ವಿ. ಲೋಕೇಶ್ ಮಾತನಾಡಿ, ಕೋಮುವಾದವನ್ನು ದೇಶದಲ್ಲಿ ಹೇಗೆ ಬಳಸಲಾಗುತ್ತಿದೆ ಹಾಗೂ ಬೆಳೆಸಲಾಗುತ್ತಿದೆ ಎಂಬುದನ್ನು ವಿವರಿಸಿದರು. ಭಾರತ ದೇಶವನ್ನು ಆರ್ಥಿಕವಾಗಿ ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲು ದೇಶದ ಬಂಡವಾಳಶಾಹಿಗಳು ಹಾಗೂ ವಿದೇಶಿ ಕೋರ್ಪರೇಟ್‌ಗಳು ಹಮ್ಮಿಕೊಂಡಿರುವ ಸಾಧನಗಳಲ್ಲಿ ಕೋಮುವಾದವು ಒಂದಾಗಿದ್ದು, ತಮ್ಮ ಶೋಷಣೆಯನ್ನು ಮರೆಮಾಡಲು ಕೋಮುವಾದಿ ರಾಜಕೀಯವನ್ನು ಎತ್ತಿ ಹಿಡಿದು ಬೆಂಬಲಿಸುತ್ತಿವೆ. ಅದರ ಭಾಗವಾಗಿ ಲೋಕಸಭೆಯ ಚುನಾವಣೆಯ ಸಂದರ್ಭದಲ್ಲಿ ಬಂಡವಾಳಶಾಹಿಗಳು ಎಡೆಬಿಡದೆ ನರೇಂದ್ರ ಮೋದಿಯವರನ್ನು ಮುಂದಿನ ಪ್ರಧಾನಿ ಎಂಬಂತೆ ನಿರೂಪಿಸಿ ಪ್ರಚಾರ ನೀಡಿದರು. ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಜನವಿರೋಧಿಯಾದ ಹಾಗೂ ಕಾರ್ಮಿಕ ವಿರೋಧಿಯಾದ ಕಾರ್ಯಕ್ರಮಗಳನ್ನು ಬಿಜೆಪಿ ಅನುಸರಿಸುತ್ತಿದ್ದರೂ ಜನ ಅದನ್ನು ನೆನಪಿಸಬಾರದೆಂದು ಸಂಘಪರಿವಾರವು ಕೋಮುವಾದಿ ದಾಳಿಗಳನ್ನು ನಡೆಸಿ ಜನರು ಕೋಮು ಭಾವನೆಗಳಲ್ಲೇ ಮುಳುಗಿ ಹೋಗುವಂತೆ ಮಾಡಲಾಗುತ್ತಿದೆ ಎಂದು ಅವರು ವಿವರಿಸಿದರು.

ಚುನಾವಣೆಯ ಸಂದರ್ಭದಲ್ಲಿ ತಾವು ಕಾಂಗ್ರೆಸ್ಸಿಗಿಂತ ಭಿನ್ನವಾದ, ಭ್ರಷ್ಟಾಚಾರವಿಲ್ಲದ ಆಡಳಿತ ನೀಡುತ್ತೇವೆ ಎಂದು ಹೇಳಿ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿತ್ತು, ಆದರೆ ಅದು ನಡೆಯುತ್ತಿದೆಯೇ ? ಉದ್ಯಮಿಗಳಿಗೆ ಒಂದೇ ಸವಣೆ ಅನುಕೂಲವಾಗುವ ನೀತಿ ತರಲಾಗುತ್ತಿದೆ. ಜನ ಅತೃಪ್ತರಾದಾಗ ಕೋಮುವಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪೈಸಾ ವಾಪಸೀ, ಮೇಕ್ ಇನ್ ಇಂಡಿಯಾ, ಸಂವಿಧಾನ ದಿನ, ಲೋಕಪಾಲ ಚರ್ಚೆ ಎಲ್ಲವೂ ಬೊಗಳೆಗಳಾಗುತ್ತಿವೆ; ಘರ್ ವಾಪಸೀ, ಗೋಮಾತಾ ರಕ್ಷಾ, ದೇಶ ಗೌರವದ ಹೆಸರಲ್ಲಿ ಜನರ ಅತೃಪ್ತಿಗಳನ್ನು ಕೇಳಿಸದಂತೆ ಮಾಡಲಾಗುತ್ತಿದೆ.

ಕೋಮುವಾದವನ್ನು ಬಳಕೆ ಮಾಡುವ ಬಂಡವಾಳಶಾಹಿ, ಬಂಡವಾಳಶಾಹಿಯನ್ನು ಬಳಕೆ ಮಾಡುವ ಕೋಮುವಾದ - ಈ ದ್ವಂದ್ವತೆಯ ಬಗ್ಗೆ ವಿಶೇಷ ವಿಶ್ಲೇಷಣೆ ನಡೆಸಬೇಕಾಗಿದೆ. ಮೋದಿ ಸರಕಾರದ ಬಗ್ಗೆ ಜನತೆಗೆ ಸಂದೇಹ ಮೂಡಿದೆ. ಬೆಲೆ ಏರಿಕೆ ವಿಪರೀತವಾಗಿದೆ. ಅಗತ್ಯ ಔಷಧಿಗಳ ಬೆಲೆ ಹಲವು ಪಟ್ಟು ಹೆಚ್ಚಾಗಿದೆ. ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸಲಾಗುತ್ತಿದೆ. ಇದನ್ನು ವಿರೋಧಿಸಿ ಬುದ್ಧಿಜೀವಿಗಳೂ, ಸಾಂಸ್ಕೃತಿಕ ರಂಗದವರೂ ಪ್ರತಿಭಟಿಸುತ್ತಿದ್ದಾರೆ. ನಮ್ಮ ವಿರೋಧ ಕೇವಲ ಕೋಮುವಾದಕ್ಕೇ ಸೀಮಿತವಾಗಿಲ್ಲ. ಯಾವ ಬಂಡವಾಳಶಾಹಿ ಶಕ್ತಿಗಳು ಈ ಕೋಮುವಾದಕ್ಕೆ ಕುಮ್ಮಕ್ಕು ಕೊಡುತ್ತವೆಯೋ, ಅದರ ವಿರುದ್ಧವೂ ನಮ್ಮ ಪ್ರತಿಭಟನೆ ನಡೆಯಬೇಕಾಗಿದೆ. ಆರ್ಥಿಕ ನೀತಿಗಳ ಬಗ್ಗೆ ಕೇವಲ ಎಡಪಕ್ಷಗಳವರು ಮಾತ್ರವಲ್ಲ. ಇತರ ಪ್ರಗತಿಪರ ಶಕ್ತಿಗಳು ಧ್ವನಿ ಎತ್ತಬೇಕಾಗಿದೆ ಎಂದು ಪಿ.ವಿ. ಲೋಕೇಶ್ ಕರೆ ನೀಡಿದರು.

ಸಿಪಿಐ(ಎಂ) ಪಕ್ಷದ ಹಿರಿಯ ಮುಖಂಡ ಕೆ.ಆರ್. ಶ್ರೀಯಾನ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸಿಪಿಐ(ಎಂ) ದ.ಕ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಿಪಿಐನ ಶೇಖರ್ ಬಂಟ್ವಾಳ ಧನ್ಯವಾದವಿತ್ತರು. ಸಿಪಿಐ(ಎಂ)ನ ಜೆ. ಬಾಲಕೃಷ್ಣ ಶೆಟ್ಟಿ, ಸಿಪಿಐನ ಜಿಲ್ಲಾ ಕಾರ್ಯದರ್ಶಿ ವಿ. ಕುಕ್ಯಾನ್, ಮುಖಂಡರುಗಳಾದ ವಿ. ಸೀತಾರಾಮ ಬೇರಿಂಜ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ನೀರಾವರಿ ಯೋಜನೆಯನ್ನು ಸಮರೋಪಾದಿಯಲ್ಲಿ ನಡೆಸಿ: ಭೀಮಶಿ ಒತ್ತಾಯ

ಡಿಸೆಂಬರ್ 15ರಂದು ವಿಜಯಪುರ ಜಿಲ್ಲಾ ರೈತ ಹಾಗೂ ಕೃಷಿಕೂಲಿಕಾರ್ಮಿಕ ಸಂಘಗಳ ಜಂಟಿ ಸಮಿತಿಯಿಂದ ಅಂಬೇಡ್ಕರ ವೃತ್ತದಿಂದ ವಿವಿಧ ಬೇಡಿಕೆಗಳನ್ನು ಒತ್ತಾಯಿಸಿ ಬೃಹತ್ ಪ್ರತಿಭಟನಾ ಮೆರವಣಿಗೆ ಘೋಷಣೆ ಕೂಗುತ್ತ ಮುಖ್ಯ ಬೀದಿಗಳಲ್ಲಿ ಹಾಯ್ದು ಜಿಲ್ಲಾಧಿಕಾರಿ ಕಚೇರಿ ಮುಂದೆ ಬಹಿರಂಗ ಸಭೆ ಏರ್ಪಾಡಾಗಿತ್ತು.

ಜಿಲ್ಲೆ ಬರಗಾಲ ಘೋಷಣೆ ಮಾಡಿದರೂ ಶಾಶ್ವತ ಬರಗಾಲ ಕಾಮಗಾರಿಗಳೂ ಹಾಗು ಕುಡಿಯುವ ನೀರು, ಗೋಶಾಲೆ ತೆಗೆಯುವಲ್ಲಿ ಸರಕಾರ ವಿಫಲ ಗೊಂಡಿದ್ದಾರೆಂದು ಭೀಮಶಿ ಕಲಾದಗಿ ಕೆಪಿಆರ್‌ಎಸ್ ಉಪಾಧ್ಯಕ್ಷರ್ರು ಹೇಳಿದರು. ಜಿಲ್ಲೆಯ ಸಮಗ್ರ ನೀರಾವರಿ ಯೋಜನೆಗಳು ಹಾಗು ಕೆರೆ ತುಂಬುವ ಯೋಜನೆಗಳನ್ನು ನಮ್ಮ ಜಿಲ್ಲೆಯವರೆ ನೀರಾವರಿಮಂತ್ರಿ ಇದ್ದು ಇವರು ಭ್ರಷ್ಟಾಚಾರ ತಡೆಗಟ್ಟಿ ನೀರಾವರಿ ಯೋಜನೆಗಳನ್ನು ಸಮಾರೋಪಾದಿಯಲ್ಲಿ ಮಾಡಬೇಕೆಂದು ಒತ್ತಾಯಿಸಿದರು.

ಸರಕಾರದ ಭೂಮಿಯನ್ನು ಸುಮಾರು ವರುಷಗಳಿಂದ ಸಾಗುವಳಿ ಮಾಡಿದಂತ ಅಕ್ರಮ ಭೂಮಿಯನ್ನು ಸಕ್ರಮಗೊಳಿಸಿ, ಹಕ್ಕು ಪತ್ರ ಕೊಡಬೇಕು. ಕೋರ್ಟ್ ಹಾಗೂ ಸರಕಾರ 3 ಎಕರೆ ಜಮೀನು ಸಾಗುವಳಿ ಮಾಡುವರಿಗೆ ಒಕ್ಕಲೆಬ್ಬಿಸಬಾರದೆಂದು ಆದೇಶವಿರುತ್ತದೆ. ಇನ್ನೂ ಹಲವಾರು ರೈತ ಜನರು ಹೊಸ ಅರ್ಜಿ ಫಾರ್ಮ ತುಂಬಲು ಸರಕಾರ ಆದೇಶ ಮಾಡಬೇಕೆಂದು ರಾಜ್ಯ ರೈತ ಸಂಘದ ಪರಶುರಾಮ ಮಂಟೂರ ಹೇಳಿದರು.

ಎಮ್.ಎಸ್.ಸ್ವಾಮಿನಾಥನ್ ಇವರು 2006 ರಿಂದ ಕೇಂದ್ರ ಹಾಗೂ ರಾಜ್ಯ ಸರಕಾರಕ್ಕೆ ವರದಿ ಸಲ್ಲಿಸಿದರು. ಖರ್ಚು ವೆಚ್ಚ ಹಿಡಿದು ಶೇಕಡಾ 50% ಹಾಕಿ ದರ ನಿಗದಿ ಮಾಡಿ ಬೆಂಬಲ ಕೊಡುವಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ವಿಫಲವಾಗಿವೆ



ಎಂದು ಆರ್.ಕೆ.ಎಸ್. ರಾಜ್ಯ ಸಮಿತಿ ಸದಸ್ಯರಾದ ಭಗವಾನ ರೆಡ್ಡಿ ಹೇಳಿದರು.

ಅಖಂಡ ಕರ್ನಾಟಕ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, ಭೂಮಿ ಮನೆಗಳು ಬಡವರಿಗೆ ದೊರಕದೆ ಕೇವಲ ಹಣವಿದ್ದವರ ಪಾಲಾಗುತಿವೆ ಎಂದು ಸರ್ಕಾರ-ಕ್ಕೆ ಟೀಕಿಸಿದರು. ಭ್ರಷ್ಟಾಚಾರ ತಡೆಗಟ್ಟುವಲ್ಲಿ ಲೋಕಾಯುಕ್ತ ಇಲಾಖೆಯು ವಿಫಲವಾಗಿ ಎಂದರು.

ಈ ಸಂದರ್ಭದಲ್ಲಿ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷರಾದ ಅಣ್ಣಾರಾಯ ಈಳಗೇರ 15 ಬೇಡಿಕೆಗಳ ಹಕ್ಕೊತ್ತಾಯಗಳನ್ನು ಓದಿ ಜಿಲ್ಲಾಧಿಕಾಡಿ ಡಿ. ರಂದೀಪ ಅವರಿಗೆ ಸಲ್ಲಿಸಿದರು.

ಜಿಲ್ಲಾಧಿಕಾರಿಗಳು ಮನವಿ ಸ್ವೀಕರಿಸಿ ಮಾತನಾಡುತ್ತಾ, ಮುಂಗಾರು ಬೆಳೆ ವಿಫಲತೆಗಾಗಿ ಬೆಳೆ ನಷ್ಟ ಪರಿಹಾರದ ಸಮೀಕ್ಷೆ ಮಾತಿ 170 ಕೋಟಿ ರೂ ಹಣ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು. ಹಣ ಬಂದ ನಂತರ ರೈತರಿಗೆ ವಿತರಿಸಲಾಗುವುದು ಎಂದು ಭರವಸೆ ನೀಡಿದರು.

ಹಿಂಗಾರು ಬೆಳೆಯು ಕೂಡ ವಿಫಲವಾಗಿದೆ ಎಂದು ರೈತ ಸಂಘಟನೆಗಳೂ ಧ್ವನಿ ಎತ್ತಿದವು ಅದಕ್ಕೂ ಪರಿಹಾರ ನೀಡಿರಿ ಎಂದು ರೈತರ ಸಂಘಟನೆಗಳು ಆಗ್ರಹಿಸಿದವು. ಉದ್ಯೋಗ ಖಾತ್ರಿಯಲ್ಲಿ ಅತಿ ಯಂತ್ರ ಬಳಕೆ ಉಪಯೋಗಿಸುವುದರಿಂದ ಕೃಷಿಕೂಲಿಕಾರ್ಮಿಕರಿಗೆ ಕೆಲಸವಿಲ್ಲದಂತಾಗಿದೆ. ಇಲ್ಲಿ ನಡೆಯುವ ಭ್ರಷ್ಟಾಚಾರ ತಡೆಗಟ್ಟಿ ಕೃಷಿ ಕೂಲಿಕಾರ್ಮಿಕರಿಗೆ ಕೆಲಸ ಒದಗಿಸಬೇಕು. ಕೂಲಿಯ ದರ 350 ರೂ ಯಂತೆ ದಿನ ಗೂಲಿ ದರವನ್ನು ಕೊಡಬೇಕೆಂದು ಆಗ್ರಹಿಸಿದರು. ಕೂಡಗಿ ವಿದ್ಯುತ್ ಸ್ಥಾವರದಿಂದ ಬೆಳೆಗಳು ಹಾನಿ, ಜನರ ಆರೋಗ್ಯ ಹಾಳಾಗಿದ್ದು, ಅದರಿಂದ ರಸ್ತೆಗಳೆಲ್ಲವು ಹದಗೆಟ್ಟಿವೆ. ಕೂಡಲೇ ಅದನ್ನು ಸರಿಪಡಿಸಲು ವಿದ್ಯುತ್ ಸ್ಥಾವರ ಅಧಿಕಾರಿಗಳಿಗೆ ತಿಳಿಸಲಾಗುವು ಎಂದು ಹೇಳಿದರು. ಸಿಂದಗಿ ಗೊಲ್ಲರ ಸಮುದಾಯ ಭವನ ಕಟ್ಟಲಿಕ್ಕೆ ಜಿಲ್ಲಾ ಯೋಜನಾಧಿಕಾರಿಗಳಿಗೆ ಸೂಚಿಸಿದೆ. ಗಾಂಧಿ ನಗರದ ಮನೆಗಳ ನಾಗರಿಕ ಸೌಲಭ್ಯ ಒದಗಿಸಲು ನಗರ ಪಾಲಿಕೆ ಸದಸ್ಯರಿಗೆ ವೀಕ್ಷಣೆಗೆ ಕಳುಹಿಸಿಕೊಡಲಾಗುತ್ತದೆ ಎಂದು ಹೇಳಿದರು.

ಪ್ರಕಾಶ ಹಿಟ್ನಳ್ಳಿ, ಆರ್. ಕೆ.ಎಸ್ ಜಿಲ್ಲಾ ಸಂಚಾಲಕರು ಬಾಳು ಜೇವೂರ ಮಾತನಾಡಿದರು. ರಾಜ್ಯ ರೈತ ಸಂಘದ ಕಾಶೀನಾಥ ಸಿಂಧೂರ, ಅಮೀರ ನಂದವಾಡಗಿ, ಬಸನಗೌಡ ಬಿರಾದಾರ, ಕರ್ನಾಟಕ ಪ್ರಾಂತ ರೈತ ಸಂಘದ ಜಿ.ಎಸ್. ಇಂಗಳಗಿ, ರಾಮಣ್ಣ ಶಿರೆಗೋಳ, ಖಾಜೆಸಾಬ ಕೋಲಾರ, ಸುರೇಖಾ ರಜಪೂತ, ಸುಭಾಸ ತಳಕೇರಿ, ಪ್ರಾಂತ ಕೃಷಿಕೂಲಿಕಾರರ ಮಳಸಿದ್ದ ನಾಯ್ಕೋಡಿ, ಮಲಿಕಸಾಬ ಬಾಗಲಕೋಟ, ಅಶೋಕ ಮಳ್ಳಿ, ಭೀಮಾ ಬಿಜಾಪುರ, ಶ್ರೀಶೈಲ ತೇಲಿ, ಅಖಿಲ ಕರ್ನಾಟಕ ರೈತರ ಹಾಗೂ ಟ್ರ್ಯಾಕ್ಟರ್ ಮಾಲಿಕರ ಹಿತಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಡಾ . ಎಸ್. ಜಿ. ಪಾಟೀಲ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಸಿಐಟಿಯು ರಾಂಚಿ ಜನರಲ್ ಕೌನ್ಸಿಲ್ ಸಭೆಕರೆ

'ನವ ಉದಾರವಾದಿ ನೀತಿಗಳ ವಿರುದ್ಧದ ಹೋರಾಟ ತೀವ್ರಗೊಳಿಸಿ'

ಡಿಸೆಂಬರ್ 17 ರಿಂದ 20 ರವರೆಗೆ ಜಾರ್ಖಂಡ್ ರಾಜಧಾನಿ ರಾಂಚಿಯಲ್ಲಿ ನಡೆದ ಸಿಐಟಿಯು ಅಖಿಲ ಭಾರತ ಜನರಲ್ ಕೌನ್ಸಿಲ್ ನಾಲ್ಕು ದಿನಗಳ ಸಭೆಯು ದೇಶದ ಕಾರ್ಮಿಕ ವರ್ಗವು ದೇಶವಿರೋಧಿ ಹಾಗೂ ಜನವಿರೋಧಿ ನವ ಉದಾರೀಕರಣ ನೀತಿಗಳ ವಿರುದ್ಧ ನಡೆಸಲಾಗುತ್ತಿರುವ ತನ್ನ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಿ ಅವುಗಳನ್ನು ಹಿಮ್ಮೆಟ್ಟಿಸುವಂತೆ ಚಳವಳಿ ನಡೆಸಲು ಕರೆ ನೀಡಿದೆ.

ಎಡಶಕ್ತಿಗಳ ಪರವಾಗಿ ಬದ್ಧತೆಘೋಷಣೆ

ಇದೇ ಸಂದರ್ಭದಲ್ಲಿ, ಮುಂಬರುವ ದಿನಗಳಲ್ಲಿ ವಿಶೇಷವಾಗಿ ಪ.ಬಂಗಾಳ, ಕೇರಳ, ತಮಿಳುನಾಡು, ಅಸ್ಸಾಂ, ಹಾಗೂ ಪಾಂಡಿಚೇರಿಗಳಲ್ಲಿ ನಡೆಯುವ ವಿಧಾನಸಭಾ ಚುನಾವಣೆಗಳಲ್ಲಿ ದುಡಿಯುವ ವರ್ಗದ ಹಿತಾಸಕ್ತಿಗೆ ವಿರುದ್ಧವಾಗಿ ಇದೇ ಉದಾರೀಕರಣ ನೀತಿಗಳನ್ನು ಜಾರಿ ಮಾಡುತ್ತಿರುವ ಪಕ್ಷಗಳನ್ನು ಹಾಗೂ ಕೋಮು ಹೆಸರಿನಲ್ಲಿ ದುಡಿಯುವ ವರ್ಗವನ್ನು ವಿಭಜಿಸಲು ಪ್ರಯತ್ನಿಸುವ ಕೋಮುವಾದಿ ಶಕ್ತಿಗಳನ್ನು ಸೋಲಿಸಲು ಮತ್ತು ಅಲ್ಲೆಲ್ಲಾ ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ಗೆಲುವಿಗೆ ಕಾರ್ಮಿಕ ವರ್ಗಧೃಢವಾಗಿ ನಿಲ್ಲಬೇಕೆಂಬ ಕರೆಯನ್ನು ಸಿಐಟಿಯು ಜನರಲ್ ಕೌನ್ಸಿಲ್ ಸಭೆ ನೀಡಿದೆ.

ಕೋಮುಶಕ್ತಿಗಳ ಅಪಾಯ

ಕಾರ್ಮಿಕ ವರ್ಗದ ಐಕ್ಯತೆಗೆ ಭಂಗವನ್ನುಂಟು ಮಾಡಿ ಶೋಷಿತ ಜನರ ಚಳಿವಳಿಯನ್ನು ಹಾಳು ಮಾಡಲು ಕೋಮುವಾದಿ ಶಕ್ತಿಗಳು ನಡೆಸುತ್ತಿರುವ ಪಿತೂರಿಗಳ ಬಗ್ಗೆ ದುಡಿಯುವ ವರ್ಗ ಎಚ್ಚರಿಕೆಯಿಂದ ಇರಬೇಕೆಂಬ ಸಂದೇಶವನ್ನು ನೀಡಿರುವ ಸಭೆಯು ಆ ಮೂಲಕ ದೇಶೀಯ ಹಾಗೂ ವಿದೇಶಿ ಬಹುರಾಷ್ಟ್ರೀಯ ಕಾರ್ಪೋರೇಟ್‌ಗಳ ಹಿತಾಸಕ್ತಿಗಳ ರಕ್ಷಣೆಗಾಗಿ ನಡೆಯುತ್ತಿರುವ ಎಲ್ಲಾ ರೀತಿಯ ಯೋಜಿತ ಹುನ್ನಾರಗಳನ್ನು ಸೋಲಿಸಿ ಕಾರ್ಮಿಕ ವರ್ಗ ತನ್ನ ಐಕ್ಯತೆಯನ್ನು ಮತ್ತಷ್ಟು ಗಟ್ಟಿಗೊಳಿಸಲು ಮುಂದಾಗಬೇಕೆಂದು ಕರೆ ನೀಡಿದೆ.

ಮೋದಿ ಸರಕಾರದ ಅಪಾಯದ ನಡೆ

ಸೆಪ್ಟೆಂಬರ್ 2 ರಂದು ದೇಶದ ದುಡಿಯುವ ಜನರು ತೀವ್ರ ರೀತಿಯ ಪ್ರತಿರೊಧವನ್ನು ವ್ಯಕ್ತಪಡಿಸಿದ್ದಾಗ್ಯೂ ಮೋದಿ ನೇತೃತ್ವದ ಕೇಂದ್ರ ಸರಕಾರ ತನ್ನ ನವ ಉದಾರವಾದಿ ನೀತಿಗಳನ್ನು ಮತ್ತಷ್ಟು ತೀವ್ರಗತಿಯಲ್ಲಿ ಹರಿಯ ಬಿಡುತ್ತಿರುವ ಕ್ರಮವನ್ನು ಜನರಲ್ ಕೌನ್ಸಿಲ್ ಸಭೆ ತೀವ್ರವಾಗಿ ಖಂಡಿಸಿದೆ. ಮೋದಿ ಸರಕಾರದ ವಿರುದ್ಧ ಕಾರ್ಮಿಕ ವರ್ಗ ನಡೆಸುತ್ತಿರುವ ಜಂಟಿ ಹೋರಾಟವನ್ನು ಮತ್ತಷ್ಟು ಮುಂದುವರೆಸಲು ನಿರ್ಧರಿಸಿ 2016



ಫೆಬ್ರವರಿ 5 ರಂದು ಕೇಂದ್ರ ಕಾರ್ಮಿಕ ಸಂಘಗಳು ಜಂಟಿಯಾಗಿ ಕರೆ ನೀಡಿರುವ ದೇಶದ್ಯಾಂತ ಜಂಟಿ ಕಾರ್ಯಚರಣೆ ಹಾಗೂ ಪ್ರಚಾರಾಂದೋಲನವನ್ನು ಯಶಸ್ವಿಗೊಳಿಸಲು ಕರೆ ನೀಡಿದೆ.

ಜಂಟಿ ಕಾರ್ಯಚರಣೆ ತೀವ್ರಗೊಳಿಸಿ

ಕೇಂದ್ರ ಕಾರ್ಮಿಕ ಸಂಘಗಳು ಜಂಟಿಯಾಗಿ ಮಂಡಿಸಿರುವ 12 ಪ್ರಮುಖ ಬೇಡಿಕೆಗಳ ಈಡೇರಿ–ಕೆಗಾಗಿ ಹಾಗೂ ಕೋಮುವಾದದ ಅಪಾಯಗಳ ಕುರಿತಾಗಿತನ್ನ ಸ್ವತಂತ್ರ ಕಾರ್ಯಚರಣೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲು ಸಿಐಟಿಯು ನಿರ್ಧರಿಸಿದೆ. ಸ್ವತಂತ್ರ ಹಾಗೂ ಜಂಟಿ ಚಳವಳಿ ರೂಪಿಸಲು ವಿಪುಲ ಅವಕಾಶಗಳು ನಮ್ಮ ಚಳುವಳಿ ಮುಂದಿವೆ. ಈಗಾಗಲೇ ಕಲ್ಲಿದ್ದಲು, ಸಾರಿಗೆ, ಬಂದರು, ವಿದ್ಯುತ್, ಹಾಗೂ ಅಂಗನವಾಡಿ ನೌಕರರು ಜಂಟಿ ಚಳುವಳಿಗೆ ಧುಮುಕಿದ್ದಾರೆ. ಇಂತಹ ಎಲ್ಲಾ ಚಳವಳಿಗೆ ಸಿಐಟಿಯುವಿನ ಎಲ್ಲಾ ಹಂತದ ಸಮಿತಿಗಳು ಸಂಪೂರ್ಣ ಬೆಂಬಲ ನೀಡಿ ಆ ಚಳುವಳಿಗಳನ್ನು ಮತ್ತಷ್ಟು ರಾಜ್ಯ ಹಾಗೂ ರಾಷ್ಟ್ರ ಮಟ್ಟದವರೆಗೂ ವಿಸ್ತಾರಗೊಳ್ಳುವಂತೆ ಸಭೆಯು ಕರೆ ನೀಡಿದೆ.

ರೈತ–ಕೂಲಿಕಾರ–ಕಾರ್ಮಿಕ ಸಖ್ಯತೆ

ಮುಂಬರುವ ದಿನಗಳಲ್ಲಿ ರೈತ ಕಾರ್ಮಿಕರ ಸಖ್ಯತೆಯೊಂದಿಗೆ ವಿಶಾಲ ತಳಹದಿಯ ಹೋರಾಟ ರೂಪಿಸಲು ನಿರ್ಧರಿಸಿರುವ ಸಿಐಟಿಯು ಅದಕ್ಕಾಗಿ 1982 ಜನವರಿ 19 ರಂದು ದೇಶದಲ್ಲಿ ಮೊಟ್ಟಮೊದಲ ಸಾರ್ವತ್ರಿಕ ಮುಷ್ಕರ ನಡೆಸಿ 10 ಜನ ಹೋರಾಟಗಾರರು ಹುತಾತ್ಮರಾದ ದಿನವಾದ 19 ಜನವರಿ 2016 ರಂದು ದೇಶದ್ಯಾಂತ ರೈತ–ಕೂಲಿಕಾರರು ಹಾಗೂ ಕಾರ್ಮಿಕರ ದಿನವನ್ನಾಗಿ ಆಚರಿಸಲು ಕರೆ ನೀಡಿದೆ.

ಬೀಡಿ–ತೋಟೊದ್ಯಮ ಅಪಾಯದಲ್ಲಿ

ಬೀಡಿ ಉಧ್ಯಮದ ಬೆಳವಣಿಗೆ ಹಾಗೂ ಪ. ಬಂಗಾಳದ ಟೀ ತೋಟಗಳಲ್ಲಿ ಕಾರ್ಮಿಕರ ನಿರಂತರ ಸಾವುಗಳ ಬಗ್ಗೆ ತನ್ನ ತೀವ್ರ ಆತಂಕವನ್ನು ಸಭೆ ವ್ಯಕ್ತಪಡಿಸಿತು. ತಂಬಾಕು ನಿಷೇಧದ ಬಗ್ಗೆ ವ್ಯಾಪಕ ಚರ್ಚೆಗಳನ್ನು ಸರಕಾರಗಳು ಹುಟ್ಟು ಹಾಕಿವೆ, ಆದರೆ ಭಾರತದಲ್ಲಿ ಬೀಡಿ ಉದ್ಯಮ ಒಂದನ್ನೇ ನಂಬಿ ಸುಮಾರು 2 ಕೋಟಿ ಕುಟುಂಬಗಳು ಜೀವನ ನಡೆಸಿವೆ. ಆದರೆ ಇಷ್ಟು ದೊಡ್ಡ ಸಂಖ್ಯೆಯ ಜನರಿಗೆ ಪರ್ಯಾಯ ಉದ್ಯೋಗಗಳನ್ನು ನೀಡದೆ ಅವರ ಬದುಕಿನ ಮೇಲೆ ಗದಾ ಪ್ರಹಾರ ನಡೆಸಲು ಸರಕಾರಗಳು ಹೊರಟಿರುವುದನ್ನು ಸಭೆ ಖಂಡಿಸಿ ಪರ್ಯಾಯ ಉದ್ಯೋಗಕ್ಕಾಗಿ ಅಗತ್ಯವಿರುವ ಹಣಕಾಸು ನೆರವನ್ನು ಸರಕಾರ ಪ್ರಕಟಿಸಬೇಕೆಂದು ಸಭೆ ಆಗ್ರಹಪಡಿಸಿತು. ಅಲ್ಲದೇ ಪ.ಬಂಗಾಳದ ಟೀಗಾರ್ಡನ್ ನಲ್ಲಿ ಸಂಭವಿಸಿರುವ ಹಸಿವಿನ ಸಾವಿಗೆ ಮತ್ತು ಇತ್ತೀಚಿಗೆ ಚೆನ್ನೈನಲ್ಲಿ ಸಂಭವಿಸಿರುವ ಪ್ರಕೃತಿ ವಿಕೋಪದಲ್ಲಿ ಸಾವನಪ್ಪಿದ ಹಾಗೂ ತೀವ್ರ ಸಂಕಷ್ಟಕ್ಕೊಳಗಾದ ಜನರಿಗೆ ಅಗತ್ಯ ನೆರವು ನೀಡಲು ಸಿಐಟಿಯು ಸಮಿತಿಗಳಿಗೆ ಸಭೆ ಕರೆ ನೀಡಿದೆ.

ಕಪ್ಪು ಹಣ ಎಲ್ಲಿ? – ಬಿ.ಉಮೇಶ್

ದೇಶದ ಜನರ ಸಮಸ್ಯೆಗಳ ಇತ್ಯಾರ್ಥಕ್ಕಾಗಿ ಬಿಜೆಪಿಯನ್ನು ಗೆಲ್ಲಿಸಿ ಎಂದು ಅಬ್ಬರದ ಪ್ರಚಾರವನ್ನು ಮಾಡುತ್ತಾ ಸುಳ್ಳು ಸುಳ್ಳು ಭರವಸೆಗಳ ಮಹಾಪೂರವನ್ನೆ ಅಬ್ಬಿಸಿದ ನರೇಂದ್ರಮೊದಿಯವರು ಜನರ ಸಮಸ್ಯೆಗಳನ್ನು ಬಗೆಹರಿಸುವ ಬದಲು ಬಿಜೆಪಿಯ ಸಂಸದರು, ಸಚಿವರುಗಳು, ಶಾಸಕರುಗಳು ಲಂಗು ಲಗಾಮಿಲ್ಲದೆ ಮಾತನಾಡುವ ಮೂಲಕ ದೇಶದಲ್ಲಿ ಅಸಹಿಷ್ಣುತೆಯನ್ನು ಹೆಚ್ಚಿಸುವ ಕೋಮುವಿಭಜನೆಯನ್ನು ಪ್ರಚೋದಿಸುವ ಸಂಘಪರಿವಾರದ ಕೆಲಸಗಳಿಗೆ ಬೆಂಬಲಿಸುತ್ತಿದ್ದಾರೆ ಎಂದು ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ. ಉಮೇಶ್ ಆರೋಪಿಸಿದರು.

ದೇಶದ್ಯಂತ ಹೆಚ್ಚುತ್ತಿರುವ ಅಸಹಿಷ್ಣುತೆ, ಕೋಮುವಾದದ ವಿರುದ್ಧ ಸಂವಿಧಾನದ ಆಶಯಗಳ ಉಳಿವಿಗಾಗಿ ಎಡಪಕ್ಷಗಳು ನಡೆಸುತ್ತಿರುವ ಹೋರಾಟದ ಭಾಗವಾಗಿ ಸಪಿಐ, ಸಿಪಿಐ(ಎಂ), ಎಸ್‌ಯುಸಿಐ(ಸಿ) ಎಡಪಕ್ಷಗಳು ನಗರದ ಬಿಎಸ್‌ಎನ್‌ಎಲ್ ಕಛೇರಿ ಎದುರು ಹಮ್ಮಿಕೊಂಡಿದ್ದ ಪ್ರಚಾರಾಂದೋಲನ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ ಭ್ರಷ್ಟಾಚಾರದಲ್ಲಿ ತೊಡಗಿ ಜನರ ಆಕ್ರೋಶಕ್ಕೆ ತುತ್ತಾಗಿದ್ದ ಕಾಂಗ್ರೆಸ್ ಸರ್ಕಾರದ ವೈಪಲ್ಯಗಳನ್ನು ಬಂಪಾಳಮಾಡಕೊಂಡು ಬಿಜೆಪಿಯು ಅಧಿಕಾರಕ್ಕೆ ಬಂದಿದೆ ಆದರೆ ನರೇಂದ್ರಮೋದಿಯವರು 100 ದಿನಗಳಲ್ಲಿ ದೇಶದ ಜನರಿಗೆ ಒಳ್ಳೆಯದಿನಗಳನ್ನು ತರುತ್ತೇವೆ, ವಿದೇಶದಲ್ಲಿರುವ ಕಪ್ಪುಹಣವನ್ನು ತಂದು ದೇಶದ ಜನರಿಗೆ ಹಂಚುತ್ತೇವೆ, ಬೆಲೆ ಏರಿಕೆ ಕಡಿಮೆಮಾಡುತ್ತೇವೆ ಎಂದೆಲ್ಲಾ ಹೇಳಿದ ನರೇಂದ್ರಮೋದಿಯವರು ಅವರಿಗೆ ಮಾತ್ರ ವಿದೇಶ ಪ್ರವಾಸ ಮಾಡುವ ಒಳ್ಳೆಯ ದಿನಗಳನ್ನು ಬರಮಾಡಿಕೊಂಡಿದ್ದಾರೆಯೇ ಹೊರತು ದೇಶದ ಜನರಿಗಲ್ಲ ಎಂದು ಅವರು ಈ ದೇಶದ ಸೂಫಿಸಂತರು, ವಚನಕಾರರು, ಸಾಹಿತಿಗಳು, ಪ್ರಗತಿಪರರು ದೇಶದಲ್ಲಿ ಸೌಹಾರ್ದತೆಯನ್ನು ಸಾರಿದ್ದಾರೆ ಆದರೆ ಕೇಂದ್ರದ ನರೇಂದ್ರ ಮೋದಿ ಸರ್ಕಾರ ದೇಶದಲ್ಲಿ ಅಸಹಿಷ್ಣುತೆಯನ್ನು ಹೆಚ್ಚಿಸುವ ಮೂಲಕ ಕೋಮುವಾದವನ್ನು ಹರಡುತ್ತಿದೆ ಎಂದರು.

ಹೋರಾಟವನ್ನು ಬೆಂಬಲಿಸಿ ಮಾತನಾಡಿದ ಸಾಹಿತಿ ಬಂದನಕುಂಟೆ ನಾಗರಾಜ್ ಜನರ ಆಹಾರಪದ್ಧತಿಯ ಮೇಲೆ ದಾಳಿ ನಡೆಸುತ್ತಿರುವ ಬಿಜೆಪಿ ಮೊದಲು ಈ ದೇಶದಲ್ಲಿ ಬೂದಕುಂಬಳಕಾಯಿಯನ್ನು ತಿನ್ನುವುದನ್ನು ನಿಷೇಧಿಸಿದರೆ ಎಷ್ಟು ಜನ ಪುರೋಹಿತಶಾಹಿಗಳು ಪ್ರತಿಭಟಿಸಬಹುದು. ಹಾಗೇಯೇ ಅವರವರ ಆಹಾರಪದ್ಧತಿ ಅವರವರಿಗೆ ಬಿಟ್ಟಿದ್ದು ಸರ್ಕಾರ ಮೊದಲು ತನ್ನ ಹಿಜೆಂಡ್ ಅಜೆಂಡವನ್ನು ದೇಶದ ಜನರಮೇಲೆ ಹೇರುವುದನ್ನು ಬೀಡಬೇಕು ಎಂದರು.

ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಂಬೇಗೌಡ ಮಾತನಾಡಿ ದೇಶದಲ್ಲಿ ನರೇಂದ್ರಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಒಂದುವರೆವರ್ಷ ಕಳೆದಿದೆ ಆದರೆ ಜನರ ಸಮಸ್ಯೆಗಳು ಹಾಗೇ ಇದ್ದು ಸತ್ಯವನ್ನು ಹೆಳುವ ಎಲ್ಲರನ್ನು ಗುರಿಯಾಸಿಕೊಂಡು ದ್ವೇಷದ ರಾಜ–ಕಾರಣ ನಡೆಸುತ್ತದೆ, ವಿಚಾರವಾದಿಗಳಾದ ನರೇಂದ್ರದಾಬುಲ್ಕರ್, ಗೋವಿಂದ ಪಾನ್ಸರ್, ಪ್ರೊ. ಎಂ.ಎಂ. ಕಲುಬುರ್ಗಿರವರುಗಳನ್ನು ಹತ್ಯೆ ನಡೆಸಲಾಗಿದೆ ಜೊತೆಗೆ ದಲಿತರನ್ನು ದೇವಸ್ಥಾನ ಪ್ರವೇಶಿಸಿದರು ಎಂದು ಜೀವಂತವಾಗಿ ಸುಡುವುದು, ಚಿಕ್ಕ ಮಕ್ಕಳು ಎಂಬುದನ್ನು ಲೆಕ್ಕಿಸದೇ ಸಜೀವದಹನ ಮಾಡುವಂತಹ ಕೆಲಸಗಳು ನಡೆಯುತ್ತಿದ್ದರೂ ಸಹ ಮೋದಿ ಸರ್ಕಾರದ ಸಚಿವರು ಇವುಗಳು ಸಣ್ಣ ಘಟನೆಗಳು ಎಂದು ಬೇಜವ್ದಾರಿ ಹೆಳಿಕೆಗಳನ್ನು ನೀಡುತ್ತಿದ್ದರು ಸಹ ಮೋದಿ ಬಾಯಿಬಿಡದೆ ಇರುವುದನ್ನು ತೀವ್ರವಾಗಿ ಖಂಡಿಸಿದರು.

ಎಸ್‌ಯುಸಿಐ(ಸಿ) ಯ ನಗರಕಾರ್ಯದರ್ಶಿ ಎಸ್.ಎನ್. ಸ್ವಾಮಿ ಮಾತನಾಡಿ ದೇಶದಲ್ಲಿ ಅಸಹಿಷ್ಣುತೆ ಹೆಚ್ಚುತ್ತಿದೆ, ವಿಚಾರವಾದಿಗಳು, ಪ್ರಗತಿಪರರು, ಸಾಹಿತಿಗಳು ಇರುವ ಸತ್ಯವನ್ನು ದೇಶದ ಜನರಿಗೆ ತಿಳಿಸಿದರೆ ಅದನ್ನು ಅರ್ಥಮಾಡಿಕೊಂಡು ದೇಶವನ್ನು ಸೌಹಾರ್ದಯುತವಾಗಿ ಹೇಗೆ ತೆಗೆದು–ಕೊಂಡು ಹೋಗಬೇಕು ಎನ್ನುವ ಬದಲು ಅಂತಹವರನ್ನೆ ಗುರಿಯಾಗಿಸಿ ಹತ್ಯೆಮಾಡುವ ಘಟನೆಗಳು ಖಂಡನೀಯ ಎಂದ ಅವರು ದಲಿತರು, ಅಲ್ಪಸಂಖ್ಯಿತರಿಗೆ ಯಾವುದೇ ರಕ್ಷಣೆ ಇಲ್ಲದಂತಾಗಿದೆ. ಜಾತ್ಯಾತೀತ ರಾಷ್ಟ್ರದಲ್ಲಿ ಯಾರಿಗೂ ರಕ್ಷಣೆ ಇಲ್ಲದ ಸ್ಥಿತಿಯನ್ನು ನಿರ್ಮಾಣಮಾಡುತ್ತಿರುವುದನ್ನು ತೀವ್ರವಾಗಿ ಖಂಡಿಸಿದರು ಪ್ಯಾಸಿವಾದಿ ಮನೋಭವನೆಯನ್ನು ಬೆಳೆಸಲಾಗುತ್ತಿದ್ದು ಬೇರೆಯವರ ಭಾವನೆಗಳಿಗೆ ಬೆಲೆ ಕೊಡದ ಪರಿಸ್ಥಿತಿ ನಿರ್ಮಾಣವಾಗಿದೆ ಇದು ಪ್ರಜಾತಾಂತ್ರಿಕ ಹಕ್ಕುಗಳನ್ನೇ ಹರಣಮಾಡಿದಂತೆ ಈ ದೋರಣೆಯನ್ನು ಇಡೀ ದೇಶದ ದುಡಿಯುವ ಜನ ಒಂದಾಗಿ ಸೋಲಿಸಬೇಕು ಎಂದು ಕರೆ ನೀಡಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ)ನ ರಾಜ್ಯ ಸಮಿತಿ ಸದಸ್ಯ ಸ್ಯಯದ್‌ಮುಜಿಬ್, ಎನ್.ಕೆ. ಸುಬ್ರಮಣ್ಯ, ಸಿಪಿಐನ ಗಿರೀಶ್, ಎಸ್.ಯುಸಿಐ(ಸಿ) ಯ ನರಸಿಂಹರಾಜು ಮಾತನಾಡಿದರು, ರಾಮಚಂದ್ರು, ದರ್ಶನ್, ಶಿವಣ್ಣ, ಸಿ. ಅಜ್ಜಪ್ಪ, ರಾಮು, ವಾಸುದೇವ್, ಚಿನ್ನಪ್ಪ, ಟಿ.ಆರ್. ರೇವಣ್ಣ, ಕಲ್ಯಾಣಿ, ಮಂಜುಳ.ಎಸ್.ಗೋನವಾರ್ ರತ್ನಮ್ಮ ಇನ್ನುಮುಂತಾದವರು ನೇತೃತ್ವವಹಿಸಿದ್ದರು ಕೊನೆಯಲ್ಲಿ ಸಿಪಿಐ(ಎಂ) ನಗರಕಾರ್ಯದರ್ಶಿ ಎಸ್. ರಾಘವೇಂದ್ರ ವಂದಿಸಿದರು.

ರಾಜ್ಯದ ಗೃಹಮಂತ್ರಿಗಳಿಗೆ ಕಡ್ಲೆಪುರಿ ಪಾರ್ಸೆಲ್ ಆಂದೋಲನ

ಫೇಸ್ ಬುಕ್‌ನಲ್ಲಿ

ಕರಾವಳಿಗೆ ದೇಶದ ಕಾನೂನುಗಳು ಅನ್ವಯವೇ ಆಗುತ್ತಿಲ್ಲ. ಪೊಲೀಸ್ ವ್ಯವಸ್ಥೆ ಎಂಬುದು ಇಲ್ಲಿ ಅಸ್ತಿತ್ವದಲ್ಲೇ ಇಲ್ಲ? ಅಮಾನುಷತೆಯನ್ನು ಮೆರೆದಿರುವ ಸಂಸ್ಕೃತಿ ರಕ್ಷಣೆಯ ಮುಸುಗು ಹೊದ್ದ ಸೀಳುನಾಯಿಗಳು ಇತ್ತೀಚೆಗೆ ವಿದ್ಯಾ ದಿನಕರ್ ರ ಮೇಲೆ ಮುಗಿಬಿದ್ದಿವೆ. ಅತ್ಯಂತ ಅವಾಚ್ಯವಾಗಿ ಈ ಸಾಮಾಜಿಕ ಹೋರಾಟಗಾರ್ತಿಯನ್ನು ಫೇಸ್ ಬುಕ್ಕಿನಲ್ಲಿ ನಿಂದಿಸಿರುವ ಧರ್ಮರಕ್ಷಣೆಯ ಸೆಕ್ಯೂರಿಟಿ ಗಾರ್ಡುಗಳು ಕರಾವಳಿಯನ್ನು ಪಿಶಾಚಿ ಸಂತಾನಗಳ ತವರಾಗಿಸಲು ಮುಂದಡಿಯಿಟ್ಟಿವೆ. ಸಾಮಾನ್ಯ ಜನರ ಜೀವಕ್ಕೆ ಎಲ್ಲೆಡೆಯಿಂದ ಅಪಾಯವೊದಗುತ್ತಿದ್ದರೂ.. ಇದಕ್ಕೂ ನಮಗೂ ಸಂಬಂಧವೇ ಇಲ್ಲವೆಂಬಂತೆ ವರ್ತಿಸುತ್ತಿರುವ ಇಬ್ಬರು ಹೊಣೆಗೇಡಿಗಳ ವಿರುದ್ಧ ಧ್ವನಿ ಎತ್ತಲೇಬೇಕಾದ ಸಮಯವಿದು. ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸ್ ಮುಖ್ಯಸ್ಥರಾದ ಮುರುಗನ್, ಈ ರಾಜ್ಯದ ಗೃಹಮಂತ್ರಿ ಜಿ.ಪರಮೇಶ್ವರ್ ತಮ್ಮ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಮರೆತಿರುವ ಇವರಿಬ್ಬರೂ ಕರ್ತವ್ಯ ವಿಮುಖರಾಗಿ ಖಾಲಿ ಕುಳಿತಿರುವುದಂತೂ ನಿಚ್ಚಳ. ಆದ್ದರಿಂದ ಅವರ ಖಾಲಿ ಸಮಯವನ್ನು ಸದುಪಯೋಗಪಡಿಸಿಕೊಳ್ಳಲು ರಾಜ್ಯದ ಗೃಹಮಂತ್ರಿಗಳು ಮತ್ತು ಕರಾವಳಿಯ ಪೊಲೀಸ್ ಮುಖ್ಯಸ್ಥರಿಗೆ ಕಡ್ಲೆಪುರಿ ಪೊಟ್ಟಣಗಳನ್ನು ಪಾರ್ಸೆಲ್ ಮಾಡುವ ಮೂಲಕ ಪ್ರತಿಭಟಿಸಲು ನಾಳೆ ಡಿಸೆಂಬರ್ 25ರಂದು ಟೌನ್ ಹಾಲ್ ಮುಂಭಾಗ ಸಂಜೆ 4–30ಕ್ಕೆ ಕಡ್ಲೆಪುರಿ ಪಾರ್ಸೆಲ್ ಪ್ರತಿಭಟನಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

– ಜೀವನ್ ರಾಜ್

ಬಲಿಷ್ಟ ಅಖಿಲ ಭಾರತ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವತ್ತ ಸಿಪಿಐ(ಎಂ)ನ ಸಂಘಟನಾ ಪ್ಲೀನಮ್

–ಪ್ರಕಾಶ ಕಾರಟ್

ಡಿಸೆಂಬರ್ 27 ರಿಂದ 31 ರವರೆಗೆ ಸಿಪಿಐ(ಎಂ) ಕೊಲ್ಕತಾದಲ್ಲಿ ಸಂಘಟನೆ ಕುರಿತ ಒಂದು ಪ್ಲೀನಮ್ ಅಂದರೆ ವಿಶೇಷ ಅಧಿವೇಶನವನ್ನು ನಡೆಸುತ್ತಿದೆ. ದೇಶದಲ್ಲಿ ಅನಾವರಣಗೊಳ್ಳುತ್ತಿರುವ ಬಲಪಂಥೀಯ ದಾಳಿಗಳನ್ನು ಎದುರಿಸಲಿಕ್ಕಾಗಿ ಪಕ್ಷದ ಸಂಘಟನೆಯನ್ನು ಬಲಗೊಳಿಸುವುದು ಹೇಗೆ ಎಂಬುದನ್ನು ಚರ್ಚಿಸಲಿಕ್ಕಾಗಿ ಇದನ್ನು ನಡೆಸಲಾಗುತ್ತಿದೆ. ನವ-ಉದಾರವಾದ, ಕೋಮುವಾದ ಮತ್ತು ಸರ್ವಾಧಿಕಾರಶಾಹಿಯ ಬಲಪಂಥೀಯ ಆಕ್ರಮಣಗಳನ್ನು ಎದುರಿಸಿ ಹೋರಾಡಬೇಕು ಎಂದು ಸಿಪಿಐ(ಎಂ)ನ 21ನೇ ಮಹಾಧಿವೇಶನ ಕರೆ ನೀಡಿತ್ತು. ಈ ಶಕ್ತಿಗಳ ವಿರುದ್ಧ ಪರಿಣಾಮಕಾರಿ ಹೋರಾಟಕ್ಕೆ ಪಕ್ಷದ ಸಂಘಟನೆಯನ್ನು ಸಜ್ಜುಗೊಳಿಸಬೇಕಾಗಿದೆ.

21ನೇ ಮಹಾಧಿವೇಶನದಲ್ಲಿ ಅಂಗೀಕರಿಸಿದ ರಾಜಕೀಯ-ಕಾರ್ಯತಂತ್ರಾತ್ಮಕ ಧೋರಣೆ ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗವನ್ನು ಕಟ್ಟುವುದಕ್ಕೆ ಮತ್ತೆ ಆದ್ಯತೆಯನ್ನು ನೀಡಿದೆ. ಇದು ಸಾಧ್ಯವಾಗಬೇಕಾದರೆ ಪಕ್ಷದ ಸ್ವತಂತ್ರ ಶಕ್ತಿ ಅಗಾಧವಾಗಿ ಹೆಚ್ಚಬೇಕಾಗಿದೆ. ಪಕ್ಷದ ಸಂಘಟನೆ ವರ್ಗ ಮತ್ತು ಸಾಮೂಹಿಕ ಹೋರಾಟಗಳನ್ನು ಮುಂದೊಯ್ಯಲು ಸಮರ್ಥವಾದಾಗ ಮಾತ್ರವೇ ಇದು ಈಡೇರಬಲ್ಲದು.

ಈ ಪ್ಲೀನಮ್ ಸಿಪಿಐ(ಎಂ) ಚುನಾವಣಾ ಹಿನ್ನಡೆಗಳನ್ನು ಎದುರಿಸಬೇಕಾಗಿರುವ ಸಂದರ್ಭದಲ್ಲಿ ನಡೆಯುತ್ತಿದೆ. ದೇಶದಲ್ಲಿ ಒಟ್ಟಾರೆಯಾಗಿ ಸಿಪಿಐ(ಎಂ)ನ ಸಾಮೂಹಿಕ ಪ್ರಭಾವ ಇಳಿಮುಖವಾಗುತ್ತಿದೆ. ಆದ್ದರಿಂದ **ಈ ಪ್ಲೀನಮ್ ಸಭೆ ಸಾಮೂಹಿಕ ನೆಲೆಗಟ್ಟು ಇರುವ ಒಂದು ಬಲಿಷ್ಟ ಅಖಿಲ ಭಾರತ ಕಮ್ಯುನಿಸ್ಟ್ ಪಕ್ಷವನ್ನು ಹೇಗೆ ಕಟ್ಟುವುದು ಎಂಬುದರ ಮೇಲೆ ಗಮನ ಕೇಂದ್ರೀಕರಿಸುತ್ತದೆ. ವರ್ಗ ಹೋರಾಟಗಳನ್ನು ಮತ್ತು ಸಾಮೂಹಿಕ ಆಂದೋಲನಗಳನ್ನು ಬೆಳೆಸಲು ಮತ್ತು ಮುಂದೊಯ್ಯಲು ಒಂದು ಸಾಮೂಹಿಕ ಧೋರಣೆಯ ಮಾರ್ಗವನ್ನು ಅಂಗೀಕರಿಸುವುದು ಮತ್ತು ಜನತೆಯೊಡನೆ ಜೀವಂತ ಸಂಪರ್ಕಗಳನ್ನು ಬೆಸೆಯುವುದು ಈ ದಿಕ್ಕಿನಲ್ಲಿ ಒಂದು ಪ್ರಮುಖ, ಮಹತ್ವದ ಪ್ರಶ್ನೆ.**

ಇಂತಹ ಧೋರಣೆಯ ಮಾರ್ಗವನ್ನು ಅಂಗೀಕರಿಸಬೇಕಾದರೆ ಮೇಲಿನಿಂದ ಕೆಳಗಿನ ವರೆಗೆ ಕೆಲಸದ ಶೈಲಿಯಲ್ಲಿ ಬದಲಾವಣೆ ತರಬೇಕಾಗಿದೆ. ಜನತೆಯೊಡನೆ ಇರುವುದು, ಜನಸಮೂಹಗಳಿಂದ ಕಲಿಯುವುದು ಮತ್ತು ಮತ್ತೆ ಜನಗಳತ್ತ ಹೋಗುವ ಕೆಲಸದ ಶೈಲಿ ಬೇಕಾಗಿದೆ. ಅಂದರೆ ಸಂಘಟನೆಯ ನಿರ್ವಹಣೆಯ ಚರ್ವಿತ ಚರ್ವಣವಾಗಿರುವ, ಕೇವಲ ವಾಡಿಕೆಯಾಗಿ ಬಿಟ್ಟಿರುವ ದಾರಿಗಳನ್ನು ತ್ಯಜಿಸಬೇಕು.

ನವ-ಉದಾರವಾದಿ ಧೋರಣೆಗಳಿಂದಾಗಿ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳಲ್ಲಿ ಪ್ರಮುಖ ಬದಲಾವಣೆಗಳಾಗಿವೆ. ವಿವಿಧ ವರ್ಗಗಳ ಮೇಲೆ ಅವು ಪರಿಣಾಮ ಬೀರಿವೆ. ಕಮಿಕ ವರ್ಗ, ರೈತಾಪಿ ವರ್ಗ, ಗ್ರಾಮೀಣ ಕಾರ್ಮಿಕರು ಮತ್ತು ಮಧ್ಯಮ ವರ್ಗಗಳ ಮೇಲೆ ಇವುಗಳ ಪ್ರಭಾವವನ್ನು ಅಧ್ಯಯನ ಮಾಡಿ ಹೊಸ ಘೋಷಣೆಗಳನ್ನು, ಕಾರ್ಯತಂತ್ರಗಳನ್ನು ಮತ್ತು ಸಂಘಟನಾ ಕೆಲಸ ಸ್ವರೂಪಗಳನ್ನು ಅಂಗೀಕರಿಸಬೇಕಾಗಿದೆ. ವರ್ಗ ಮತ್ತು ಸಾಮೂಹಿಕ ಆಂದೋಲನಗಳನ್ನು ಬೆಳೆಸಲು ಇದು ಅಗತ್ಯ. ಪ್ಲೀನಮ್ ಈ ಪ್ರಶ್ನೆಗಳನ್ನು ಚರ್ಚಿಸಲಿದೆ.

ಸಿಪಿಐ(ಎಂ) ದೇಶದ ಅತಿ ದೊಡ್ಡ ಎಡಪಕ್ಷ, 10ಲಕ್ಷ 48 ಸಾವಿರ ಸದಸ್ಯರನ್ನು ಹೊಂದಿದೆ. ಪ್ರಾಥಮಿಕ ಘಟಕಗಳಾಗಿ 90ಸಾವಿರಕ್ಕಿಂತ ಹೆಚ್ಚು ಶಾಖೆಗಳಿವೆ; 285 ಜಿಲ್ಲಾಸಮಿತಿಗಳ, 23 ರಾಜ್ಯಸಮಿತಿಗಳು ಮತ್ತು ಮೂರು ರಾಜ್ಯ ಸಂಘಟನಾ ಸಮಿತಿಗಳನ್ನು ಹೊಂದಿದೆ. ಪೂರ್ಣಕಾಲದ ಕಾರ್ಯಕರ್ತರ ಸಂಖ್ಯೆ ಸುಮಾರು 10,350.

ಇದು ಪಕ್ಷದ ದೊಡ್ಡ ಸಂಘಟನಾ ಆಸ್ತಿ. ಪ್ಲೀನಮ್ ಪಕ್ಷದ ಸಂಘಟನೆಯ ಬಲ ಮತ್ತು ನ್ಯೂನ್ಯತೆಗಳನ್ನು ಪರೀಕ್ಷಿಸುತ್ತದೆ ಮತ್ತು ಸಂಘಟನೆಯನ್ನು ಸುಸಜ್ಜಿತಗೊಳಿಸುವ ಕ್ರಮಗಳನ್ನು ನಿರ್ಧರಿಸಲಿದೆ. ಪಕ್ಷದ ಸದಸ್ಯರ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಅವರ ರಾಜಕೀಯ-ಸೈದ್ಧಾಂತಿಕ ಮಟ್ಟವನ್ನು ಏರಿಸಲು ವಿಶೇಷ ಒತ್ತು ನೀಡಲಾಗುವುದು.

ರಾಜಕೀಯ-ಸೈದ್ಧಾಂತಿಕ ಮಟ್ಟವನ್ನು ಏರಿಸಲು ವಿಶೇಷ ಒತ್ತು ನೀಡುವುದಷ್ಟೇ ಅಲ್ಲ. ಪಕ್ಷದ ಕ್ರಾಂತಿಕಾರಿ ಗುಣಮಟ್ಟವನ್ನು ಉಳಿಸಿಕೊಳ್ಳಬೇಕಾದರೆ ಮೂಲ ವರ್ಗಗಳಿಂದ, ಮಹಿಳೆಯರು ಮತ್ತು ಸಾಮಾಜಿಕವಾಗಿ ಶೋಷಿತರಾಗಿರುವ ವರ್ಗಗಳಿಂದ ಕಾರ್ಯಕರ್ತರನ್ನು ನೇತೃತ್ವದ ಸಮಿತಿಗಳಿಗೆ ಬಡ್ತಿಗೊಳಿಸಬೇಕು. ಪಕ್ಷಕ್ಕೆ ಯುವಜನರನ್ನು ಸೆಳೆಯಲು ಮತ್ತು ಪಕ್ಷದ ಯುವ ಸದಸ್ಯತ್ವ ಸಂಯೋಜನೆಯನ್ನು ಉತ್ತಮ ಪಡಿಸಲು ಪ್ಲೀನಮ್ ವಿಶೇಷ ಗಮನ ನೀಡುತ್ತದೆ.

ಸಿಪಿಐ(ಎಂ) ಲೆನಿನ್‌ವಾದಿ ಸಂಘಟನಾ ನೀತಿಯನ್ನು ಆಧರಿಸಿರುವ ಒಂದು ಪಕ್ಷ. ಆದ್ದರಿಂದ ಪ್ರಜಾಸತ್ತಾತ್ಮಕ ಕೇಂದ್ರವಾದದ ನೀತಿಗೆ ಪ್ರಧಾನ ಸ್ಥಾನವಿದೆ. ಪ್ರಜಾಸತ್ತಾತ್ಮಕ ಕೇಂದ್ರವಾದ ಎಂಬುದು ಕೇಂದ್ರವಾದ ಮತ್ತು ಪ್ರಜಾಪ್ರಭುತ್ವ ಇವೆರಡನ್ನು ಬೆಸೆದಿರುವಂತದ್ದು. ಅದರ ಜಾರಿಗೆ ಒಂದು ನಿರಂತರ ಹೋರಾಟ ಬೇಕಾಗುತ್ತದೆ. ಸಂಘಟನೆಯ ಪ್ರಸಕ್ತ ಪರಿಸ್ಥಿತಿಯಲ್ಲಿ ಪ್ರಜಾಸತ್ತಾತ್ಮಕ ಕೇಂದ್ರವಾದ ಸರಿಯಾಗಿ ಕೆಲಸ ಮಾಡುವಂತಾಗಲು ಪಕ್ಷದೊಳಗಿನ ಪ್ರಜಾಪ್ರಭುತ್ವವನ್ನು ಬಲಗೊಳಿಸಬೇಕು. ಪ್ಲೀನಮ್ ಪಕ್ಷದ ಸಂಘಟನೆಯಲ್ಲಿ ಈ ನೀತಿ ಹೇಗೆ ಕೆಲಸ ಮಾಡುತ್ತಿದೆ ಎಂದು ಪರೀಕ್ಷಿಸುತ್ತದೆ, ಮತ್ತು ಪ್ರಜಾಸತ್ತಾತ್ಮಕ ಕೇಂದ್ರವಾದದ ಯಾವುದೇ ವಿಕೃತಿ ಅಥವಾ ಉಲ್ಲಂಘನೆ ನಡೆಯುತ್ತಿದ್ದರೆ ಅದನ್ನು ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳುತ್ತದೆ.

ಸೈದ್ಧಾಂತಿಕ ಹೋರಾಟ ಪಕ್ಷದ ಸಂಘಟನಾ ಕೆಲಸದ ಒಂದು ಮಹತ್ವದ ಭಾಗ. ನಮ್ಮ ಸಮಾಜದಲ್ಲಿ ಇರುವ ಬೂರ್ಜ್ವಾ ಮತ್ತು ಬಂಡವಾಳಶಾಹಿ-ಪೂರ್ವ ತತ್ವಸಿದ್ಧಾಂತಗಳ ನಿರ್ದಿಷ್ಟ ಸ್ವರೂಪಗಳ ವಿರುದ್ಧ ಪಕ್ಷ ಮಾರ್ಕ್ಸ್‌ವಾದ-ಲೆನಿನ್‌ವಾದದ ಆಧಾರದಲ್ಲಿ ಒಂದು ಹೋರಾಟವನ್ನು ನಡೆಸಿಕೊಂಡು ಬಂದಿದೆ. ಜಾಗತೀಕರಣ ಮತ್ತು ನವ-ಉದಾರವಾದದ ಉದಯದೊಂದಿಗೆ ಹೊಸ ಸವಾಲುಗಳು ಎದುರಾಗಿವೆ. 1990ರ ದಶಕದಲ್ಲಿ ಸಮಾಜವಾದಕ್ಕೆ ಆದ ಹಿನ್ನಡೆಗಳು ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸಿವೆ. ನವ-ಉದಾರವಾದಿ ಮೌಲ್ಯಗಳು ಸಮಾಜವನ್ನು ಆವರಿಸಿವೆ, ಮಾಧ್ಯಮಗಳು ಅವನ್ನು ಹರಡಿಸುವಲ್ಲಿ ಒಂದು ದೊಡ್ಡ ಪಾತ್ರವನ್ನು ವಹಿಸಿವೆ. ಪಕ್ಷ ಈ ಶಕ್ತಿಗಳ ವಿರುದ್ಧ ಸೈದ್ಧಾಂತಿಕ ಹೋರಾಟವನ್ನು ಎತ್ತಿಕೊಳ್ಳಬೇಕಾಗಿದೆ. ಇದಕ್ಕೆ ಪಕ್ಷ ತನ್ನ ಕಾರ್ಯಕರ್ತರನ್ನು ಸೈದ್ಧಾಂತಿಕವಾಗಿ ಸಜ್ಜುಗೊಳಿಸಬೇಕು. ಪಕ್ಷದ ಆಂತರಿಕ ಸೈದ್ಧಾಂತಿಕ ಕೆಲಸವನ್ನು ಮೇಲ್ದರ್ಜೆಗೆ ಏರಿಸಬೇಕು ಮತ್ತು ಪಕ್ಷದ ಶಿಕ್ಷಣ ವ್ಯವಸ್ಥೆಯನ್ನು ಪುನರ್ರಚಿಸಬೇಕು.

ಪ್ಲೀನಮ್ ತಾತ್ವಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಕೋಮುವಾದದ ವಿರುದ್ಧ ಕೈಗೊಳ್ಳಬೇಕಾದ ಮೂರ್ತ ಕ್ರಮಗಳನ್ನು ಕೂಡ ಚರ್ಚಿಸುತ್ತದೆ. ಪಕ್ಷ, ಕಾರ್ಮಿಕ ಸಂಘಗಳು ಮತ್ತು ಸಾಮೂಹಿಕ ಸಂಘಟನೆಗಳು ಕೋಮುವಾದಿ ತತ್ವಗಳನ್ನು ಎದುರಿಸಬಲ್ಲ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ರೂಪಿಸಬೇಕು ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಪಸರಿಸಬೇಕು.

ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಸ್ವತಂತ್ರ ಮತ್ತು ಪ್ರಜಾಸತ್ತಾತ್ಮಕ ನಿರ್ವಹಣೆಯನ್ನು ಬಲಪಡಿಸುವುದು ಹೇಗೆ ಎಂಬುದು ಪ್ಲೀನಮ್‌ನಲ್ಲಿ ಚರ್ಚೆಯ ಒಂದು ಪ್ರಮುಖ ಕ್ಷೇತ್ರ. ಸಾಮೂಹಿಕ ಸಂಘಟನೆಗಳೊಳಗೆ ಕಮ್ಯುನಿಸ್ಟರ ರಾಜಕೀಯ ಕೆಲಸದ ಮತ್ತು ಜನಗಳನ್ನು ಸಾಮೂಹಿಕ ಸಂಘಟನೆಗಳ ಸುತ್ತ ಅಣಿನೆರೆಸಿ ರಾಜಕೀಯಕರಣಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಪರಾಮರ್ಶೆ ಅಗತ್ಯವಾಗಿದೆ. ಪಕ್ಷ ಸಾಮಾಜಿಕ ಪ್ರಶ್ನೆಗಳನ್ನು ಸಕ್ರಿಯವಾಗಿ ಎತ್ತಿಕೊಳ್ಳುತ್ತಿದೆ, ಸಾಮಾಜಿಕ ದಮನ ಮತ್ತು ತಾರತಮ್ಯಗಳ ವಿರುದ್ಧ ಹೋರಾಡುತ್ತಿದೆ. ಆದಿವಾಸಿಗಳು, ದಲಿತರು ಮತ್ತು ಅಲ್ಪಸಂಖ್ಯಾತರ ನಡುವೆ ವೇದಿಕೆಗಳನ್ನು ರಚಿಸುವ ಹೊಸ ಹೆಜ್ಜೆಗಳನ್ನು ಮುಂದೊಯ್ಯಬೇಕು. ನಗರ ಪ್ರದೇಶಗಳಲ್ಲಿ, ಅದರಲ್ಲೂ ನಗರದ ಬಡಜನರ ನಡುವೆ ಕೆಲಸ ಮಾಡಲು ಹೊಸದಾಗಿ ಮುತುವರ್ಜಿ ವಹಿಸಬೇಕಾಗಿದೆ.



ಕಮ್ಯುನಿಸ್ಟರಿಗೆ ಬ್ರಿಟಿಶರ ಆಳ್ವಿಕೆಯ ವಿರುದ್ಧ ಹೋರಾಟದಲ್ಲಿ ಮತ್ತು ದುಡಿಯುವ ಜನಗಳ ಸಂಘಟನೆಗಳನ್ನು ಕಟ್ಟುವಲ್ಲಿ ಪಥಪ್ರದರ್ಶನ ಮಾಡಿರುವ ಒಂದು ಭವ್ಯ ಇತಿಹಾಸವಿದೆ. ಜನಗಳ ಹೋರಾಟಗಳಿಗೆ ನೇತೃತ್ವ ನೀಡುವಲ್ಲಿ ಅವರು ವಿಭಿನ್ನ ಸಮಯಗಳಲ್ಲಿ ನಿರ್ದಯ ದಮನವನ್ನು ಎದುರಿಸಿದ್ದಾರೆ. ಆದರೆ ಅದರಿಂದೇನೂ ಸಿಪಿಐ(ಎಂ) ಜನಗಳನ್ನು ನವ-ಉದಾರವಾದಿ ಧೋರಣೆಗಳ ವಿರುದ್ಧ, ಕೋಮುವಾದ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ಅಣಿನೆರೆಸುವುದನ್ನು ನಿಲ್ಲಿಸಲು ಸಾಧ್ಯವಾಗಿಲ್ಲ.

ಈಗ, ಸಿಪಿಐ(ಎಂ) ಮತ್ತು ಎಡ ಆಂದೋಲನದ ಅತ್ಯಂತ ಬಲಿಷ್ಟ ನೆಲೆಯಾದ ಪಶ್ಚಿಮ ಬಂಗಾಲ ತೃಣಮೂಲ ಕಾಂಗ್ರೆಸಿನ ಆಳ್ವಿಕೆಯಲ್ಲಿ ದಮನ ಮತ್ತು ಭಯೋತ್ಪಾದನೆಯನ್ನು ಎದುರಿಸುತ್ತಿದೆ. ಈ ದಾಳಿಗಳಿಗೆ ಎದುರಾಗಿ ಸಿಪಿಐ(ಎಂ) ಜನರ ನಡುವೆಯೇ ಮುಂದುವರೆದು, ಅವರಿಗಾಗಿ ಹೋರಾಡುತ್ತಿದೆ. ಈ ಪ್ರತಿರೋಧ ಮತ್ತು ಪ್ರಜಾಪ್ರಭುತ್ವಕ್ಕಾಗಿ ಹಾಗೂ ಜನಗಳ ಹಕ್ಕುಗಳಿಗಾಗಿ ಹೋರಾಟದಲ್ಲಿ ಕೊಲ್ಕತಾದಲ್ಲಿ ಸಂಘಟನೆಯ ಪ್ಲೀನಮ್ ಒಂದು ಮೈಲಿಗಲ್ಲು. ಇದು ದೇಶಾದ್ಯಂತ ಸಾಮೂಹಿಕ ನೆಲೆ ಹೊಂದಿರುವ ಒಂದು ಬಲಿಷ್ಟ ಅಖಿಲ ಭಾರತ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಲು ಒಂದು ಸ್ಪಷ್ಟ ದಿಕ್ಕನ್ನು ತೋರಿಸುತ್ತದೆ. ●

ಉತ್ತಮ ಭಾರತವನ್ನು ಕಟ್ಟುವ ಚಾರಿತ್ರಿಕ ಜವಾಬ್ದಾರಿ ಈಡೇರಿಸಲು

ಸೀತಾರಾಂ ಯೆಚೂರಿ

ಸಿಪಿಐ(ಎಂ)ನ ಈ ಹಿಂದಿನ ಸಂಘಟನಾ ಪ್ಲೀನಮ್ ಎಂದರೆ ಡಿಸೆಂಬರ್ 1978ರಲ್ಲಿ ನಡೆದ ಸಾಲ್ಕಿಯಾ ಪ್ಲೀನಮ್. ಅದು ಪಕ್ಷದ 10ನೇ ಮಹಾಧಿವೇಶನದ ನಂತರ ನಡೆಯಿತು. ಅದು ಸಿಪಿಐ(ಎಂ)ನ ಉನ್ನತಿಯ ಕಾಲ, ದೇಶದಲ್ಲಿ ಅತ್ಯಂತ ಬಲಿಷ್ಟ ಎಡ ಕಮ್ಯುನಿಸ್ಟ್ ಪಕ್ಷವಾಗಿ ಉದಯಿಸಿತ್ತು. ಅದು ಸೋವಿಯೆತ್ ಒಕ್ಕೂಟದ ನೇತೃತ್ವದಲ್ಲಿ ಸಮಾಜವಾದೀ ಬಣ ಜಾಗತಿಕ ಸಾಮ್ರಾಜ್ಯಶಾಹಿಗೆ ಸಮಬಲವಾಗಿ ಸವಾಲು ಒಡ್ಡಿದ್ದ ಅವಧಿ ಕೂಡ.

ಅಂದಿಗೆ ಹೋಲಿಸಿದರೆ ಇಂದು, ನಾವು ಕೊಲ್ಕತಾದಲ್ಲಿ ಸಂಘಟನಾ ಪ್ಲೀನಮ್‌ಗೆ ಸೇರುತ್ತಿರುವುದು ಜಾಗತಿಕ ಮಟ್ಟದಲ್ಲಿ ಸಾಮ್ರಾಜ್ಯಶಾಹಿಗೆ ಪ್ರತಿ ಸವಾಲು ಹಾಕಿದ್ದ ಸಮಾಜವಾದಿ ಶಕ್ತಿ ವಿಘಟನೆ ಹೊಂದಿರುವ ಸಂದರ್ಭದಲ್ಲಿ, ಭಾರತೀಯ ಆಳುವ ವರ್ಗಗಳು ಕೋಮುವಾದಿ ಮತ್ತು ನವ-ಉದಾರವಾದಿ ಆಕ್ರಮಣಗಳನ್ನು ಒಟ್ಟಾಗಿ ನಡೆಸುತ್ತಿರುವ ಸಂದರ್ಭದಲ್ಲಿ. ನಮ್ಮ ಪಕ್ಷದ ಬಲ ಮತ್ತು ಪ್ರಭಾವ ಕೂಡ ಅದಕ್ಕೆ ಸಂವಾದಿಯೆನ್ನುವಂತೆ ಸಂಸತ್ತಿನ ಒಳಗೂ ಮತ್ತು ಹೊರಗೂ ಸ್ಥಗಿತತೆ ಅಥವ ಇಳಿಮುಖತೆ ಅನುಭವಿಸುತ್ತಿದೆ.

ಪಕ್ಷ ತನ್ನ ಸ್ವತಂತ್ರ ಬಲವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನಗಳೊಂದಿಗೆ ದೇಶದಲ್ಲಿ ಎಡಪಕ್ಷಗಳ ಮತ್ತು ಶಕ್ತಿಗಳ ಐಕ್ಯತೆಯನ್ನು ವಿಸ್ತರಿಸಬೇಕಾಗಿದೆ, ಬಲಪಡಿಸಬೇಕಾಗಿದೆ. ಇದರಿಂದ ಏರ್ಪಡುವ ಎಡ ಐಕ್ಯತೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯನ್ನು ಬೆಸೆಯುವ ಸನ್ನೆಗೋಲಾಗುತ್ತದೆ.

ಸಿಪಿಐ(ಎಂ)ನ ಕಣ್ಣೋಟದಲ್ಲಿ, ಒಂದು ಉತ್ತಮ ಭಾರತವನ್ನು ಕಟ್ಟಲು ಮತ್ತು ಜನತೆಗೆ ಉತ್ತಮ ಜೀವನಾಧಾರಗಳನ್ನು ಕಲ್ಪಿಸಲು ನಮ್ಮ ದೇಶದ ಭೌತಿಕ ಮತ್ತು ಮಾನವ ಸಂಪನ್ಮೂಲಗಳೆರಡನ್ನೂ ಪರ್ಯಾಯ ಧೋರಣೆಗಳ ಮೂಲಕ ಬಳಸಬೇಕು. ಈಗ ಭಾರತೀಯ ಆಳುವ ವರ್ಗಗಳು ಈ ಸಂಪನ್ಮೂಲಗಳನ್ನು ತಮ್ಮ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳಲು, ಶ್ರೀಮಂತರು ಮತ್ತು ಬಡವರ ನಡುವೆ ಕಂದರವನ್ನು ಇನ್ನಷ್ಟು ಹೆಚ್ಚಿಸಲು ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಗರಿಷ್ಠ ಲಾಭ ಗಿಟ್ಟಿಸುವ ಹೆಚ್ಚಿನ ಅವಕಾಶಗಳನ್ನು ಒದಗಿಸಲು ಬಳಸುತ್ತಿವೆ.

ಆದರೆ ಸಿಪಿಐ(ಎಂ)ನ ಕಣ್ಣೋಟ ಸಾಕಾರಗೊಳ್ಳಬೇಕಾದರೆ ಅದರ ಸಂಘಟನಾ ಸಾಮರ್ಥ್ಯಗಳನ್ನು ಅಗಾಧವಾಗಿ ಬಲಪಡಿಸಬೇಕಾಗಿದೆ. ಅದರ ಸಂಘಟನೆಯನ್ನು ಸುಸಜ್ಜಿತಗೊಳಿಸಿ ಹೊಸದೊಂದು ಚೈತನ್ಯದೊಂದಿಗೆ ಮೂಡಿ ಬರುವಂತೆ ಮಾಡಬೇಕಾಗಿದೆ.

ಈಗಿನ ಮೂರ್ತ ಸನ್ನಿವೇಶದಲ್ಲಿ, ನವ-ಉದಾರವಾದಿ ಸುಧಾರಣೆಗಳು ಮತ್ತು ನಮ್ಮ ಸಮಾಜದ ಉನ್ಮತ್ತ ಕೋಮುವಾದೀಕರಣ ಭಾರತೀಯ ಆಳುವ ವರ್ಗಗಳ ಧೋರಣೆಯ ದಿಕ್ಕಾಗಿ ಸಮ್ಮಿಳಿತಗೊಂಡು ಪ್ರಸಕ್ತ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಅಡಿಯಲ್ಲಿ ಸಾಮ್ರಾಜ್ಯಶಾಹಿ ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿಗಳನ್ನು ಈಡೇರಿಸುತ್ತಿರುವಾಗ ಇದು ಇನ್ನಷ್ಟು ಮಹತ್ವದ್ದಾಗಿದೆ.

ಇಂತಹ ಸಂದರ್ಭದಲ್ಲಿ ನಾವು ಸಿಪಿಐ(ಎಂ) ಪಡೆದಿರುವ ಪರಂಪರೆಯನ್ನು ನೆನಪಿಸಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯಕ್ಕಾಗಿ ಮತ್ತು ನಂತರ ಭಾರತೀಯ ಜನತೆಯ ಆಂದೋಲನಗಳಲ್ಲಿ ನಮ್ಮ ಸಂಗಾತಿಗಳ ಭವ್ಯ ತ್ಯಾಗ-ಬಲಿದಾನಗಳು, ನಮ್ಮ ಧೀರ ಹುತಾತ್ಮರ ಪಟ್ಟಿ ತುಂಬಾ ದೀರ್ಘವಾಗಿದೆ. ಭಾರತದಲ್ಲಿ ಎಲ್ಲ ಸೈದ್ಧಾಂತಿಕ ಮತ್ತು ಸಂಘಟನಾ ಮಾರ್ಗಚ್ಯುತಿಗಳನ್ನು ಎದುರಿಸುತ್ತ ಅತ್ಯಂತ ಬಲಿಷ್ಟ ಕಮ್ಯುನಿಸ್ಟ್ ಶಕ್ತಿಯಾಗಿ ಮೂಡಿ ಬರುವಂತೆ ಮಾಡಿರುವ ಪರಂಪರೆಯಿದು.

ಯಾವುದೇ ಸಾಮಾಜಿಕ ಪರಿವರ್ತನೆ, ಎಲ್ಲ ಶೋಷಿತ ವರ್ಗಗಳಿಗೆ ಸೇರಿದ ವಿಶಾಲ ಜನಸಮೂಹಗಳು ಶೋಷಕ ಆಳುವ ವರ್ಗಗಳ ವಿರುದ್ಧ ಬಂಡೇಳದೆ ಸಾಧ್ಯವಾಗುವುದಿಲ್ಲ, ಅಷ್ಟೇ ಏಕೆ, ಅದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಅಂತಿಮವಾಗಿ, ಇತಿಹಾಸ ನಿರ್ಮಿಸುವವರು ಜನತೆಯೇ. ಕ್ರಾಂತಿಕಾರಿ ಇತಿಹಾಸವೂ ಇದಕ್ಕೆ ಅಪವಾದವಲ್ಲ. ಒಂದು ಕ್ರಾಂತಿಕಾರಿ ಪಕ್ಷ, ಸಿಪಿಐ(ಎಂ) ಈ ಜನತೆಯ ಉತ್ಕ್ರಾಂತಿಯ ಮುಂಚೂಣಿ. ಇದು ನಮ್ಮ ಚಾರಿತ್ರಿಕ ಜವಾಬ್ದಾರಿ. ಈ ಜವಾಬ್ದಾರಿಯನ್ನು ನಿಭಾಯಿಸುವ ನಮ್ಮ ದೃಢನಿರ್ಧಾರವನ್ನು ಈ ಕೊಲ್ಕತಾ ಪ್ಲೀನಮ್‌ನಲ್ಲಿ ದ್ವಿಗುಣಗೊಳಿಸೋಣ.

ವಸಂತ

“ದೂರ ಪಯಣದ ಕಠಿಣ ಹಾದಿಯಲ್ಲಿ ಬೆಳಕಿನ ಕಿರಣ – ಜನನುಡಿ”



ಜನನುಡಿ ಮೂರನೇ ವರ್ಷಕ್ಕೆ ಕಾಲಿಟ್ಟಿದೆ. ಜನನುಡಿ 2015 ಎಲ್ಲರ ನಿರೀಕ್ಷೆಗಳನ್ನು ಮೀರಿ ಹೊಸ ಎತ್ತರಕ್ಕೆ ಏರಿದೆ ಎನ್ನುವುದು, ಈವರೆಗಿನ ಮೂರೂ ಜನನುಡಿ ಸಮಾವೇಶಗಳಲ್ಲಿ ಭಾಗವಹಿಸಿದ ಎಲ್ಲರ ಒಮ್ಮತದ ಅಭಿಪ್ರಾಯ. 'ಮುಖ್ಯವಾಹಿನಿ'ಯ ಪತ್ರಿಕೆಗಳ ನಿರ್ಲಕ್ಷವನ್ನು ಒಡೆದು ಅವುಗಳ ರಾಜ್ಯ ಪುಟಗಳಿಗೂ ಲಗ್ಗೆ ಇಟ್ಟು ವಿವರವಾಗಿ ವರದಿಯಾದದ್ದರಿಂದ, ಜನನುಡಿ 2015ರ ವರದಿ ಅಗತ್ಯವೇ ಇಲ್ಲ ಎಂಬಂತಾಗಿದೆ. ಆದ್ದರಿಂದ ಜನನುಡಿ 2015ರ ಯಶಸ್ಸಿನ ಅರ್ಥೈಸುವಿಕೆ ಮತ್ತು ಒಂದು ಅನಿಸಿಕೆ ಇಲ್ಲಿದೆ. ಅದರ ಜತೆಗೆ ಅಲ್ಲಿ ಅಂಗೀಕರಿಸಲಾದ 'ಬದ್ಧತೆ ಘೋಷಣೆ' ಮತ್ತು ಕೇಳಿ ಬಂದ ಕೆಲವು ನುಡಿಗಳು ಮಾತ್ರ ಇಲ್ಲಿವೆ.

ಏರಿದ ಹೊಸ ಎತ್ತರಗಳು

ಜನನುಡಿ 2015 ಏರಿದ ಹೊಸ ಎತ್ತರಗಳು ಏನು? ದೊಡ್ಡಸಂಖ್ಯಾತ್ಮಕ ನೆಗೆತ ಕಣ್ಣಿಗೆ ಹೊಡೆಯುವಂತೆ ಕಾಣುತ್ತಿತ್ತು. ಉದ್ಘಾಟನಾ ಗೋಷ್ಠಿಯಲ್ಲಿ ಸುಮಾರು 750 ಮಂದಿ ಭಾಗವಹಿಸಿದ್ದರೆ, ಎರಡೂ ದಿನಗಳನ್ನೂ ಸೇರಿ ಸಾವಿರಕ್ಕೂ ಹೆಚ್ಚು ಜನ ಕಿಕ್ಕಿರಿದು ಸೇರಿದ್ದರು. ಇವರಲ್ಲಿ ಹೆಚ್ಚಿನವರು ಎರಡೂ ದಿನ ಇದ್ದು ಎಲ್ಲಾ ಗೋಷ್ಠಿಗಳಲ್ಲಿ ಭಾಗವಹಿಸಿದರು. ಬಹುಶಃ ಇದರಲ್ಲಿ ಅರ್ಧದಷ್ಟು ರಾಜ್ಯದ ವಿವಿಧ ಜಿಲ್ಲೆಗಳಿಂದ, ಕಲಬುರ್ಗಿಯಿಂದ ಮೈಸೂರಿನವರೆಗೆ ಶಿವಮೊಗ್ಗದಿಂದ ಕೋಲಾರದವರೆಗೆ, ಬಂದವರು. ಹಿಂದೆಂದಿಗಿಂತಲೂ ರಾಜ್ಯದ ವಿವಿಧ ಭಾಗಗಳೂ ಹೆಚ್ಚಿನ ಪ್ರಾತಿನಿಧ್ಯ ಪಡೆದಿದ್ದವು. ಯುವಜನರು ಬಹುಸಂಖ್ಯಾತರಾಗಿದ್ದು (ಬಹುಶಃ ಸುಮಾರು ಶೇ.70 ಇರಬಹುದು) ಹಲವು ಪ್ರಗತಿಪರ ಚಳುವಳಿಗಳ ಈ ದೊಡ್ಡ ಕೊರತೆಯನ್ನು ಜನನುಡಿ 2015 ಮೆಟ್ಟಿ ನಿಂತಿದ್ದು, ಅತ್ಯಂತ ಮಹತ್ವದ್ದೂ ಸ್ಫೂರ್ತಿದಾಯಕವೂ ಆಗಿತ್ತು. ಮುಸ್ಲಿಮರು, ದಲಿತರು, ಹಿಂದುಳಿದವರು, ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿದ್ದರು. ಅದರಲ್ಲೂ ಮುಸ್ಲಿಮ್ ಮಹಿಳೆಯರ ಪಾಲ್ಗೊಳ್ಳುವಿಕೆ ಗಮನಾರ್ಹವಾಗಿತ್ತು. ಈ ವ್ಯಾಪಕ ಪ್ರಾತಿನಿಧ್ಯ ಊಟದಲ್ಲೂ ಪರಿಣಾಮ ಉಂಟು ಮಾಡಿತ್ತು. ಬಂಗುಡೆ ಮೀನು ಮತ್ತು ಚಿಕನ್ ಇತರ ಸಾಹಿತ್ಯಕ/ಸಾಂಸ್ಕೃತಿಕ ಸಮಾವೇಶಗಳಂತೆ ಗೈರು ಹಾಜರಾಗಿರಲಿಲ್ಲ ಅಥವಾ 'ನಾನ್-ವೆಜ್ ಕಾರ್ನರ್'ನಲ್ಲಿ ಇರಲಿಲ್ಲ. 'ಮುಖ್ಯವಾಹಿನಿ' ಟೆಬಲಿನಲ್ಲೇ ಮಿಂಚುತ್ತಿತ್ತು!

ಗುಣಾತ್ಮಕವಾಗಿಯೂ ಪಾಲುಗೊಂಡವರ ಹಿನ್ನೆಲೆ ಹಿಂದಿಗಿಂತಲೂ ಹೆಚ್ಚು ವೈವಿಧ್ಯಮಯವಾಗಿತ್ತು. ಸಾಹಿತಿಗಳು, ಕಲಾವಿದರು, ಸಮಾಜ ವಿಜ್ಞಾನಿಗಳು, ಪತ್ರಕರ್ತರು, ಬುದ್ಧಿಜೀವಿಗಳು; ವಿದ್ಯಾರ್ಥಿ/ಯುವ/ಮಹಿಳಾ/ರೈತ/ಕಾರ್ಮಿಕ ಚಳುವಳಿಗಳಲ್ಲಿ ತೊಡಗಿದವರು; ಮಾನವ ಹಕ್ಕು, ಸಾಮಾಜಿಕ ಸೇವಾ ಸಂಘಟನೆಗಳ, ಎನ್.ಜಿ.ಒ.ಗಳ, ರಾಜಕೀಯ ಪಕ್ಷಗಳ ನಾಯಕರು/ಕಾರ್ಯಕರ್ತರು; ವಿದ್ಯಾರ್ಥಿಗಳ– ಅಭೂತಪೂರ್ವ ಸಂಗಮವಾಗಿತ್ತು. ಮೊದಲ ಬಾರಿಗೆ ಜನನುಡಿಗೆ ಬಂದವರು ಸಾಕಷ್ಟು ಸಂಖ್ಯೆಯಲ್ಲಿ ಇದ್ದರು. ಅಂಬೇಡ್ಕರ್‌ವಾದಿಗಳು, ಗಾಂಧಿವಾದಿಗಳು, ಲೋಹಿಯಾವಾದಿಗಳು, ಮಾರ್ಕ್ಸ್‌ವಾದಿಗಳು, ಮಹಿಳಾವಾದಿಗಳು – ಹೀಗೆ ಹಲವು ಸಿದ್ಧಾಂತಗಳ ಒಲವು ಇರುವವರಿಗೂ ಮತ್ತು ಯಾವುದೇ ನಿರ್ದಿಷ್ಟ ಸಿದ್ಧಾಂತಕ್ಕೆ ಒಲಿಯದ ಹಲವು ಕೋಮುವಾದಿ–ವಿರೋಧಿ ವ್ಯಕ್ತಿಗಳಿಗೂ ಜನನುಡಿ ತಮ್ಮ ವೇದಿಕೆ ಎನಿಸಿತ್ತು.

ಜಿಲ್ಲಾಧಿಕಾರಿ 'ಜನನುಡಿ' ಕೇಳಿಸಿಕೊಂಡರು!

ದಕ್ಷಿಣ ಕನ್ನಡದ ಜಿಲ್ಲಾಧಿಕಾರಿ ಸೇರಿದಂತೆ ಕೆಲವು ಅಧಿಕಾರಿಗಳು ಪ್ರೇಕ್ಷಕರಾಗಿ ಬಂದು ಕುಳಿತದ್ದು ವಿಶೇಷವಾಗಿತ್ತು. ಹಿಂದಿನ ಎರಡು ಸಮಾವೇಶಗಳಲ್ಲಿ 'ಕಾದು ನೋಡುತ್ತಿದ್ದವರು', ವಿವಿಧ ಕಾರಣಗಳಿಗಾಗಿ ದೂರ ಉಳಿದವರು ಸಹ ಈ ಬಾರಿ ಜನನುಡಿಯನ್ನು ತಮ್ಮದಾಗಿಸಿಕೊಂಡಿದ್ದರು. ಬಂದ ಎಲ್ಲರೂ ಎಲ್ಲದರಲ್ಲೂ ಪಾಲುಗೊಂಡು ಸಂಘಟಕರು ಮತ್ತು ಪಾಲುಗೊಂಡವರ, ಭಾಷಣಕಾರರ ಮತ್ತು ಕೇಳುಗರ ಮಧ್ಯೆ ಗೆರೆಗಳು ಅಳಿಸಿಹೋಗಿತ್ತು. ಹೆಚ್ಚಿನ ಗೋಷ್ಠಿಗಳು ಸಂವಾದಾತ್ಮಕವಾಗಿದ್ದವು. ಕೆಲವು ಗೋಷ್ಠಿಗಳಲ್ಲಿ ಬಿಸಿ ಬಿಸಿ ಚರ್ಚೆಯಾಯಿತು. ಈ ಹೊಸ ಎತ್ತರಗಳು ಸಾಧ್ಯವಾದದ್ದು ಡಾ. ಕಲಬುರ್ಗಿ ಹತ್ಯಾ-ನಂತರದ ಸಾಂಸ್ಕೃತಿಕ ಸಂಚಲನದ ಭಾಗವಾಗಿ ಎಂದು ಮರೆಯುವಂತಿಲ್ಲ. ಆದರೆ ನುಡಿಸಿರಿಯ ಮತ್ತು ಇತರ ಕೋಮುವಾದಿ ಪಾಳೆಯಗಾರಿ ಶಕ್ತಿಗಳಿಗೆ ಸೆಡ್ಡು ಹೊಡೆದು ಹಿಂದಿನ ಎರಡು ಜನನುಡಿಗಳ ಅಣಿ ನೆರೆಸುವಿಕೆ ನೀಡಿದ ಸ್ಫೂರ್ತಿ ಆತ್ಮವಿಶ್ವಾಸ ಸಹ ದೊಡ್ಡ ಪಾತ್ರ ವಹಿಸಿದೆ.

ಮಾತ್ರವಲ್ಲ ಈ ಬಾರಿಯ ಸಮಾವೇಶಕ್ಕೆ ಮೊದಲು – ಪತ್ರಿಕಾ ಗೋಷ್ಠಿಗಳ ಮೂಲಕ, ಸಾಮಾಜಿಕ ಮಾಧ್ಯಮಗಳಲ್ಲಿ ಅರ್ಥಪೂರ್ಣ ಸುಂದರ ಪೋಸ್ಟರುಗಳ ಮೂಲಕ – ಸಂಘಟಕರು ಮಾಡಿದ ವ್ಯಾಪಕ ಪ್ರಚಾರ ಸಹ ದೊಡ್ಡ ಸಂಚಲನ ಮೂಡಿಸಿತು. ಸಮಾವೇಶ ನಡೆಯುತ್ತಿರುವಾಗಲೂ ಆ ಮೇಲೂ ಫೇಸ್ ಬುಕ್, ಯೂ ಟ್ಯೂಬ್ ಮುಂತಾದವುಗಳ ಮೂಲಕ ಇನ್ನೂ ಹೆಚ್ಚು ಜನರನ್ನು ತಲುಪಿದ್ದು ಈ ಬಾರಿಯ ವಿಶೇಷವಾಗಿತ್ತು. ಕೋಮುವಾದಿಗಳ ವಿರುದ್ಧ ಹೋರಾಟವನ್ನು ಸಾಮಾಜಿಕ ಮಾಧ್ಯಮಗಳಿಗೆ ವ್ಯವಸ್ಥಿತವಾಗಿ ಒಯ್ದದ್ದು ಅತ್ಯಂತ ಗಮನಾರ್ಹ.

ವೇದಿಕೆಯಾಗಿರಬೇಕೆ? ಬೀದಿಗೆ ಬರಬೇಕೆ?

ಜನನುಡಿ 2015ರಲ್ಲಿ ಚರ್ಚೆಗೊಳಗಾದ ವಿಷಯಗಳೇನು? ಗೋಷ್ಠಿಗಳ ವಿಷಯ ಸೂಚಿಸುವುದು ಅಲ್ಲದೆಯೂ ಹಲವು ವಿಷಯಗಳು ಚರ್ಚೆಗೊಳಗಾದವು. ಅದು ಹೆಚ್ಚಾಗಿ ಜನನುಡಿಯ ಸ್ವರೂಪ, ಮುಂದಿನ ನಡೆ ಇವುಗಳ ಬಗ್ಗೆ ಇದ್ದವು. ಇವು ಸಮಾವೇಶದ ಮೊದಲೂ ಸಮಾವೇಶದ ವೇದಿಕೆಯಲ್ಲೂ ಕೆಳಗೂ, ಹೊರಗೂ ಚರ್ಚೆಗೆ ಒಳಗಾದವು. ದೇವನೂರ ಮಹಾದೇವ ರಿಂದ ಉದ್ಘಾಟನಾ ಗೋಷ್ಠಿಯಲ್ಲಿ ಆರಂಭವಾಗಿ ಸಮಾರೋಪದಲ್ಲಿ ದಿನೇಶ ಅಮಿನ್ ಮಟ್ಟು ವರೆಗೆ ಹಬ್ಬಿದ ಒಂದು ಬಹುಚರ್ಚಿತ ವಿಷಯ – ಜನನುಡಿ ನುಡಿಸಿರಿ ಅಥವಾ ಕೋಮುವಾದಿ ಶಕ್ತಿಗಳ ಕ್ರಿಯೆಗೆ ಪ್ರತಿಕ್ರಿಯೆಗೆ ಸೀಮಿತಗೊಳ್ಳದೆ, ಸ್ವತಂತ್ರ ಸಕಾರಾತ್ಮಕ ಕ್ರಿಯೆಯಲ್ಲಿ ತೊಡಗಬೇಕು ಎಂಬುದು. ಬಹುಪಾಲು ಇದನ್ನು ಅನುಮೋದಿಸಿದರೂ, ಸಾಂಸ್ಕೃತಿಕ ರಾಜಕಾರಣದ ಮುಖವಾಡಗಳನ್ನು ಕಳಚಿ ಹಾಕುವತ್ತ ಅದರ ಹಿಂದಿರುವ ಸಂಘಟಿತ ಶಕ್ತಿಗಳನ್ನು ಹೆಸರಿಸುವ ಬಯಲು ಮಾಡುವ ಪ್ರತಿಕ್ರಿಯೆಯ ಅಗತ್ಯದ ಬಗೆಗೂ ಒತ್ತು ಕೊಡಲಾಯಿತು.

'ಜನನುಡಿ' ಹಾಲ್ ಒಂದರಲ್ಲಿ ವರ್ಷಕ್ಕೊಮ್ಮೆ ಸೇರುವ ಬರಿಯ ಸಮಾವೇಶ ಆಗಬೇಕೆ ಅಥವಾ ಬೀದಿಗೆ ಬಂದು ಹೋರಾಟ ಮಾಡುವ ಸಂಘಟನೆ ಆಗಬೇಕೆ ಎಂಬುದು ಇನ್ನೊಂದು ಬಹುಚರ್ಚಿತ ವಿಷಯವಾಗಿತ್ತು. ಜನನುಡಿ ಈಗಿನ ತುರ್ತು ಅಗತ್ಯವಾದ 'ಕೋಮುವಾದಿ–ವಿರೋಧಿ ಐಕ್ಯ ಚಳುವಳಿಯ ಜಂಟಿ ವೇದಿಕೆ'ಯಾಗಿ ಹೊಮ್ಮಿದೆ. ಜನನುಡಿ, ಸಾಂಸ್ಕೃತಿಕ ರಾಜಕಾರಣದ ವಿರುದ್ಧ, ಬೀದಿಯಲ್ಲಿ ಸೇರಿದಂತೆ ಎಲ್ಲಾ ರೀತಿಯ ಹೋರಾಟ ನಡೆಸುತ್ತಿರುವ ಸಂಘಟನೆಗಳ ಮತ್ತು ವ್ಯಕ್ತಿಗಳ ವೇದಿಕೆ. ಈ ಎಲ್ಲಾ ಹೋರಾಟಗಳ ಅನುಭವಗಳನ್ನು ಹಂಚಿಕೊಳ್ಳುವ, ವಿಶ್ಲೇಷಿಸುವ, ಹೊಸ ನಡೆಗಳಿಗೆ ಐಡಿಯಾ ಹಾಗೂ ಸ್ಫೂರ್ತಿ ಪಡೆಯುವ ವೇದಿಕೆ. ಜನನುಡಿ ಒಂದು ವೇದಿಕೆಯಾಗಿ, 'ಸಾಂಸ್ಕೃತಿಕ ಪರಿವಾರ' ಆಗಿ ಮುಂದುವರೆಯಲಿ. ಇನ್ನೊಂದು ಸಂಘಟನೆಯಾಗುವುದು ಬೇಡ. ಜನನುಡಿಯಲ್ಲಿರುವ ಸಂಘಟನೆಗಳ ಸ್ವಾಯತ್ತತೆ–ಗೆ ಭಂಗ ತರುವುದು ಬೇಡ. ನಿಲುವುಗಳ ಬಗ್ಗೆ ಭಿನ್ನಾಭಿಪ್ರಾಯಗಳ ಸಂಘಟನಾ ಸೂತ್ರಗಳ ಹೊಸ ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳುವುದು ಬೇಡ – ಎಂದು ವ್ಯಕ್ತವಾದ ಪ್ರಮುಖ ಅಭಿಪ್ರಾಯ.

ಸಂಘಟನೆಯಾಗದೆ, ಬರಿಯ ವಾರ್ಷಿಕ ಸಮಾವೇಶಗಳಿಗೆ ಸೀಮಿತವಾಗದೆ, ಈ 'ಪರಿವಾರ'ದ ಬೌದ್ಧಿಕ ಸಂಪನ್ಮೂಲ, ವ್ಯಾಪಕ ತಲುಪುವಿಕೆ, ಜನನುಡಿ 'ಬ್ರಾಂಡು' ಮೂಡಿಸಬಲ್ಲ ಐಕ್ಯತೆ ಸ್ಫೂರ್ತಿಗಳನ್ನು ಸಮರ್ಥವಾಗಿ ಬಳಸುವ ಇತರ ಹಲವು ಚಟುವಟಿಕೆಗಳು ಕಾರ್ಯಾಚರಣೆಗಳನ್ನು ಹಮ್ಮಿಕೊಳ್ಳುವುದು ಸಾಧ್ಯವಿಲ್ಲವೆ? ಕೆಲವು ಚಳುವಳಿ/ಚಟುವಟಿಕೆಗಳನ್ನು 'ಜನನುಡಿ'ಯಾಗಿ ಸಂಘಟಿಸುವುದು ಒಳ್ಳೆಯದಲ್ಲವೇ? ಜನನುಡಿ ಚಾರಿತ್ರಿಕ ಕಾರಣಗಳಿಗೆ ವಾರ್ಷಿಕವಾಗಿ 'ಕೋಮುವಾದಿ ರಾಜಧಾನಿ' ಮಂಗಳೂರಿನಲ್ಲೇ

ಪುಟ 16 ಕ್ಕೆ

'ಜನನುಡಿ'ಯಲ್ಲಿ ಕೇಳಿ ಬಂದ ಕೆಲವು ನುಡಿಗಳು

ಅತ್ಯಾಚಾರಕ್ಕೆ ಒಳಗಾದ ಹೆಣ್ಣು ಮಗಳನ್ನು ಹೊಗಳಿದ ಸಮಯದಲ್ಲೂ ಮಾತ್ರ ಹೋರಾಡುವ ಹೋರಾಟಗಾರರ ಜಾಯಮಾನವಾ ಇದು? ನಮ್ಮ ಆಶಯಗಳಿಗೆ ಕ್ರಿಯಾಶೀಲರಾಗಬೇಕಾದರೆ ನಾವು ಶ್ರಮಜೀವಿಗಳಾಗಬೇಕಿದೆ. ನಾವು ಸಮುದಾಯಗಳ ಮನದೊಳಕ್ಕೆ ಇಳಿಯಬೇಕಾಗಿದೆ. ಜನನುಡಿಯು ಆಳ್ವಾಸ್ ನುಡಿಸಿರಿಗೆ ಪ್ರತಿಕ್ರಿಯೆಯ ರೂಪದಲ್ಲಿ ಹುಟ್ಟಿದೆ. ಅದು ಈಗ ಪೊರೆ ಕಳಚಿ ಹೊಸಹುಟ್ಟು ಪಡೆಯಬೇಕಾಗಿದೆ. ಸಮುದಾಯದ ಮನಸ್ಸಿನ ತಾಯಿಬಳ್ಳಿಗೆ ಮತ್ತೆ ಕಸಿ ಮಾಡಿಕೊಂಡು ನಮ್ಮ ಮಾತು ಸಮುದಾಯದ ಮಾತೂ ಆಗಬೇಕಾಗಿದೆ. ಅದಕ್ಕಾಗಿ ನಾವು ಸಾಂಸ್ಕೃತಿಕ ಕಣ್ಣು ಪಡೆಯಬೇಕಾಗಿದೆ. ಈ ಸಾಂಸ್ಕೃತಿಕ ಕಣ್ಣಿಗಾಗಿ ನಾವು ತಪಸ್ಸು ಮಾಡಬೇಕಾಗಿದೆ.

–ದೇವನೂರ ಮಹಾದೇವ,
ಉದ್ಘಾಟನಾ ಭಾಷಣದಲ್ಲಿ

ಪ್ರತಿಕ್ರಿಯೆಗಳಿಗಿಂತ ಕ್ರಿಯೆಗಳು ಜಾಸ್ತಿಯಾಗಲಿ. ಮೌಢ್ಯಾಚರಣೆ ವಿರುದ್ಧಕ್ಕಿಂತ ವೈಚಾರಿಕೆಪರ, ಕೋಮುವಾದದ ವಿರುದ್ಧ ಮಾತಾಡುವುದಕ್ಕಿಂತ ಸೌಹಾರ್ದದ ಪರ ನಮ್ಮ ದನಿ ಹೆಚ್ಚಾಗಲಿ.

– ಡಾ.ಶ್ರೀನಿವಾಸಕ್ಕಿಲ್ಲಾಯ
ಉದ್ಘಾಟನಾ ಗೋಷ್ಠಿಯಲಿ

ಪಠ್ಯಪುಸ್ತಕಗಳಲ್ಲಿ ಬ್ರಾಹ್ಮಣ ಮೌಲ್ಯಗಳನ್ನು, ಸಂಕುಚಿತ ಭಾವನೆಗಳನ್ನು, ಧರ್ಮಗಳ ನಡುವೆ ವಿಷಬೀಜ ಬಿತ್ತುವಂಥ ಚಿಂತನೆಗಳನನು ಹೇರಲಾಗಿದೆ. ಶೂದ್ರ ಸಂಸ್ಕೃತಿಯನ್ನು ತಿರಸ್ಕಾರ ಮಾಡಲಾಗಿದೆ. ದೇಶದ ಸೌಂದರ್ಯ ಇರುವುದೇ ಬಹುತ್ವದಲ್ಲಿ. ಇದನ್ನು ಅರ್ಥ ಮಾಡಿಕೊಳ್ಳದೆ ಇರುವ ಸಾಂಸ್ಕೃತಿಕ ಬಡತನದ ಕಾರಣಗಳಿಂದಲೇ ಇಂತಹ ವ್ಯತಿರಿಕ್ತ ಪ್ರತಿಕ್ರಿಯೆಗಳು ಹುಟ್ಟಿಕೊಳ್ಳುತ್ತವೆ.

–ಪ್ರೊ. ರಹಮತ್ ತರೀಕೆರೆ,
ಸಮಾರೋಪದಲ್ಲಿ

ಬಸವಣ್ಣ, ಬುದ್ಧ, ಅಂಬೇಡ್ಕರ್, ಪೆರಿಯಾರ್, ನಾರಾಯಣ ಗುರುಗಳು ಆಯಾ ಕಾಲಘಟ್ಟದಲ್ಲಿ ಅಸಹಿಷ್ಣುತೆ ವಿರುದ್ಧವೇ ಹೋರಾಟ ಮಾಡಿದವರು. ಆದರೆ ಈಗ ಈ ಅಸಿಷ್ಣುತೆಯ ವಿರುದ್ಧ ಹೋರಾಟವನ್ನು ದಮನಿಸಲು ಪ್ರಭುತ್ವವೇ ಬೆಂಗಾವಲಾಗಿ ನಿಂತಿದೆ. ಸಂವಿಧಾನೇತರ ಶಕ್ತಿಗಳು ದೇಶದ ಜನಪ್ರತಿನಿಧಿಗಳನ್ನೇ ಕೈಗೊಂಬೆಯಾಗಿ ಮಾಡಿ ಆಡಳಿತ ನಡೆಸುತ್ತಿವೆ. ಇದು ಅತ್ಯಂತ ಅಪಾಯಕಾರಿ.

– ದಿನೇಶ್ ಅಮೀನ್‌ಮಟ್ಟು,
ಸಮಾರೋಪದಲ್ಲಿ



ಬೆಂಗಳೂರಿನಲ್ಲಿ ಶ್ರದ್ಧಾಂಜಲಿ

ಡಿಸೆಂಬರ್ 23ರಂದು ಬೆಳಿಗ್ಗೆ ನಿಧನರಾದ ಕಾಂ॥ಪ್ರಸನ್ನಕುಮಾರ್‌ರವರ ಪಾರ್ಥಿವ ಶರೀರವನ್ನು ಆಸ್ಪತ್ರೆಯಿಂದ ನೇರವಾಗಿ ಮಹಾಲಕ್ಷ್ಮೀ ಲೇಔಟ್ ಹತ್ತಿರದ ಸಿಪಿಐ(ಎಂ) ರಾಜ್ಯಕಛೇರಿ, ಇ.ಎಂ.ಎಸ್. ಭವನದಲ್ಲಿ ತಂದು ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು. ಸುದ್ದಿ ಹರಡುತ್ತಿದ್ದಂತೆ ನೂರಾರು ಕಾರ್ಮಿಕರು, ಸಿಐಟಿಯು ಮತ್ತು ಇತರ ಕೇಂದ್ರೀಯ ಟಿ.ಯು.ಗಳ, ಎಡ ಮತ್ತಿತರ ರಾಜಕೀಯ ಪಕ್ಷಗಳ ನಾಯಕರು/ಕಾರ್ಯಕರ್ತರು, ಸ್ನೇಹಿತರು, ಅಪಾರ ಅಭಿಮಾನಿ ಬಳಗ ಇ.ಎಂ.ಎಸ್. ಭವನದತ್ತ ಧಾವಿಸಿ ಬಂದರು. ಇತರ ರಾಜ್ಯಗಳಿಂದಲೂ, ದೆಹಲಿಯಿಂದಲೂ ಹಲವು ನಾಯಕರು ಬಂದು ಅಂತಿಮ ನಮನ ಸಲ್ಲಿಸಿದರು. ಮಧ್ಯರಾತ್ರಿ 2 ಗಂಟೆಯ ವರೆಗೆ ಜನ ಬರುತ್ತಲೇ ಇದ್ದರು. ಆ ನಂತರ ಕಾಂ॥ಪ್ರಸನ್ನಕುಮಾರ್‌ರವರ ಪಾರ್ಥಿವ ಶರೀರವನ್ನು ಅವರ ಸ್ವಂತ ಊರಾದ ಬಳ್ಳಾರಿಗೆ ಒಯ್ಯಲಾಯಿತು. ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಲೆಂದು ಬೆಂಗಳೂರಿಂದ ಅವರ ಸ್ನೇಹಿತರು, ಅಭಿಮಾನಿಗಳು ಬಸ್ಸು ಮತ್ತು ಇತರ ವಾಹನಗಳಲ್ಲಿ ತೆರಳಿದರು.

ದೆಹಲಿಯಿಂದ ಆಗಮಿಸಿದ ಸಿಐಟಿಯು ಅ.ಭಾ. ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ॥ಎಂ.ಎ.ಬೇಬಿ, ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯ ಕಾ.ವಿ.ಜೆ.ಕೆ.ನಾಯರ್; ಚೆನ್ನೈನಿಂದ ಬಂದ ಸಿಪಿಐ(ಎಂ) ತಮಿಳುನಾಡು ಸಿಐಟಿಯು ಕಾರ್ಯದರ್ಶಿ ಕಾ. ಸುಕುಮಾರನ್: ಸುಪ್ರೀಂ ಕೋರ್ಟ್‌ನ ನ್ಯಾಯಧೀಶರಾದ ಕೆ.ಗೋಪಾಲಗೌಡರವರು ಮತ್ತು ಎ.ಐ.ಟಿ.ಯು.ಸಿ. ಅ.ಭಾ. ಉಪಾಧ್ಯಕ್ಷರಾದ ಮಹಾದೇವನ್, ಸಿ.ಪಿ.ಐ. ಮುಖಂಡರಾದ ಸಿದ್ದನಗೌಡ ಪಾಟೀಲ್, ಎಸ್.ಯು.ಸಿ.ಐ ಮುಖಂಡರಾದ ಕೆ.ರಾಧಾಕೃಷ್ಣ, ಕಾಂ. ಉಮಾ, ಎಚ್.ಎಂ.ಎಸ್ ರಾಜ್ಯ ಮುಖಂಡರಾದ ಶ್ರೀಕಂಠಮೂರ್ತಿ, ಸಿ.ಪಿ.ಐ(ಎಂ.ಎಲ್) ಮುಖಂಡರಾದ ಅಪ್ಪಣ್ಣ, ಎ.ಐ.ಯು.ಟಿ.ಯು.ಸಿ ವೇಣುಗೋಪಾಲ್‌ರವರೂ, ಟಿಯುಸಿಸಿಯಿಂದ ಶಿವಶಂಕರ್, ಸೇರಿದಂತೆ ಮತ್ತು ಹಲವು ಜಿಲ್ಲೆಗಳಿಂದ ಬಂದ ಹಲವು ಕಾರ್ಮಿಕ ಮುಖಂಡರು, ವಿದ್ಯಾರ್ಥಿಯುವಜನ ಮಹಿಳಾ ಮತ್ತು ಸಾಂಸ್ಕೃತಿಕ ಸಂಘಟನೆಯ ಮುಖಂಡರುಗಳು ದುಃಖತಪ್ತ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಶ್ರದ್ಧಾಂಜಲಿ ಸಭೆ

ಸುಮಾರು 4 ಗಂಟೆಗೆ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮಾನವ ಧರ್ಮಪೀಠ, ನಿಡುಮಾಮಿಡಿ ಮಠದ ಶ್ರೀ ವೀರಭದ್ರಚನ್ನಮಲ್ಲ ಸ್ವಾಮೀಜಿ ಮಾತನಾಡಿ ಪ್ರಸನ್ನರವರು ಅತ್ಯಂತ ಹೆಚ್ಚಿನ ಜನ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದವರು. ಅವರ ನಿಧನ ರಾಜ್ಯದ ಕಾರ್ಮಿಕ ಮತ್ತು ಎಡ ಚಳುವಳಿಗೆ ತುಂಬಲಾರದ ನಷ್ಟವಾಗಿದೆ. ದುಃಖತಪ್ತ ಕುಟುಂಬಕ್ಕೆ ಮತ್ತು ಸಿ.ಪಿ.ಐ(ಎಂ) ಪಕ್ಷಕ್ಕೆ ಈ ನಷ್ಟವನ್ನು ಭರಿಸುವ ಶಕ್ತಿ ಬರಲಿ" ಎಂದರು.


ಸಿಪಿಐ(ಎಂ) ಪಕ್ಷದರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ ವಿದ್ಯಾರ್ಥಿ ಚಳುವಳಿಯಿಂದ ಎಡಚಿಂತನೆಯನ್ನು ಮೈಗೂಡಿಸಿಕೊಂಡ ಕಾಂ॥ಪ್ರಸನ್ನಕುಮಾರ್‌ರವರು, ಹಲವು ಕಾರ್ಮಿಕ ಚಳುವಳಿಯ ನೇತಾರರಾಗಿ ಬೆಳೆದು ಬಂದು ಇಷ್ಟು ಚಿಕ್ಕ ವಯಸ್ಸಿನಲ್ಲಿ ನಮ್ಮನ್ನು ಅಗಲಿದ್ದಾರೆ. ಇವರ ಅಗಲಿಕೆ ಕಾರ್ಮಿಕ ಮತ್ತು ಪ್ರಜಾಪ್ರಭುತ್ವ ಚಳುವಳಿಗೆ ಆದ ನಷ್ಟವೆಂದು ಕಂಬನಿ ಮಿಡಿದು, ಪ್ರಸನ್ನರವರು ಯಾವಜನರಿಗಾಗಿ ಕೆಲಸ ಮಾಡಿದರೋ ಅಂತಹಜನರನ್ನು ಸಂಘಟಿಸಿ ಚಳುವಳಿಯನ್ನು ಕಟ್ಟಿಬೆಳೆಸುವುದೇ ನಾವು ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಎಂದರು.

ಸಭೆಯನ್ನುದ್ದೇಶಿಸಿ ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರುಗಳಾದ ಕಾಂ. ಜಿ.ಎನ್ ನಾಗರಾಜ್‌ರವರು ಮಾತನಾಡಿ ಬಳ್ಳಾರಿಯಲ್ಲಿ ಆಗಿನ ಭೂ ಮಾಫಿಯಾಗಳ ವಿರುದ್ಧ ಬೇರೆಯಾರು ಎದುರು ನಿಲ್ಲುವ ಧೈರ್ಯತೋರದ ಸಂದರ್ಭದಲ್ಲೂ ಸಿಪಿಐ(ಎಂ) ಪಕ್ಷ ಮಾತ್ರ ಇಂತಹ ಭೂ ಮಾಫಿಯಾಗಳ ವಿರುದ್ಧ ನಿರಂತರ ಹೋರಾಟವನ್ನು ನಡೆಸುತ್ತಾ ಬಂದಿದ್ದು, ಅಂತಹ ಬಳ್ಳಾರಿ ಜಿಲ್ಲೆಯಲ್ಲಿ ಹಲವು ವರ್ಷಗಳ ಕಾಲ ಸಿಪಿಐ(ಎಂ)ವನ್ನು ಕಟ್ಟಿ ಬೆಳೆಸುವುದರಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದವರು ಮತ್ತು ರಾಜ್ಯದ ಕಾರ್ಮಿಕ ನಾಯಕರಾಗಿ ಬೆಳೆದವರು ಕಾಂ॥ಪ್ರಸನ್ನಕುಮಾರ್ ಎಂದು ಅವರ ಜೊತೆಗಿನ ದೀರ್ಘಕಾಲದ ನೆನಪುಗಳನ್ನು ಹಂಚಿಕೊಂಡರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಹಾಗೂ ಸಿಐಟಿಯು ಅ.ಭಾ. ಕಾರ್ಯದರ್ಶಿ ಕಾಂ॥ವರಲಕ್ಷ್ಮಿರವರು ಮಾತನಾಡಿ, ರಾಜ್ಯ ಮಟ್ಟದಲ್ಲಿ ಕಾರ್ಮಿಕರ ಪ್ರಶ್ನೆಗಳಿಗಾಗಿನ ಸಂಘರ್ಷಮಯವಾದ ಹೋರಾಟಗಳ ಅನುಭವವನ್ನು ಮೆಲುಕು ಹಾಕಿದರು. ಕಾರ್ಮಿಕ ಮುಖಂಡರಾದ ಕಾಂ.ಮೀನಾಕ್ಷಿಸುಂದರಂ, ಕೆ.ಎನ್ ಉಮೇಶ, ಕೆ.ಪ್ರಕಾಶ್ ಮತ್ತು ರೈತ ಮುಖಂಡರಾದ ಕಾಂ॥ಜಿ.ಸಿ.ಬೈಯ್ಯಾರೆಡ್ಡಿ, ಯವರುಗಳು ಮಾತನಾಡಿ ನುಡಿ ನಮನ ಸಲ್ಲಿಸಿದರು.

ಅಪಾರ ಸಂಖ್ಯೆಯಲ್ಲಿ ಸೇರಿದ್ದ ಕಾರ್ಮಿಕ ಬಂಧುಗಳ ಅಶ್ರುತರ್ಪಣದೊಂದಿಗೆ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಎ.ಐ.ಟಿ.ಯು.ಸಿ ರಾಜ್ಯ ಕಾರ್ಯದರ್ಶಿ ವಿಜಯಭಾಸ್ಕರ್‌ರವರು ಸಂತಾಪ ಸೂಚಿಸಿ ಮಾತನಾಡಿದರು.









ಶ್ರದ್ಧಾಂಜಲಿ ಸಂದೇಶಗಳು

ದೇಶದ ಹಲವಾರು ರಾಜ್ಯಗಳಿಂದ ಹರಿದು ಬಂದ ಶ್ರದ್ಧಾಂಜಲಿ ಸಂದೇಶಗಳನ್ನು ಓದಲಾಯಿತು. ಸಿಐಟಿಯು ಕೇಂದ್ರ ಸಮಿತಿ, ಒಡಿಸ್ಸಾದ ರಾಜ್ಯ ಸಮಿತಿ, ಕೇರಳ ರಾಜ್ಯ ಸಮಿತಿ, ಪಶ್ಚಿಮ ಬಂಗಾಳ ರಾಜ್ಯ ಸಮಿತಿ, ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ॥ಸೀತಾರಾಂ ಯೆಚೂರಿ, ಭಾರತೀಯ ಮಜ್ದೂರ್ ಸಂಘಟನೆಯ ಕರ್ನಾಟಕ ರಾಜ್ಯ ಸಮಿತಿ, ಎಲೆಕ್ಟ್ರಿಸಿಟಿ ಎಂಪ್ಲಾಯಿಸ್ಸ್ ಫೆಡರೇಷನ್ ಆಫ್ ಇಂಡಿಯಾ, ಭಾರತ್ ಎಲೆಕ್ಟ್ರೀಕಲ್ಸ್ ವರ್ಕರ್ಸ್ ಯೂನಿಯನ್, ಸಿಪಿಐ(ಎಂ) ಆಂಧ್ರಪ್ರದೇಶ ರಾಜ್ಯ ಸಮಿತಿ, ಕನಸ್ಟ್ರಕ್ಷನ್ ವರ್ಕರ್ಸ್ ಫೆಡರೇಷನ್ ಆಫ್ ಇಂಡಿಯಾದ ಕೇಂದ್ರ ಸಮಿತಿ, ಕಾರ್ಮಿಕ ಸಂಘಟನೆಯ ಹಲವು ಸಂಘಟನೆಗಳ ರಾಜ್ಯ ಸಮಿತಿಗಳು, ಬೇರೆ ಬೇರೆ ವಿಭಾಗ ಮಟ್ಟದ ಕಾರ್ಮಿಕ ಸಂಘಟನೆಯ ಮುಖಂಡರು ಮತ್ತು ಕಾರ್ಮಿಕರು ಶ್ರದ್ಧಾಂಜಲಿ ಸಂದೇಶಗಳನ್ನು ಕಳುಹಿಸಿದರು.

ಮರುದಿನ (ಡಿಸೆಂಬರ್ 24ರಂದು) ಬಳ್ಳಾರಿಯಲ್ಲಿ ಸುಮಾರು 11 ಗಂಟೆಗೆ ಅಂತ್ಯಸಂಸ್ಕಾರ ನಡೆಯುವುದು ಮತ್ತು ಜನವರಿ 17ರಂದು ಸಾರ್ವಜನಿಕ ಶ್ರದ್ಧಾಂಜಲಿ ಸಭೆಯನ್ನು ನಡೆಸುವುದಾಗಿ ಘೋಷಿಸಲಾಯಿತು.

ಬಳ್ಳಾರಿಯಲ್ಲಿ ಅಂತ್ಯ ಸಂಸ್ಕಾರ



ಕಾಂ. ಪ್ರಸನ್ನ ಅವರ ಪಾರ್ಥಿವ ಶರೀರವನ್ನು ಡಿಸೆಂಬರ್ 24 ರಂದು ಬಳ್ಳಾರಿಯಲ್ಲಿ ಪಕ್ಷದ ಜಿಲ್ಲಾ ಸಮಿತಿ ಕಚೇರಿಯ ಬಳಿ ಸಾರ್ವಜನಿಕ ದರ್ಶನಕ್ಕೆ ಇಡಲಾಯಿತು. ನೂರಾರು ಕಾರ್ಮಿಕರು, ದುಡಿಯುವ ಜನ, ರಾಜಕೀಯ ಪಕ್ಷಗಳ ಕಾರ್ಯಕರ್ತರು ನಾಯಕರು ಅಂತಿಮ ಮನ ಸಲ್ಲಿಸದರು. ಹಲವರು ನೆರೆಯ ಕರ್ನಾಟಕದ ಮತ್ತು ಆಂಧ್ರಪ್ರದೇಶದ ಜಿಲ್ಲೆಗಳಿಂದ ಬಂದಿದ್ದರು. ಪಕ್ಕದ ಮೈದಾನದಲ್ಲಿ ಶ್ರದ್ಧಾಂಜಲಿ ಸಭೆಯನ್ನು ನಡೆಸಲಾಯಿತು.

ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್‌ರವರು "ಕಾಮ್ರೇಡ್ ಪ್ರಸನ್ನ ನಮ್ಮ ಜೊತೆ ಇಲ್ಲ ಎಂಬುದನ್ನು ನಂಬಲು ಸಾಧ್ಯವಾಗುತ್ತಿಲ್ಲ, ಪ್ರಸನ್ನ ಕೇವಲ ರಾಜ್ಯದ ಕಾರ್ಮಿಕ ಚಳುವಳಿಗೆ

ಪುಟ 16 ಕ್ಕೆ



ಪ್ರಸಕ್ತ

ಕೆ.ಎಸ್. ವಿಮಲಾ

ಬಾಲಾಪರಾಧಿಗಳ ವಯೋಮಿತಿಯನ್ನು 16ಕ್ಕೆ ಇಳಿಸುವುದು ಏಕೆ ತಪ್ಪು?

ಕೊನೆಗೂ ಬಾಲಾಪರಾಧ ನ್ಯಾಯದ ಕಾಯ್ದೆ ತಿದ್ದುಪಡಿಗೆ ದೇಶದ ಉಭಯ ಸದನಗಳು ಅಂಗೀಕಾರ ನೀಡಿವೆ. ನಿರ್ಭಯಾ ಪ್ರಕರಣವೆಂದು ಪ್ರಖ್ಯಾತವಾದ ದೆಹಲಿಯ ಸಾಮೂಹಿಕ ಅತ್ಯಾಚಾರ, ಬರ್ಬರ ಹಿಂಸೆ ಕ್ರೌರ್ಯಗಳು ಈ ದೇಶ ಎಂದಿಗೂ ಮರೆಯಲಾರದ ಬೀಭತ್ಸ ನೆನಪು. ಆ ಘಟನೆಯ ಹಿಂದೆಯೇ ದೇಶದಾದ್ಯಂತ ಮತ್ತೊಮ್ಮೆ ಶಿಕ್ಷೆಯ ಕುರಿತು ಅಪರಾಧದ ಗಹನತೆಯ ಕುರಿತು ಚರ್ಚೆ ಗದ್ದಲ ಪ್ರತಿಭಟನೆಗಳೆಲ್ಲವೂ ನಡೆದವು. ಆಗಲೇ ಶುರುವಾದದ್ದು ಬಾಲಾಪರಾಧಿಗಳು, ಅವರು ಎಸಗುವ ಅಪರಾಧಗಳು, ಅವರಿಗೆ ಶಿಕ್ಷೆ, ಬಾಲಾಪರಾಧಿಗಳೆಂದು ಪರಿಗಣಿಸುವ ವಯಸ್ಸಿನ ಬಗ್ಗೆ ಹಲವು ಪ್ರಶ್ನೆಗಳು – ಇವು ದೇಶದಾದ್ಯಂತ ತೀವ್ರ ಚರ್ಚೆಗೆ ಒಳಗಾದವು. ಅಪರಾಧದ ಗಂಭೀರತೆ ಹೀನತೆಗಳ ಆಧಾರದಲ್ಲಿ ಶಿಕ್ಷೆಯನ್ನು ಪರಿಗಣಿಸಬೇಕೇ ಹೊರತೂ ಅಪರಾಧಿಯ ವಯಸ್ಸಿನ ಮೇಲಲ್ಲ ಎಂಬಿತ್ಯಾದಿ ಗಂಭೀರ ಚರ್ಚೆಗಳು ವಾಗ್ಯುದ್ದಗಳು ನಡೆದವು.

ಭಾವೋದ್ರೇಕಕ್ಕೆ ತಲೆಬಾಗಿದ ಬಿಜೆಪಿ ಸರ್ಕಾರ

ಈಗ ದೇಶದ ಉಭಯ ಸದನಗಳಲ್ಲಿ ಬಾಲಾಪರಾಧಿಗಳ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಲೋಕಸಭೆಯಲ್ಲಿ ಈ ಹಿಂದೆಯೇ ಅಂಗೀಕಾರವಾಗಿದ್ದ ಮಸೂದೆ ಅಂಗೀಕಾರಗೊಂಡಿದೆ. ರಾಜ್ಯಸಭೆಯಲ್ಲಿ ಇದನ್ನು ಸಿಪಿಐ(ಎಂ) ಪಕ್ಷದ ಸಂಸದರು ವಿರೋಧಿಸಿ ಸದನದಿಂದ ಹೊರನಡೆದಿದ್ದಾರೆ. ಈ ತಿದ್ದುಪಡಿ ದ್ವೇಷವನ್ನು ನ್ಯಾಯಸಮ್ಮತಗೊಳಿಸಿದೆ. ಈ ಹಿಂದೆ 18 ವರ್ಷದವರೆಗೂ ಅಪರಾಧಿಗಳನ್ನು ಬಾಲಾಪರಾಧಿಗಳೆಂದು ಪರಿಗಣಿಸಿ ಅವರಿಗೆ ಮೂರು ವರ್ಷಗಳ ಶಿಕ್ಷೆ ಮತ್ತು ಶಿಕ್ಷೆಯೂ ಕೂಡ ಅವರನ್ನು ಪರಿವರ್ತಿಸುವ ನೆಲೆಯಲ್ಲಿ ಬಾಲಾಪರಾಧಿ ಮಂದಿರಗಳಲ್ಲಿ ಇಡುವುದಾಗಿತ್ತು. ಈಗ ವಯೋಮಿತಿಯನ್ನು 18 ರಿಂದ 16ಕ್ಕೆ ಇಳಿಸಲಾಗಿದೆ. ಮತ್ತು ಅಪರಾಧಗಳ ಗಂಭೀರತೆಗೆ ಅನುಗುಣವಾಗಿ ಹೀನ ಅಪರಾಧಗಳಿಗೆ ಉಳಿದ ಅಪರಾಧಿಗಳಂತೆಯೇ 7 ವರ್ಷಗಳ ಸಜೆಯನ್ನು ಉಳಿದಂತೆ ಅಪರಾಧಗಳ ಆಧಾರದಲ್ಲಿ ಶಿಕ್ಷೆಯ ಪ್ರಮಾಣವಿರುತ್ತದೆ.

ವಿಪರ್ಯಾಸವೆಂದರೆ ಈ ಪ್ರಕರಣ–ಕ್ಕೆ ಸಂಬಂಧಿಸಿದಂತೆ ನಿರ್ಭಯಾ ಪ್ರಕರಣದಲ್ಲಿ ವಸ್ತುನಿಷ್ಟ ತನಿಖೆ ನಡೆಸಿ ಮಾದರಿ ಶಿಫಾರಸುಗಳನ್ನು ಕೊಟ್ಟ ಜಸ್ಟೀಸ್ ವರ್ಮಾ ಈ ತೆರನ ತಿದ್ದುಪಡಿಗಳಿಗೆ ಸಮ್ಮತಿಸಿರಲಿಲ್ಲ. ಯಾವುದೇ ಕಾನೂನು ರಚನೆ ಭಾವನಾತ್ಮಕ ನೆಲೆಯಲ್ಲಿ ಆಗಬಾರದು. ಆದರೆ ಕೇಂದ್ರದ ಬಿ.ಜೆ.ಪಿ.ಸರ್ಕಾರ ಈ ತೆರನ ಭಾವೋದ್ರೇಕದ ಸಾರ್ವಜನಿಕ ಒತ್ತಡಕ್ಕೆ ತಲೆಬಾಗಿದೆ. ನಿರ್ಭಯಾ ಪ್ರಕರಣದ ಒಬ್ಬ ಬಾಲಾಪರಾಧಿ 3 ವರ್ಷಗಳ ಶಿಕ್ಷೆ ನಂತರ ಬಿಡುಗಡೆಯಾಗುವುದಿತ್ತು. ಅದರ ವಿರುದ್ಧ ಕೋರ್ಟುಗಳಲ್ಲಿ ಹಾಕಿದ ಅರ್ಜಿಯನ್ನು ಸುಪ್ರೀಂ ಕೋರ್ಟು ತಳ್ಳಿ ಹಾಕಿ, ಅಂತಹ ಕಾನೂನು ಇಲ್ಲದಿರುವ ಬಗ್ಗೆ ಸೂಚಿಸಿತ್ತು. ಈ ವಿಷಯವನ್ನು ಎತ್ತಿಕೊಂಡು ನಿರ್ಭಯಾ ಪಾಲಕರನ್ನು ಮುಂದಿಟ್ಟುಕೊಂಡು ಹೀನ ಅಪರಾಧಗಳಿಗೆ ವಯೋಮಿತಿಯನ್ನು 18ರಿಂದ 16ಕ್ಕೆ ಇಳಿಸುವ ಕಾನೂನು ತಿದ್ದುಪಡಿ ಹೂಡಲು ಚಳುವಳಿ ಹೂಡಿತ್ತು. ಇದೇ ಅಧಿವೇಶನದಲ್ಲಿ ಅದನ್ನು ರಾಜ್ಯಸಭೆ ಪಾಸು ಮಾಡಬೇಕೆಂದು ಒತ್ತಡ ಹಾಕಿತ್ತು. ಈ ಒತ್ತಡ–ಕ್ಕೆ ತಲೆಬಾಗಿ ಬಿಜೆಪಿ ಸರ್ಕಾರ ಕಾಂಗ್ರೆಸ್ ಸೇರಿದಂತೆ ಕೆಲವು ವಿರೋಧ ಪಕ್ಷಗಳ ಬೆಂಬಲದೊಂದಿಗೆ ಈ ತಿದ್ದುಪಡಿಯನ್ನು ಪಾಸು ಮಾಡಿದೆ.

ತಿದ್ದುಪಡಿ ಬಾಲಾಪರಾಧಕ್ಕೆ ಪರಿಹಾರವಲ್ಲ

ಮೇಲ್ನೋಟಕ್ಕೆ ಮತ್ತು ನಿರ್ಭಯಾ ಅಲಿಯಾಸ್ ಜ್ಯೋತಿ ಸಿಂಗ್ ಮೇಲಿನ ಬರ್ಬರ ಹಿಂಸೆಗೆ ಕಾರಣರಾದಂಥವರಿಗೆ ಇದೂ ಕಡಿಮೆ ಶಿಕ್ಷೆಯೇ ಎನಿಸಬಹುದಾದರೂ ಇದು ಸೃಷ್ಟಿಸುವ ಅಪಾಯವನ್ನು ನಾವು ಮುಂಗಾಣಬೇಕು. ಈ ತಿದ್ದುಪಡಿಯಂತೆ 1997ರ ನಂತರ ಮತ್ತು ಈ ನಂತರ ಹುಟ್ಟಬಹುದಾದ ಎಲ್ಲ ಮಕ್ಕಳ ತಲೆಯ ಮೇಲೂ ತೂಗುವ ಕತ್ತಿ ಇದು. ಹಾಗೆಂದ ಮಾತ್ರಕ್ಕೆ ತನ್ನ ಮೂರು ವರ್ಷಗಳ ಶಿಕ್ಷೆಯ ಅವಧಿಯನ್ನು ಮುಗಿಸಿ ಡಿಸೆಂಬರ್ 20ರಂದು ಬಿಡುಗಡೆಹೊಂದಿದ ಅತ್ಯಾಚಾರದ ಅಪರಾಧಿಯನ್ನು ಶಿಕ್ಷಿಸಬಾರದಿತ್ತು ಎಂದಲ್ಲ. ಈ ಹಿಂದೆ ಇದ್ದಂತೆ ಬಾಲಾಪರಾಧಿಗಳನ್ನು ಶಿಕ್ಷೆಗೆ ಒಳಪಡಿಸಿಯೂ ವಿಶೇಷ ಆಸ್ಥೆಯಲ್ಲಿ ಪರಿವರ್ತನೆ ಮಾಡುವ, ಮತ್ತು ಸಮಾಜದಲ್ಲಿ ಸನ್ನಡತೆಯ ಪ್ರಜೆಗಳಾಗಿ ಬಾಳಲು ಬೇಕಾದ ಆಪ್ತಸಲಹೆ, ಶಿಕ್ಷಣ, ಮನೋಪರಿವರ್ತನೆಯ ಹಲವು ವಿಧಾನಗಳನ್ನು ಕೈಗೊಳ್ಳಲಾಗುತ್ತಿತ್ತು. ಈಗಿರುವ ಬಾಲಮಂದಿರಗಳು ಅಂಥಹ ಕಾರ್ಯಕ್ಷಮತೆಯನ್ನು ಹೊಂದಿಲ್ಲ ಅಥವಾ ಅಂಥದ್ದೊಂದರ ಅಗತ್ಯವಿದೆ ಎಂದು ಸರ್ಕಾರಗಳಿಗೆ ಅನಿಸಿಯೂ ಇಲ್ಲ ಎನ್ನುವ ಕೊರತೆ ಇದೆ. ಅದನ್ನು ಸರಿಪಡಿಸುವ ನಿಜವಾದ ನೆಲೆಯಲ್ಲಿ ಬಾಲಾಪರಾಧಿಗಳನ್ನು ಸರಿಮಾಡುವ ಕೆಲಸಕ್ಕೆ ಒತ್ತು ಕೊಡಬೇಕು. ಆದರೆ ಈ ನಂತರ 16ರ ವಯಸ್ಕರನ್ನೂ, ತಾನು ಮಾಡುವ ಕೃತ್ಯದ ಪರಿಣಾಮ ಗೊತ್ತಿದ್ದೂ ಎಸಗುವ ವಯಸ್ಕ ಖೈದಿಗಳ ಜೊತೆ ಕ್ರಿಮಿನಲ್ ಅಪರಾಧಿಗಳಂತೇ ಪರಿಗಣಿಸಲಾಗುತ್ತದೆ.

ಈಗ ನಮ್ಮ ಮುಂದೆ ಬರುವ ಪ್ರಶ್ನೆ ಇವತ್ತಿನ ಹಲವು ವಿಪರೀತ ಬೆಳವಣಿಗೆಗಳ ಕಾರಣದಿಂದ 12ರ ವಯೋಮಾನದ ಬಾಲಕರೂ ಲೈಂಗಿಕ ಅಪರಾಧಗಳಲ್ಲಿ ತೊಡಗಿಕೊಳ್ಳುತ್ತಿರುವ ಘಟನೆಗಳು ವರದಿಯಾಗುತ್ತಿವೆ. ಹಾಗಾದರೆ ಮುಂದಿನ ನಡೆ 16ನ್ನು 12 ಕ್ಕೆ ಮತ್ತೂ ಮುಂದಕ್ಕೆ ಇನ್ನೂ ಕಡಿಮೆ ಮಾಡುತ್ತಾ ಹೋಗುವುದೇ?

ಸಮಾಜದಲ್ಲಿ ಸರಿಪಡಿಸಬೇಕಾದ್ದು ಬೇರೆ–ಯೇ.. ನಮ್ಮ ಸುತ್ತಲಿನ ಪರಿಸರವನ್ನು ದೌರ್ಜನ್ಯ ಮುಕ್ತಗೊಳಿಸಲು ಅಗತ್ಯವಾದ ಕ್ರಮಗಳನ್ನು ರೂಢಿಸುವ ಬದಲು ಈ ತೆರನ ತಿದ್ದುಪಡಿ ಹುಟ್ಟಲಿರುವ ಮಕ್ಕಳ ತಲೆಯ ಮೇಲಿನ ತೂಗುಕತ್ತಿ ಕೂಡ ಆಗಬಹುದು. ಶಿಕ್ಷೆ ಬೇಕು. ಆದರೆ ಶಿಕ್ಷೆಯೇ ಎಲ್ಲವನ್ನೂ ಸರಿಪಡಿಸುತ್ತದೆ ಎಂದಾದರೆ ಈ ಹಿಂದಿನ ಹಲವು ಅಪರಾಧಗಳಿಗೆ ಕೊಟ್ಟ ಶಿಕ್ಷೆ ಅಪರಾಧವನ್ನು ಇಲ್ಲವಾಗಿಸಬೇಕಿತ್ತು. ಆದರೆ ಕಡಿಮೆಯೂ ಆಗಿಲ್ಲವಲ್ಲ. ಅಪರಾಧದ ಹೆಚ್ಚಳವಾದಾಗ ತಮ್ಮನ್ನು ತಾವು ಸಾಬೀತು ಪಡಿಸಿಕೊಳ್ಳಲು ಅಧಿಕಾರ ಆಡಳಿತ ಪೊಲೀಸ್ ವ್ಯವಸ್ಥೆ ಅಮಾಯಕರನ್ನು, ಸುಲಭವಾಗಿ ಸಿಕ್ಕು ಹಾಕಿಸಬಹುದಾದವರನ್ನು ಎಳೆದುಕೊಂಡು ಹೋಗಿ ಪ್ರಕರಣ ದಾಖಲು ಮಾಡುವ ಪ್ರವೃತ್ತಿಯೂ ಈ ದೇಶಕ್ಕೆ ಹೊಸದಲ್ಲ. ಈ ತಿದ್ದುಪಡಿ ಬಡ, ಅಶಿಕ್ಷಿತ, ಅಲ್ಪಸಂಖ್ಯಾತ ವರ್ಗದ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತದೆ. ಮೂಲದ ಬೇರನ್ನು ಕೀಳದೆ ಟೊಂಗೆಯನ್ನು ಕತ್ತರಿಸುವುದು ಸಮಸ್ಯೆಗೆ ಪರಿಹಾರವಲ್ಲ.

ಜಾತಿ ಸಂಘಟನೆಯಲ್ಲ; ಜಾತಿ ಪದ್ಧತಿ ವಿರುದ್ಧ ಚಳವಳಿ



ÀAzÀ±ÀðEÀ

ಮುರಳಿ ಕೆ.

ರಾಜ್ಯದಲ್ಲಿ ದಲಿತರ ಮೇಲಿನ ಹಲ್ಲೆ, ದೌರ್ಜನ್ಯ, ಹತ್ಯೆ, ಜಾತಿ ತಾರತಮ್ಯ ಮತ್ತು ದಲಿತರು ಪ್ರಮುಖವಾಗಿ ಎದುರಿಸುತ್ತಿರುವ ಸಮಸ್ಯೆಗಳನ್ನು ಕರ್ನಾಟಕ ದಲಿತ ಹಕ್ಕುಗಳ ಸಮಿತಿ ರಾಜ್ಯದಲ್ಲಿ ಜಾಥಾ ಕೈಗೊಂಡಿತ್ತು. ರಾಜ್ಯದಲ್ಲಿ ದಲಿತ ಸಮುದಾಯ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಅನಾವರಣವಾಗಿತ್ತು. ದಲಿತರು ಇಂದಿಗೂ ಕೈಯಲ್ಲಿ ಅರ್ಜಿಗಳನ್ನು ಹಿಡಿದು ನಮ್ಮನ್ನು ರಕ್ಷಿಸಿ ಎಂದು ಬೇಡುವ ದೈನೇಸಿ ಪರಿಸ್ಥಿತಿಗೆ ಈ ಜಾಥಾ ಸಾಕ್ಷಿಯಾಯಿತು. ಜಾಥಾ ಮುನ್ನಡೆಸಿದವರಲ್ಲಿ ಒಬ್ಬರಾದ ಮತ್ತು ಕರ್ನಾಟಕ ದಲಿತ ಹಕ್ಕುಗಳ ಸಮಿತಿಯ ಸಂಚಾಲಕರಾಗಿರುವ **ಅರಳಹಳ್ಳಿ ಗೋಪಾಲಕೃಷ್ಣ** 'ಜನಶಕ್ತಿ' ಜೊತೆ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ಅವರ ಸಂದರ್ಶನದ ಕೆಲವು ಪ್ರಮುಖ ಭಾಗಗಳು ಇಲ್ಲಿವೆ:

ಪ್ರ: ಜಾಥಾ ಹೇಗಿತ್ತು ಮತ್ತು ಈ ಸಂದರ್ಭದಲ್ಲಿ ಎಂತಹ ಪರಿಸ್ಥಿತಿಗಳನ್ನು ಅನುಭವಿಸಿದಿರಿ?

ಉ: ಜಾಥಾ ಆರಂಭಕ್ಕೆ ಮುನ್ನ ಜನ ಹೇಗೆ ಪ್ರತಿಕ್ರಿಯಿಸುತ್ತಾರೆ, ಸ್ಪಂದಿಸುತ್ತಾರೆ ಎನ್ನುವ ಅಂ–ದಾಜು ಇರಲಿಲ್ಲ. ಆದರೆ ಜಾಥಾ ಮುನ್ನಡೆದಂತೆ ದಲಿತ ಸಮುದಾಯಗಳೂ ಅಪೂರ್ವವಾಗಿ ಸ್ಪಂದಿಸಿದವು. ನಮ್ಮ ಸಮಸ್ಯೆಗಳಿಗೆ ಸ್ಪಂದಿಸಲು, ನಮ್ಮ ಮೇಲೆ ನಡೆಯುತ್ತಿರುವ ಹಲ್ಲೆ, ದೌರ್ಜನ್ಯ, ಅಸಮಾನ ಧೋರಣೆಗಳನ್ನು ನಿವಾರಿಸುವವರೇ ಯಾರೂ ಇಲ್ಲ ಎಂದು ಜನ ಅಂಗಲಾಚುತ್ತಿದ್ದರು. ನಮ್ಮ ಜಾಥಾ ಒಂದೂರಿನಿಂದ ಮತ್ತೊಂದು ಊರಿಗೆ ಪ್ರವೇಶಿಸುತ್ತಿದ್ದಂತೆ ಅಲ್ಲಿನ ದಲಿತರು ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಬಿಚ್ಚಿಡುತ್ತಿದ್ದರು. ನಮ್ಮ ಜಾಥಾ ಅವರಲ್ಲಿ ಹೊಸ ಭರವಸೆಗಳನ್ನು ಮೂಡಿಸಿದೆ.

ಪ್ರ: ದಲಿತ ಸಂಘಟನೆಗಳು ಹಲವು ಇವೆಯಲ್ಲ, ನಿಮ್ಮ ಜಾಥಾ ಮತ್ತು ಮತ್ತೊಂದು ಸಂಘಟನೆ ಅಗತ್ಯವಿದೆಯೇ?

ಉ: ದಲಿತ ಸಂಘಟನೆಗಳು ಇಂದು ನಿಷ್ಕ್ರಿಯಗೊಂಡಿವೆ. ಗ್ರಾಮೀಣ ಪ್ರದೇಶಗಳಲ್ಲಿ ದಲಿತ ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಗಂಭೀರವಾಗಿ ತೆಗೆದುಕೊಂಡು ಹೋರಾಟ ಮಾಡುವವರು ಇಲ್ಲವಾಗಿದೆ. ಇಂದು ದಲಿತರಿಗೆ ರಕ್ಷಣೆ ಇಲ್ಲದಂತಾಗಿದೆ. ದಲಿತರ ಕಗ್ಗೊಲೆಗಳಾಗುತ್ತಿದ್ದರೂ ರಾಜ್ಯ ಮಟ್ಟದಲ್ಲಿ ಅವರ ಪರ ಧ್ವನಿ ಎತ್ತುವವರು ಇಲ್ಲವಾಗಿದ್ದಾರೆ. ಸರ್ಕಾರಗಳು ಸಹ ದಲಿತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಅವರಲ್ಲಿ ಬದುಕುವ ಆಸೆಯೇ ಇಲ್ಲವಾಗಿದೆ. ಹೀಗಾಗಿ ನಮ್ಮಂತಹ ಸಂಘಟನೆಗಳು ಮತ್ತು ಜಾಥಾಗಳು ಅಗತ್ಯವಾಗಿದೆ.

ಪ್ರ: ಜಾಥಾ ಸಂದರ್ಭದಲ್ಲಿ ಕಂಡು ಬಂದ ದಲಿತ ಸಮುದಾಯ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು ಯಾವುವು?

ಉ: ಮರಕುಂಬಿಯಲ್ಲಿ ದಲಿತರ ಮೇಲೆ ದೌರ್ಜನ್ಯವಾಯಿತು. ಅವರಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ. ಚಾಮರಾಜ ನಗರದಲ್ಲಿ ದಲಿತರ ಕಗ್ಗೊಲೆಯಾಯಿತು. ಅವರಿಗೆ ಯಾರೂ ಸ್ಪಂದಿಸಲಿಲ್ಲ. ಹೀಗೆ ಪ್ರತಿದಿನ ಪ್ರತಿ ಹಳ್ಳಿಯಲ್ಲೂ ಒಂದಲ್ಲ ಮತ್ತೊಂದು ರೀತಿಯ ಹಲ್ಲೆ, ದೌರ್ಜನ್ಯಗಳು ನಡೆಯುತ್ತಿವೆ. ನಮ್ಮ ಜಾಥಾ ಹಳ್ಳಿಗಳನ್ನು ಪ್ರವೇಶಿಸುತ್ತಿದ್ದಂತೆ ಜನ ಅರ್ಜಿಗಳನ್ನು ಹಿಡಿದು ನಮ್ಮ ಬಳಿಗೆ ಬರುತ್ತಿದ್ದರು. ಕೆಲವು ಗ್ರಾಮಗಳಲ್ಲಿ ದಲಿತರು ಉಸಿರೆತ್ತಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಇದೆ. ದೇವಸ್ಥಾನಗಳಿಗೆ ಇನ್ನೂ ಪ್ರವೇಶ ನೀಡುತ್ತಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಕೂರುವಂತಿಲ್ಲ. ಮಹಿಳೆಯರ ಮೇಲಂತೂ ಹೆಚ್ಚಿನ ದೌರ್ಜನ್ಯಗಳು ನಡೆಯುತ್ತಿವೆ. ಹಲವಾರು ಪ್ರಕರಣಗಳಲ್ಲಿ ದಲಿತರಿಗೆ ಪರಿಹಾರ ಮಂಜೂರಾಗಿದ್ದರೂ ನಾಲ್ಕಾರು ವರ್ಷಗಳಿಂದ ಪರಿಹಾರವೇ ಸಿಕ್ಕಿಲ್ಲ. ಇಂತಹ ಹಲವಾರು ಸಮಸ್ಯೆಗಳನ್ನು ಕಂಡೆವು.

ಪ್ರ: ಕರ್ನಾಟಕ ದಲಿತ ಹಕ್ಕುಗಳ ಸಮಿತಿ ಒಂದು ಜಾತಿ ಸಂಘಟನೆ ಮತ್ತು ದಲಿತ ಸಂಘಟನೆಗಳಿಗೆ ಪರ್ಯಾಯ ಎನಿಸುವುದಿಲ್ಲವೆ.

ಉ: ಇದು ಖಂಡಿತ ತಪ್ಪು ಅಭಿಪ್ರಾಯ. ನಮ್ಮ ಸಮಿತಿ ಒಂದು ಜಾತಿ ಸಂಘಟನೆಯಲ್ಲ. ಆದರೆ ಜಾತಿ ಪದ್ಧತಿ ವಿರುದ್ಧ ಹೋರಾಡುವ ಸಂಘಟನೆಯಾಗಿದೆ. ಯಾವುದೇ ಜಾತಿ ಇರಲಿ ಜಾತಿತಾರತಮ್ಯಕ್ಕೆ ಒಳಗಾದರೆ ಅಂತಹವರ ಪರವಾಗಿ ನಿಲ್ಲುತ್ತದೆ. ಜಾತಿ ಪದ್ಧತಿ ವಿರುದ್ಧ ಹೋರಾಡುವ ಯಾವುದೇ ಸಂಘಟನೆ, ಸಂಸ್ಥೆ ವ್ಯಕ್ತಿಗಳು ನಮ್ಮೊಂದಿಗೆ ಬರಬಹುದು. ಹೀಗಾಗಿ ಇದು ಜಾತಿ ಸಂಘಟನೆಯಲ್ಲ.

ಪ್ರ: ದಲಿತ ಸಂಘಟನೆಗಳು ಇದನ್ನು ಹೇಗೆ ಸ್ವೀಕರಿಸುತ್ತವೆ?

ಉ: ಹಲವಾರು ದಲಿತ ಸಂಘಟನೆಗಳು ನಮ್ಮನ್ನು ಬೆಂಬಲಿಸಿವೆ. ಟಿ.ನರಸೀಪುರದಲ್ಲಿ ದಲಿತ ಸಂಘರ್ಷ ಸಮಿತಿಯೇ ಜಾಥಾವನ್ನು ಬರಮಾಡಿಕೊಂಡು ಅಲ್ಲಿನ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದವು. ಅವರೇ ಆತ್ಮೀಯವಾಗಿ ಬೀಳ್ಕೊಟ್ಟರು. ಇಂದು ಎಲ್ಲ ದಲಿತ ಸಂಘಟನೆಗಳು ದಲಿತ ಸಮುದಾಯದ ಸಮಸ್ಯೆಗಳ ಆಧಾರದಲ್ಲಿ ಬಲಿಷ್ಠ ಚಳವಳಿ ಕಟ್ಟಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ನಮ್ಮ ಸಂಘಟನೆಯತ್ತ ದಲಿತ ಸಮುದಾಯ ಭರವಸೆಯ ನೋಟ ಹರಿಸಿದೆ.

ಪ್ರ: ಸಂಘಟನೆಯ ಮುಂದಿನ ಯೋಜನೆಗಳು?

ಉ: ಜಾಥಾ ಮುಕ್ತಾಯಗೊಂಡ ನಂತರ ಬೆಂಗಳೂರಿನಲ್ಲಿ ಒಂದು ಯಶಸ್ವಿ ಸಮ್ಮೇಳನ ಮಾಡಿದ್ದೇವೆ. ರಾಜ್ಯದ ವಿವಿಧ ಭಾಗಗಳಿಂದ 305 ಪ್ರತಿನಿಧಿಗಳು ಆಗಮಿಸಿದ್ದರು. 39 ಮಂದಿ ಸಂಘಟನಾ ವರದಿ ಮೇಲೆ ಚರ್ಚೆ ನಡೆಸಿದರು. ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡಬೇಕೆಂಬ ಅಜೆ–ಂಡಾ ಆಧಾರದಲ್ಲಿ ರಾಜ್ಯಾದ್ಯಂತ ಸಂಘಟನೆಯನ್ನು ವಿಸ್ತರಿಸುವ ಗುರಿ ಹೊಂದಲಾಗಿದೆ. ನಾನು ರಾಜ್ಯ ಸಂಚಾಲಕನಾಗಿದ್ದು 16 ಮಂದಿ ಸಹ ಸಂಚಾಲಕರನ್ನು ಆಯ್ಕೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಬಲಿಷ್ಠ ಸಂಘಟನೆ ಅದರ ಜೊತೆ–ಗೆ ಬಲಿಷ್ಠ ದಲಿತ ಚಳವಳಿ ಕಟ್ಟುವ ಯೋಜನೆ ಹೊಂದಲಾಗಿದೆ.

ನಮ್ಮ ಚುರು-ಟ್ವೀಟ್

@salimdotcomrade: ಹಣಕಾಸು ಮಂತ್ರಿ ನಾಯಕತ್ವದ ಡಿ.ಡಿ.ಸಿ.ಎ.ಯ ನಾಚಿಕೆಗೇಡಿನ 'ಕೀರ್ತಿ'ಯನ್ನು ಕೀರ್ತಿ ಆಜಾದ್ ಬಯಲಿಗೆಳೆದಿದ್ದಾರೆ. ಅವರು ಮೋದಿ–ಶಾ ಸರ್ವಾಧಿಕಾರಶಾಹಿಯ ಗುಲಾಮರಾಗಿಲ್ಲ, 'ಆಜಾದ್' ಆಗಿದ್ದಾರೆ ಎಂಬುದು ಸಂತೋಷದ ವಿಷಯ.

– ಮಹಮ್ಮದ್ ಸಲೀಂ – ಸಿಪಿಐ(ಎಂ) ಪಾರ್ಲಿಮೆಂಟ್ ಸದಸ್ಯ ಡಿಸೆಂಬರ್ 20ರಂದು

ಅತಿಥಿ ಅಂಕಣ



ಹೆಚ್.ಎನ್.ನಾಗಮೋಹನ ದಾಸ್,
ನಿವೃತ್ತ ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ.

ಸ್ವಾತಂತ್ರ್ಯ ಬಂದ ನಂತರ ನಮ್ಮ ಸರ್ಕಾರಗಳು ಇಂತಹ ಅಮಾನವೀಯ ಬರ್ಬರ ಮತ್ತು ದಮನಕಾರಿ ಕಾನೂನನ್ನು ಮುಂದುವರೆಸಿಕೊಂಡು ಬಂದಿದ್ದು ದುರದೃಷ್ಟಕರ. ಸರ್ಕಾರದ ವಿರುದ್ಧ ಧ್ವನಿ ಎತ್ತುತ್ತಿರುವ ಸಾಹಿತಿಗಳ, ಕಲಾವಿದರ, ಜನಪರ ನಾಯಕರ ವಿರುದ್ಧ ಇದನ್ನು ಬಳಸಲಾಗುತ್ತಿದೆ. ಸ್ವಾತಂತ್ರ್ಯದ ನಂತರ ಈ ಕಲಂನ ದುರ್ಬಳಕೆಯೇ ಹೆಚ್ಚಿದೆ. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇಶದಲ್ಲಿ ಇಂತಹ ದಮನಕಾರಿ ಕಲಂನ ಅಗತ್ಯ ಇದೆಯೇ? ಇಂತಹ ಕಾನೂನನ್ನು ಕೊನೆಗಾಣಿಸಿ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಬೇಕಾಗಿದೆ.

‘ರಾಜದ್ರೋಹ’ದ ಐಪಿಸಿ ಕಲಮು 124(ಎ) ಕೊನೆಗಾಣಿಸಬೇಕು


ದೀರ್ಘಕಾಲದ ಹೋರಾಟಗಳ ಮೂಲಕ ಜಗತ್ತಿನ ಜನರು ವಾಕ್ ಮತ್ತು ಅಭಿವ್ಯಕ್ತಿ ಸ್ವತಂತ್ರ್ಯವನ್ನು ಪಡೆದಿದ್ದಾರೆ. ಭಾರತದ ಸ್ವಾತಂತ್ರ್ಯ ಹೋರಾಟ ಅಭಿವ್ಯಕ್ತಿ ಸ್ವಾತಂತ್ರ್ಯ ಹೋರಾಟ ಇವೆರೆಡು ಜೊತೆಜೊತೆಯಲ್ಲಿ ನಡೆದು ಬಂದಿದ್ದು ಗಮನಾರ್ಹ. ದೇಶದ ಜನರಿಗೆ ಮೂಲಭೂತ ಹಕ್ಕುಗಳನ್ನು ಒದಗಿಸುವುದು ಸ್ವಾತಂತ್ರ್ಯದ ಹೋರಾಟದ ಗುರಿಗಳಲ್ಲಿ ಒಂದಾಗಿತ್ತು. ನಮ್ಮ ಸ್ವಾತಂತ್ರ್ಯ ಚಳುವಳಿಯ ಗುರಿಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ನಮಗೆ ಒಂದು ಸಂವಿಧಾನ ಅನಿವಾರ್ಯವಾಯಿತು. ಸಂವಿಧಾನ ರಚನಕಾರರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರಜಾತಾಂತ್ರಿಕ ವ್ಯವಸ್ಥೆಯ ತಳಹದಿ ಎಂಬ ಸ್ಪಷ್ಟಕಲ್ಪನೆ ಇತ್ತು. ಈ ಅಂಶವನ್ನು ನಮ್ಮ ಸಂವಿಧಾನದ ಅನುಚ್ಛೇದ–19(1) (ಎ)ರ ಅಡಿಯಲ್ಲಿ ಅಳವಡಿಸಲಾಗಿದೆ. ಈ ಹಕ್ಕು ತನ್ನಷ್ಟಕ್ಕೆ ಪೂರ್ಣವಾದದ್ದಲ್ಲ. ದೇಶದ ಸಾರ್ವಭೌಮತ್ವ ಮತ್ತು ಸಮಗ್ರತೆಯನ್ನು ಕಾಪಾಡಲು ಈ ಹಕ್ಕಿನ ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸುವ ಅಧಿಕಾರವನ್ನು ಸರ್ಕಾರ ಹೊಂದಿದೆ.


ದೇಶದ ಭದ್ರತೆ, ವಿದೇಶಗಳ ಜೊತೆಗಿನ ಬಾಂಧವ್ಯ, ಸುವ್ಯವಸ್ಥೆ ಮತ್ತು ನೈತಿಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ನಿರ್ಬಂಧಗಳನ್ನು ವಿಧಿಸಬಹುದು. ಅನುಚ್ಛೇಧ–19 ರಲ್ಲಿ ನೀಡಿರುವ ಮೂಲಭೂತ ಹಕ್ಕಾದ ವಾಕ್ ಸ್ವಾತಂತ್ರ್ಯವು ಭಿನ್ನಾಭಿಪ್ರಾಯವನ್ನು ಹೊಂದಿರುವ ಸ್ವಾತಂತ್ರ ವನ್ನು ಒಳಗೊಂಡಿದೆ. ಮೂಲಭೂತ ಹಕ್ಕುಗಳನ್ನು ಹತ್ತಿಕ್ಕುವ ಅಧಿಕಾರವನ್ನು ನಮ್ಮ ಸಂವಿಧಾನವು ಮಾನ್ಯ ಮಾಡುವುದಿಲ್ಲ, ಭಿನ್ನಾಭಿಪ್ರಾಯಗಳ ಬಗೆಗಿನ ಅಸಹನೆ ಪ್ರಜಾತಾಂತ್ರಿಕ ವ್ಯವಸ್ಥೆಗೆ ಅಪಾಯಕಾರಿ. ಈ ಹಕ್ಕಿಗೆ ಹಿಂದಿನ ಕಾಲದ ಕಟ್ಟಳೆಗಳಾಗಲಿ, ವರ್ತಮಾನದ ಕೋಳಗಳಾಗಲಿ ಇರಬಾರದು. ಫ್ರೆಂಚ್ ಚಿಂತಕ ವ್ರೋಲ್ಟೈರ್ ಹೇಳುವಂತೆ “ನೀನು ಹೇಳುವ ಒಂದು ಮಾತನ್ನೂ ನಾನು ಒಪ್ಪುವುದಿಲ್ಲ. ಆದರೆ ಅಭಿಪ್ರಾಯವನ್ನು ವ್ಯಕ್ತಪಡಿಸುವ ನಿನ್ನ ಹಕ್ಕನ್ನು ನನ್ನ ಸಾವಿನವರೆಗೂ ನಾನು ಬೆಂಬಲಿಸುತ್ತೇನೆ” ಎಂಬ ಮಾತು ಗಮನಾರ್ಹ.


ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ವ್ಯಕ್ತಿ ಸ್ವಾತಂತ್ರ್ಯವು ಮೊದಲನೆಯ ಹೆಜ್ಜೆ. ಹಾಗಾಗಿ ಯಾವ ಸಂಪ್ರದಾಯಗಳನ್ನು ವಿರೋಧಿಸಿದರೂ ಸರಿಯೇ, ವ್ಯಕ್ತಿಯು ಸತ್ಯಕ್ಕಾಗಿ ನಡೆಸುವ ಹುಡುಕಾಟದ ಸ್ವಾತಂತ್ರ್ಯ ಮೊಟಕುಗೊಳ್ಳಬಾರದು. ಎಲ್ಲಾ ಪ್ರಮುಖ ವಿಷಯಗಳ ಬಗ್ಗೆಯೂ ಮುಕ್ತ ಚರ್ಚೆ ನಡೆಯಬೇಕು. ಪ್ರಗತಿ ಸಾಧ್ಯವಾಗುವುದು ಪರಂಪರೆಯನ್ನು ಒಪ್ಪಿಕೊಳ್ಳುವುದರ ಮೂಲಕವಲ್ಲ: ಬದಲಾಗಿ ಜನರ ಅಭಿಪ್ರಾಯಗಳು ಬದಲಾಗುವಷ್ಟರ ಮಟ್ಟಿಗೆ ಹೊಸ ವಿಷಯಗಳನ್ನು, ವೈಜ್ಞಾನಿಕ ಚಿಂತನೆಯ ಆಧಾರದ ಮೇಲೆ ಮಂಡಿಸುವ ಮೂಲಕ. ವ್ಯಕ್ತಿಯ ಚಿಂತನಾಕ್ರಮ ವೃದ್ಧಿಗೊಳ್ಳಲು, ವೈಚಾರಿಕತೆ ಅರಳಲೂ, ಬೌದ್ಧಿಕ ಜಗತ್ತು ವಿಸ್ತಾರಗೊಳ್ಳಲು ಮತ್ತು ವ್ಯಕ್ತಿತ್ವ ಪರಿಪಕ್ವಗೊಳ್ಳಲು ಎಲ್ಲ ರೀತಿಯ ಅಭಿಪ್ರಾಯಗಳೂ ತಿಳಿದಿರಬೇಕು.


ಜ್ಞಾನ ಅಥವಾ ವಿವೇಕ ಆಕಾಶದಿಂದ ಉದುರುವುದಿಲ್ಲ. ಅವು ಸಿದ್ಧ ವಸ್ತುಗಳೂ ಅಲ್ಲ, ಇಂದಿನ ಅಗತ್ಯಕ್ಕೆ ತಕ್ಕಂತೆ ನಮ್ಮ ಅನುಭವದ ಜ್ಞಾನವನ್ನು ಹರಿತಗೊಳಿಸಿದಾಗ ಸಮಕಾಲೀನ ಸತ್ಯವು ಗೋಚರಿಸುತ್ತದೆ. ಮಾನವನ ಅನುಭವದ ಜ್ಞಾನವನ್ನು ವಿಮರ್ಶೆಗೆ ಒಳಪಡಿಸಿದಾಗ ಪ್ರಗತಿ ಪರಚಿಂತನೆ ಎಂದು ಕರೆಯಲಾಗುವ ವೈಜಾರಿಕತೆಯು ಉಗಮವಾಗುವುದು. ಮಾನವನ ನಾಗರಿಕತೆ ಬೇಟೆಯಾಡುವ ಕಾಲದಿಂದ ಇಂದಿನ ಅತ್ಯಂತ ಅಧುನಿಕ, ವೈಜ್ಞಾನಿಕ ಯುಗವನ್ನು ಮುಟ್ಟಿರುವುದು ಈ ಪ್ರಕ್ರಿಯೆಯ ಮೂಲಕವೇ. ಆದರೆ ವಿಮರ್ಶೆಯ ಬಗ್ಗೆ ನಾವು ಅತ್ಯಂತ ಜಾಗರೂಕರಾಗಿರಬೇಕಾಗಿರುತ್ತದೆ. ಅದು ಅನಾರೋಗ್ಯಕರ ಮತ್ತು ವಿನಾಶಕಾರಿಯಾಗಿರಬಾರದು. ವ್ಯಕ್ತಿಗಳನ್ನು ಅಥವಾ ಸಮುದಾಯಗಳನ್ನು ಅವಮಾನಿಸುವ, ಒಡೆಯುವ ಉದ್ದೇಶದ್ದಾಗಿರಬಾರದು. ಇಂದಿಗಿಂತಲೂ ಉತ್ತಮ ಸ್ಥಿತಿಗೆ ನಮ್ಮನ್ನು ಕೊಂಡಯ್ಯುವ, ಈಗಿನ ತಪ್ಪುಗಳನ್ನು ಸರಿಪಡಿಸುವ ವಿಮರ್ಶೆಯಾಗಿರಬೇಕು. ಇಂಥ ಆರೋಗ್ಯಕರ ವಿಮರ್ಶೆಯನ್ನು ತಾಳ್ಮೆಯಿಂದ, ಸ್ವಾಗತಿಸಬೇಕಾದದ್ದು ಸಮಾಜದ ಕರ್ತವ್ಯ.

ಭಾರತದಲ್ಲಿ ಸತ್ಯಶೋಧನೆ ಮತ್ತು ಅಂಧಶ್ರದ್ಧೆಗೆ ಸವಾಲುಗಳನ್ನು ಒಡ್ಡಿದ ಮಹಾನ್ ಇತಿಹಾಸವೇ ಇದೆ. ಚಾರ್ವಾಕ್, ಗೌತಮಬುದ್ಧ, ಬಸವೇಶ್ವರ, ಅಂಬೇಡ್ಕರ್, ಪಂಡಿತ್ ನೆಹರು, ಕುವೆಂಪು, ಇನ್ನೂ ಅನೇಕ ಮಹನೀಯರು ತಮ್ಮ ಜೀವನ ಕಾಲದ ಪರಂಪರಾನುಗತ ಚಿಂತನೆಯಿಂದ ದೂರ ಸರಿದವರೇ. ಬ್ರಿಟಿಷರು ಭಾರತದಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸುತ್ತ ಹೋದ ಹಾಗೆ ಅವರ ವಿರುದ್ಧವಾದ ಹೋರಾಟಗಳೂ ನಡೆಯುತ್ತಾ ಹೋದವು. 1857ರ ಮೊದಲ ಸ್ವಾತಂತ್ರ್ಯ ಯುದ್ಧದ ನಂತರ ಈಸ್ಟ್ ಇಂಡಿಯಾ ಕಂಪನಿಯ ಆಡಳಿತವು ಕೊನೆಗೊಂಡು ಭಾರತದೇಶವು ಇಂಗ್ಲೆಂಡಿನ ಮಹಾರಾಣಿಯರ ನೇರ ಆಡಳಿತಕ್ಕೆ ಒಳಪಟ್ಟಿತು. 1858ರಲ್ಲಿ ಬ್ರಿಟಿಷ್ ಮಾದರಿಯ ನ್ಯಾಯಾಲಯಗಳ ಸ್ಥಾಪನಾ ಕಾರ್ಯವು ಪ್ರಾರಂಭವಾಯಿತು. ಈ ನ್ಯಾಯಾಲಯಗಳ ಮುಖಾಂತರ ಸಿವಿಲ್ ಮತ್ತು ಕ್ರಿಮಿನಲ್ ವಿಧಾನಾತ್ಮಕ ಕಾನೂನುಗಳು ಜಾರಿಗೆ ತರಲಾಯಿತು.









ಬ್ರಿಟಿಷರ ವಿರುದ್ಧ ಜನಾಭಿಪ್ರಾಯವನ್ನು ರೂಪಿಸುತ್ತಿದ್ದ ಪತ್ರಿಕೆಗಳ ಮೇಲೆ ದಾಳಿ ಪ್ರಾರಂಭವಾಯಿತು. ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಬ್ರಿಟಿಷರು ಸುಮಾರು 15 ರೀತಿಯ ವಿವಿಧ ಕಾನೂನುಗಳನ್ನು ಜಾರಿಗೊಳಿಸಿದರು. ಸ್ವಾತಂತ್ರ್ಯ ಹೋರಾಟಗಾರರ ಬಾಯಿ ಮುಚ್ಚಿಸಲು ಕ್ರಿಮಿನಲ್ ವಿಧಾನಾತ್ಮಕ ಕಾಯ್ದೆಗೆ (ಐಪಿಸಿ–ಇಂಡಿಯನ್ ಪೆನಲ್‌ಕೋಡ್) ತಿದ್ದುಪಡಿತಂದು ಕಲಂ 124(ಎ) ಸೇರಿಸಿದರು. ಇದನ್ನು **Sedition**(ರಾಜದ್ರೋಹ ಅಥವಾ ದೇಶದ್ರೋಹ)ದ ಕಲಂ ಎನ್ನಲಾಗಿದೆ. ಐಪಿಸಿ ಕಲಂ 124(ಎ) ಪ್ರಕಾರ ಒಬ್ಬ ವ್ಯಕ್ತಿಯ ಭಾಷಣ ಅಥವಾ ಬರಹ ಅಥವಾ ಇತರ ವಿಧಾನಗಳ ಮೂಲಕ ಸರಕಾರದ ವಿರುದ್ಧ ದ್ವೇಷ ಅಥವಾ ತಿರಸ್ಕಾರವನ್ನು ಬೆಳೆಸುತ್ತದೋ ಅಥವಾ ಬೆಳೆಸಲು ಪ್ರಯತ್ನಿಸುತ್ತದೋ, ಅಥವಾ ಅತೃಪ್ತಿಯನ್ನು ಪ್ರಚೋದಿಸುತ್ತದೋ ಅಥವಾ ಪ್ರಚೋದಿಸಲು ಪ್ರಯತ್ನಿಸುತ್ತದೋ, ಅಂತಹ ವ್ಯಕ್ತಿಯ ವಿರುದ್ಧ ರಾಜದ್ರೋಹ ಅಥವಾ ದೇಶದ್ರೋಹದ ಆಪಾದನೆ ಹೊರಿಸಬಹುದು. ಈ ಕಲಂ ಪ್ರಕಾರ ಆಪಾದಿಸಿದರೆ ಜೀವಾವಧಿಯ ವರೆಗೆ ಶಿಕ್ಷೆ ವಿಧಿಸಬಹುದು. ಈ ಕಲಂನ್ನು ಬಳಸಿ ಬ್ರಿಟಿಷರು ಅನೇಕ ಸ್ವಾತಂತ್ರ್ಯ ಹೋರಾಟಗಾರರನ್ನು ಬಂಧಿಸಿ ಮೊಕದ್ದಮೆಗಳನ್ನು ಹೂಡಿದರು. ಅವರುಗಳ ಪೈಕಿ ಪ್ರಮುಖರೆಂದರೆ ಬಾಲಗಂಗಾಧರ ತಿಲಕ್, ಮಹಾತ್ಮಗಾಂಧಿ, ಅನಿಬೆಸೆಂಟ್, ವಿರೇಂದ್ರದತ್ ಮುಜುಂದಾರ್.

ಸ್ವಾತಂತ್ರ್ಯ ಬಂದ ನಂತರ ನಮ್ಮ ಸರ್ಕಾರಗಳು ಇಂತಹ ಅಮಾನವೀಯ ಬರ್ಬರ ಮತ್ತು ದಮನಕಾರಿ ಕಾನೂನನ್ನು ಮುಂದುವರೆಸಿಕೊಂಡು ಬಂದಿದ್ದು ದುರದೃಷ್ಟಕರ. ಈಗ ಇರುವ ಕಲಂ124(ಎ) ಪ್ರಕಾರ ಸರಕಾರದ ಕ್ರಮಗಳು ಅಥವಾ ಆಡಳಿತಾತ್ಮಕ ಕಾರ್ಯಚರಣೆಗಳನ್ನು ಸರ್ಕಾರದ ವಿರುದ್ಧ ದ್ವೇಷ ಅಥವಾ ತಿರಸ್ಕಾರ ಅಥವಾ ಅತೃಪ್ತಿ ಪ್ರಚೋದಿಸದೆ ವಿರೋಧಿಸುವುದು ಅಥವಾ ಬದಲಾಯಿಸಲು ಪ್ರಯತ್ನಿಸುವುದು ಈ ಕಲಂ ನ ಪ್ರಕಾರ ಅಪರಾಧವಲ್ಲ. ಇಲ್ಲಿ ಸರ್ಕಾರಅಂದರೆ ಪ್ರಧಾನ ಅಥವಾ ಮುಖ್ಯ ಮಂತ್ರಿ, ಮಂತ್ರಿ, ಶಾಸಕರು, ಅಧಿಕಾರಿಗಳು ಇತ್ಯಾದಿಗಳ ಹೇಳಿಕೆ ಕ್ರಮಗಳನ್ನು ಟೀಕಿಸುವುದು ಸಹ ಅಪರಾಧವಲ್ಲ. ಇವರ್‍ಯಾರೂ ‘ಸರ್ಕಾರ’ವಲ್ಲ. ಆದರೂ ನಮ್ಮ ಸರ್ಕಾರದ ಅತಿರೇಕಗಳನ್ನು ಪ್ರಶ್ನಿಸಲು ಪ್ರಯತ್ನಿಸಿದ ವ್ಯಕ್ತಿಗಳನ್ನು ಈ ಕಲಂನ್ನು ಬಳಸಿ ಬಂಧಿಸಿ, ಜೈಲಿಗೆ ಕಳಿಸಿ ಮೊಕದ್ದಮೆಗಳನ್ನು ದಾಖಲಿಸಲಾಯಿತು. ಇತ್ತೀಚಿನ ವರ್ಷಗಳಲ್ಲಿ ದೇಶದ ಗಮನವನ್ನು ಸೆಳೆದ ಪ್ರಕರಣಗಳೆಂದರೆ 2007ರಲ್ಲಿ ಬಿನಾಯಕ್ ಸೆನ್, 2010ರಲ್ಲಿ ಅರುಂಧತಿ ರಾಯ್, 2012ರಲ್ಲಿ ಅಸೀಮ್ ತ್ರಿವೇದಿ, ಇತ್ತೀಚೆಗೆ ಇದೇ ಕಲಂನ್ನು ಬಳಸಿ ಗುಜರಾತಿನ ಹಾರ್ದಿಕ್ ಪಟೇಲ್‌ರನ್ನು ಮತ್ತು ತಮಿಳುನಾಡಿನ ಜಾನಪದ ಕಲಾವಿದ ಕೋವನ್‌ರನ್ನು ಬಂಧಿಸಲಾಗಿದೆ. ಸರ್ಕಾರದ ವಿರುದ್ಧ ಧ್ವನಿ ಎತ್ತುತ್ತಿರುವ ಸಾಹಿತಿಗಳ, ಕಲಾವಿದರ, ಜನಪರ ನಾಯಕರ ವಿರುದ್ಧ ಬಳಸಲಾಗುತ್ತಿದೆ. ಸ್ವಾತಂತ್ರ್ಯದ ನಂತರ ಈ ಕಲಂನ ದುರ್ಬಳಕೆಯೆ ಹೆಚ್ಚಿದೆ. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇಶದಲ್ಲಿ ಇಂತಹ ದಮನಕಾರಿ ಕಲಂನ ಅಗತ್ಯ ಇದೆಯೇ?

ವಿಶ್ವದ ಇತರೆ ಪ್ರಜಾಪ್ರಭುತ್ವ ದೇಶಗಳಾದ ಇಂಗ್ಲೆಂಡ್, ಅಮೇರಿಕಾ, ನ್ಯೂಜಿಲ್ಯಾಂಡ್ ದೇಶಗಳು ಇಂತಹ ಕಾನೂನನ್ನು ಕೊನೆಗಾಣಿಸಿವೆ. ಇಂತಹ ಕಾನೂನನ್ನು ಭಾರತವು ಸಹ ಕೊನೆಗಾಣಿಸಿ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಬೇಕಾಗಿದೆ. ಸರ್ವೋಚ್ಛ ನ್ಯಾಯಾಲಯದ ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿಯವರು 1986ರಲ್ಲಿ ಬಿಜೋಎಮಾನ್ಯೂಯಲ್ ಎಂಬ ಪ್ರಕರಣದಲ್ಲಿ ಈ ರೀತಿ ಹೇಳಿದ್ದಾರೆ:

“ನಮ್ಮ ಪರಂಪರೆ ಸಹನೆಯನ್ನು ಕಲಿಸುತ್ತದೆ.
ನಮ್ಮತತ್ವಶಾಸ್ತ್ರ ಸಹನೆಯನ್ನು ಬೋಧಿಸುತ್ತದೆ.
ನಮ್ಮ ಸಂವಿಧಾನವು ಸಹನೆಯ ಆಚರಣೆಗೆ ಮಹತ್ವ ನೀಡುತ್ತದೆ.
ನಾವು ಅದನ್ನು ನಿಸ್ಸತ್ವಗೊಳಿಸದಿರೋಣ”

ಈ ವಾರ ಚರಿತ್ರೆಯಲ್ಲಿ


ಡಿಸೆಂಬರ್ 19, 2001

ಸುಶೀಲಾ ಗೋಪಾಲನ್ ನಿಧನ



ಈ ದಿನ ಭಾರತದ ಅಪ್ರತಿಮ ಕಮ್ಯುನಿಸ್ಟ್ ನಾಯಕಿಯರಲ್ಲಿ ಒಬ್ಬರಾದ ಸುಶೀಲಾ ಗೋಪಾಲನ್ 14 ವರ್ಷಗಳ ಹಿಂದೆ ತಮ್ಮ 71ನೇ ವಯಸ್ಸಿನಲ್ಲಿ ನಿಧನ ಹೊಂದಿದ್ದರು. ಪುನ್ನಪ್ರ–ವಯಲಾರ್ ಹೋರಾಟದಲ್ಲಿ ಭಾಗವಹಿಸಿದ್ದ ಕುಟುಂಬಕ್ಕೆ ಸೇರಿದ್ದ ಸುಶೀಲಾ ತಮ್ಮ 18ನೇ ವಯಸ್ಸಿನಲ್ಲೇ 1948ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದ್ದರು. ವಿದ್ಯಾರ್ಥಿ ಆಗಿರುವಾಗಲೇ ತೆಂಗು–ನಾರು ಕಾರ್ಮಿಕರ ಸಂಘಟನೆಯಲ್ಲಿ ತೆ–ೂಡಗಿದ್ದ ಅವರು ತಮ್ಮ ಜೀವನ ಪರ್ಯಂತವೂ ಕಾರ್ಮಿಕ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದರು. ಅವರ ನಿಧನವಾದಾಗ ಸಿಐಟಿಯು ಅಖಿಲ ಬಾರತ ಉಪಾಧ್ಯಕ್ಷರಾಗಿದ್ದರು. ಹಿರಿಯ ನಾಯಕ ಎ.ಕೆ,ಗೋಪಾಲನ್ ಅವರನ್ನು ಭೂಗತರಾಗಿದ್ದಾಗ ಭೇಟಿಯಾಗಿದ್ದ ಸುಶೀಲಾ 1952ರಲ್ಲಿ ವಿವಾಹವಾದರು. 1964ರಲ್ಲಿ ಪಕ್ಷ ಇಬ್ಭಾಗವಾದಾಗ ಸಿಪಿಐ(ಎಂ) ಸೇರಿದ ಸುಶೀಲಾ ಕೇರಳ ರಾಜ್ಯ ಸಮಿತಿಯ ಸದಸ್ಯರಾದರು. ಅವರು 1965ರಲ್ಲಿ ಜೈಲಿನಲ್ಲಿ ಇರುವಾಗಲೇ ಕೇರಳ ವಿಧಾನಸಭೆಯ ಸದಸ್ಯರಾಗಿ ಚುನಾಯಿತರಾಗಿದ್ದರು. ಅವರು 1996 ಮತ್ತು 2001ರ ನಡುವೆ ಮಧ್ಯೆ ಕೇರಳ ಎಲ್.ಡಿ.ಎಫ್. ಸರ್ಕಾರದಲ್ಲಿ ಮಂತ್ರಿಯಾಗಿದ್ದರು. ಲೋಕಸಭೆಗೂ ಮೂರು ಬಾರಿ ಅಯ್ಕೆಯಾಗಿದ್ದರು. ಜನವಾದಿ ಮಹಿಳಾ ಸಂಘಟನೆಯ ಸ್ಥಾಪಕರಲ್ಲಿ ಒಬ್ಬರಾಗಿದ್ದು, ಪ್ರಥಮ ಪ್ರಧಾನ ಕಾರ್ಯದರ್ಶಿ ಆಗಿದ್ದ ಅವರು, 2001ರಲ್ಲಿ ಅಧ್ಯಕ್ಷರಾಗಿದ್ದರು. 1978ರಲ್ಲಿ 10ನೇ ಮಹಾಧಿವೇಶನದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾಗಿ ಆಯ್ಕೆಯಾಗಿ ಕೊನೆವರೆಗೂ ಅದರ ಸದಸ್ಯರಾಗಿದ್ದರು.

ಒಂದು ವರ್ಷದಲ್ಲಿ ಆರನೇ ಬಾರಿಗೆ ಪೆಟ್ರೋಲ್-ಡೀಸೆಲ್ ಸುಂಕ ಏರಿಕೆ ಸಂಪೂರ್ಣ ಅರ್ಥ ಕಳಕೊಂಡ 'ಬಜೆಟ್' ಮತ್ತು 'ಅಚ್ಛೇ ದಿನ್'



ವೇದರಾಜ ಎನ್.ಕೆ.

ಡಿಸೆಂಬರ್ 15ರಂದು ಪೆಟ್ರೋಲ್ ದರವನ್ನು ಲೀಟರಿಗೆ 50 ಪೈಸೆ ಮತ್ತು ಡೀಸೆಲ್ ದರವನ್ನು 46 ಪೈಸೆ ಕಡಿತ ಮಾಡಲಾಗಿದೆ ಎಂದು ತೈಲ ಮಾರಾಟ ಕಂಪನಿಗಳು ಪ್ರಕಟಿಸಿದವು. ಮರುದಿನವೇ ಮೋದಿ ಸರಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಅಬಕಾರಿ ಸುಂಕಗಳನ್ನು ಹೆಚ್ಚಿಸಿದೆ ಎಂಬ ಸುದ್ದಿ ಬಂತು. **ವಾಸ್ತವವಾಗಿ ಸರಕಾರ ಅಬಕಾರೀ ಸುಂಕಗಳನ್ನು ಹೆಚ್ಚಿಸುತ್ತದೆ ಎಂದು ತಿಳಿದೇ ತೈಲ ಮಾರಾಟ ಕಂಪನಿಗಳು ದರ ಕಡಿತ ಪ್ರಕಟಿಸಿದ್ದವು ಎಂದು ವರದಿಯಾಗಿದೆ. 'ಒಳ್ಳೆಯ ದಿನ'ಗಳ 'ಒಳ್ಳೆಯ'ತನದ ನಿಜಸ್ವರೂಪವಿದು!**

ಹಿಂದಿನ ಸರಕಾರ ಮತ್ತು ಈ 'ಒಳ್ಳೆಯ ದಿನ'ಗಳ ಸರಕಾರವೂ ಪೆಟ್ರೋಲ್, ಡೀಸೆಲ್ ದರ ಏರಿಕೆಯಾದಾಗಲೆಲ್ಲ ಅದು ತನ್ನ ನಿರ್ಧಾರವಲ್ಲ, ತೈಲ ಕಂಪನಿಗಳ ನಿರ್ಧಾರ, ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆಗಳಿಗೆ ಅನುಗುಣವಾಗಿ ಮಾಡಿವೆ ಎಂದು ಹೇಳಿ ಅದನ್ನು ಪೂರ್ಣವಾಗಿ ಬಳಕೆದಾರರಿಗೆ ವರ್ಗಾಯಿಸಲಾಗುತ್ತಿತ್ತು, ಅವರ ಹೊರೆ ಕಡಿಮೆ ಮಾಡಲೆಂದು ಅಬಕಾರಿ ಸುಂಕಗಳನ್ನು ಇಳಿಸುತ್ತಿರಲಿಲ್ಲ. ಆದರೆ ಈಗ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಇಳಿಕೆಯಾಗುವಾಗ ಅದರ ಪ್ರಯೋಜನವನ್ನು ಪೂರ್ಣವಾಗಿ ಬಳಕೆದಾರರಿಗೆ ವರ್ಗಾಯಿಸಲು ಬಿಡದೆ, ಅದರ ಒಂದು ಭಾಗವನ್ನು ಅಬಕಾರಿ ಸುಂಕಗಳನ್ನು ಹೆಚ್ಚಿಸಿ ಕಿತ್ತುಕೊಳ್ಳಲು ಹಿಂಜರಿಯುತ್ತಿಲ್ಲ.

ಡಿಸೆಂಬರ್ 16ರಂದು ಸರಕಾರ ಪೆಟ್ರೋಲ್ ಮೇಲೆ ಅಬಕಾರಿ ಸುಂಕದಲ್ಲಿ ಲಿಟರಿಗೆ 30 ಪೈಸೆಯಂತೆ ಹೆಚ್ಚಿಸಿದರೆ, ಡೀಸೆಲ್ ಅಬಕಾರಿ ಸುಂಕದಲ್ಲಿ ಲೀಟರಿಗೆ ರೂ.1.17ರ ಹೆಚ್ಚಳ ಮಾಡಿದೆ. ಈ ಮೂಲಕ ಸರಕಾರ ಬಳಕೆದಾರರಿಗೆ ಹೋಗಬೇಕಾದ ಕನಿಷ್ಟ 2500 ಕೋಟಿ ರೂ.ಗಳನ್ನು ತನ್ನ ಬಜೆಟ್ ಕೊರತೆಯನ್ನು ತುಂಬಿಸಿಕೊಳ್ಳಲು ಕಿತ್ತುಕೊಂಡಿದೆ. ಇದು ಕಳೆದ ಆರು ವಾರಗಳಲ್ಲಿ ಎರಡನೇ ಅಬಕಾರಿ ಸುಂಕ ಏರಿಕೆ. ನವಂಬರ್ 7ರಂದು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಅಬಕಾರಿ ಸುಂಕದಲ್ಲಿ ಪ್ರತಿ ಲೀಟರಿಗೆ ಅನುಕ್ರಮವಾಗಿ ರೂ. 1.60 ಮತ್ತು 30ಪೈಸೆ ಏರಿಸಿ 3200 ಕೋಟಿ ರೂ.ಗಳನ್ನು ಕಿತ್ತುಕೊಂಡಿತ್ತು.

ಕಳೆದ ಒಂದು ವರ್ಷದಲ್ಲಿ ಆರು ಬಾರಿ ಪೆಟ್ರೋಲ್, ಡೀಸೆಲ್ ಮೇಲೆ ಅಬಕಾರಿ ಸುಂಕಗಳನ್ನು ಏರಿಸಿ ಒಟ್ಟು ರೂ.28200 ಕೋಟಿ ರೂ.ಗಳನ್ನು ಸರಕಾರ ಜನರಿಂದ ಕಿತ್ತುಕೊಂಡಿದೆ ಎಂದು ಲೆಕ್ಕ ಹಾಕಲಾಗಿದೆ. ಏರಿಸಿದ ದಿನಾಂಕ, ಪ್ರತಿ ಲೀಟರ್‌ಗೆ ಏರಿಕೆ ಮತ್ತು ಇದರಿಂದ ಸರಕಾರ ಪಡೆದ ಆದಾಯ(ಕೋಟಿ ರೂ.ಗಳಲ್ಲಿ)ದ ವಿವರಗಳು ಹೀಗಿವೆ(ಕೃಪೆ: ದಿ ಟೆಲಿಗ್ರಾಫ್, ಕೊಲ್ಕತಾ, ಡಿ.17, 2015).

	ಪೆಟ್ರೋಲ್	ಡೀಸೆಲ್	ಆದಾಯ
ನವಂಬರ್ 13, 2014	1.50	1.50	6000
ಡಿಸೆಂಬರ್ 2, 2014	2.25	1.00	4000
ಜನವರಿ 1, 2015	2.00	2.00	7000
ಜನವರಿ 16, 2015	2.00	2.00	5500
ನವಂಬರ್7, 2015	1.60	0.40	3200
ಡಿಸೆಂಬರ್ 16, 2015	0.30	1.17	2500

ಈ ಏರಿಕೆಗಳಿಲ್ಲದಿದ್ದರೆ ಪೆಟ್ರೋಲ್ ದರ ಲೀಟರ್‌ಗೆ ರೂ.5.22 ಮತ್ತು ಡೀಸೆಲ್ ದರ ರೂ.2.84 ರಷ್ಟು ಕಡಿಮೆ ಇರುತ್ತಿತ್ತು. ಅಂದರೆ ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ ರೂ. 58.16 ಮತ್ತು ಡೀಸೆಲ್ ಬೆಲೆ ರೂ. 45.96 ಇರುತ್ತಿತ್ತು. ಈಗ ಅದು ಕೇವಲ ಸುಂಕ ಏರಿಕೆಗಳಿಂದಾಗಿಯೇ ಪೆಟ್ರೋಲಿಗೆ ರೂ.63.38 ಮತ್ತು ಡೀಸೆಲ್‌ಗೆ ರೂ. 48.80 ಇದೆ.

ತೈಲ ಕಂಪನಿಗಳು ದರ ಕಡಿತ ಪ್ರಕಟಿಸುವ ದಿನವೇ ಲೋಕಸಭೆಯ ಶೂನ್ಯವೇಳೆಯಲ್ಲಿ ತೈಲ ಬೆಲೆಗಳ ಪ್ರಶ್ನೆಯನ್ನು ಎತ್ತಿದ್ದ ಸಿಪಿಐ(ಎಂ) ಸದಸ್ಯ ಎಂ.ಬಿ.ರಾಜೇಶ್ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಬ್ಯಾರೆಲ್‌ಗೆ 35 ಡಾಲರಿಗೆ ಇಳಿದಿರುವಾಗ ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರಗಳಲ್ಲಿ 25 ರೂ. ಕಡಿತ ಮಾಡಬೇಕು ಎಂದು ಸರಕಾರವನ್ನು ಆಗ್ರಹಿಸಿದ್ದರು.

ಅಂದರೆ ಬೆಂಗಳೂರಿನಲ್ಲಿ ಪೆಟ್ರೋಲ್‌ಗೆ ಲೀಟರ್‌ಗೆ ಸುಮಾರು 54 ರೂ., ಡೀಸೆಲ್‌ಗೆ 36ರೂ. ಆಗಬೇಕಿತ್ತು.

ಮೋದಿ ಸರಕಾರ ಬಂದಂದಿನಿಂದ ಪೆಟ್ರೋಲ್ ಮತ್ತು ಡೀಸೆಲ್ ದರಗಳು(ಪ್ರತಿ ಲೀಟರ್ ರೂ.) ಹಾಗೂ ಕಚ್ಚಾ ತೈಲದ(ಪ್ರತಿ ಬ್ಯಾರೆಲ್‌ಗೆ ಡಾಲರುಗಳು) ಬೆಲೆಗಳ ವಿವರ ಹೀಗಿದೆ:

ದಿನಾಂಕ	ಪೆಟ್ರೋಲ್	ಡೀಸೆಲ್	ಕಚ್ಚಾತೈಲ
ಮೇ 13,, 2014	78.27	61.33	101.70
ಜುಲೈ01, 2014	80.68	62.85	105.34
ಅಕ್ಟೋಬರ್ 01, 2014	74.42	64.07	90.73
ಜನವರಿ 18, 2015	64.72	52.49	48.85
ಎಪ್ರಿಲ್ 02, 2015	66.05	53.15	49.14
ಜೂನ್ 16, 2015	73.77	55.83	59.97
ಸಪ್ಟಂಬರ್ 01, 2015	64.61	47.02	45.41
ಡಿಸೆಂಬರ್ 16, 2015	63.38	48.80	35.52

2015–16 ರ ಬಜೆಟಿನಲ್ಲಿ ಜನಸಾಮಾನ್ಯರಿಗೆ ಕೊಡುತ್ತಿದ್ದ ಸಬ್ಸಿಡಿಗಳಲ್ಲಿ ಭಾರೀ ಕಡಿತ ಮಾಡಿ ಬಜೆಟ್ ಕೊರತೆಯನ್ನು ಇಳಿಸಿಕೊಂಡಿದ್ದರೂ ಶ್ರೀಮಂತ ವಿಭಾಗಗಳಿಂದ ನೇರ ತೆರಿಗೆ ವಸೂಲಾತಿಯನ್ನು ನಿರೀಕ್ಷಿತ ಮಟ್ಟದಲ್ಲಿ ಮಾಡಲಾಗದ ತನ್ನ ವಿಫಲತೆಯನ್ನು ಮುಚ್ಚಿಕೊಳ್ಳಲು ಸರಕಾರ ಮತ್ತೆ ಪೆಟ್ರೋಲ್, ಡೀಸೆಲ್ ಅಬಕಾರಿ ಸುಂಕಗಳನ್ನು ಏರಿಸಿದೆ, ಈ ರೀತಿ ಜನರಿಗೆ ದಕ್ಕಬೇಕಾಗಿದ್ದ ಬೆಲೆ ಇಳಿಕೆ ಲಭ್ಯವಾಗದಂತೆ ಮಾಡಿದೆ ಎಂಬುದು ವಿಶ್ಲೇಷಕರ ಅಭಿಪ್ರಾಯ.

ಈ ಮೂಲಕ 'ಬಜೆಟ್' ಎಂಬುದು, ಜತೆಗೆ 'ಅಚ್ಛೇ ದಿನ್' ಎಂಬುದು ಎರಡೂ ಸಂಪೂರ್ಣವಾಗಿ ಅರ್ಥಹೀನವಾಗಿವೆ.

ನೈರೋಬಿಯಲ್ಲಿ ಭಾರತ ತನ್ನ ಹಿತಗಳನ್ನು ರಕ್ಷಿಸುವಲ್ಲಿ ಏಕೆ ವಿಫಲವಾಯಿತು ಎಂಬುದಕ್ಕೆ ಮೋದಿ ಸರಕಾರ ಉತ್ತರ ಕೊಡಬೇಕಾಗಿದೆ–ಎಐಕೆಎಸ್

ಅಖಿಲ ಭಾರತ ಕಿಸಾನ್ ಸಭಾ ಡಬ್ಲ್ಯುಟಿಒನ ನೈರೋಬಿ ಘೋಷಣೆಯನ್ನು ಖಂಡಿಸಿದೆ. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸಾರ್ವಜನಿಕ ದಾಸ್ತಾನು ವ್ಯವಸ್ಥೆ ಕೃಷಿ ಉತ್ಪನ್ನಗಳ ವ್ಯಾಪಾರವನ್ನು ವಿಕೃತ ಗೊಳಿಸುತ್ತದೆ ಎಂದು ಆಕ್ಷೇಪಿಸುತ್ತಿರುವ ಅಮೆರಿಕಾ ಮುಂತಾದ ಅಭಿವೃದ್ಧಿ ಹೊಂದಿದ ದೇಶಗಳು ವಾಸ್ತವವಾಗಿ ತಮ್ಮ ದೇಶದ ರೈತರಿಗೆ ಭಾರೀ ಸಬ್ಸಿಡಿಗಳನ್ನು ನೀಡಿ ತಾವೇ ಕೃಷಿ ಉತ್ಪನ್ನಗಳ ವ್ಯಾಪಾರವನ್ನು ವಿಕೃತಗೊಳಿಸುವುದನ್ನು ಚರ್ಚಿಸಲು ಸಿದ್ಧವಿಲ್ಲ. ನೈರೋಬಿ ಘೋಷಣೆ ಈ ಪ್ರಶ್ನೆಗಳನ್ನು ಪರಿಹರಿಸಿಲ್ಲ, ಬದಲಿಗೆ ದೋಹಾ ಅಭಿವೃದ್ಧಿ ಅಜೆಂಡಾವನ್ನು ಹೂತು ಬಿಟ್ಟಿದೆ ಮತ್ತು ಕಳೆದ ವರ್ಷ ಜಿನೇವಾದಲ್ಲಿ ಭಾರತದಂತಹ ದೇಶಗಳಿಗೆ ಬಹಳ ಮಹತ್ವದ್ದಾದ ಸಾರ್ವಜನಿಕ ದಾಸ್ತಾನು ವ್ಯವಸ್ಥೆಯ ಪ್ರಶ್ನೆಯನ್ನು ಪರಿಹರಿಸುವುದಾಗಿ ಕೊಟ್ಟ ಭರವಸೆಯನ್ನೂ ಪರಿಶೀಲಿಸಿಲ್ಲ ಎಂದಿರುವ ಎಐಕೆಎಸ್, ಮೋದಿ ಸರಕಾರ ತನ್ನ ಅಮೆರಿಕಾ-ಪರ ನಿಲುವುಗಳಿಂದಾಗಿ ತನ್ನ ಕೈಗಳಿಗೆ ತಾನೇ ಬೇಡಿ ಹಾಕಿಕೊಂಡು, ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ನೇತೃತ್ವ ನೀಡಲಾರದೆ ಹೋಗಿದೆ ಎಂದು ಕಟುವಾಗಿ ಟೀಕಿಸಿದೆ. ಇದರ ಒಂದು ಪರಿಣಾಮ ಎಂದರೆ ಹತ್ತಿ ಬೆಳೆಯುವ ದೇಶಗಳು ಅಮೆರಿಕಾದಿಂದ ಅನ್ಯಾಯಯುತ ಸ್ಪರ್ಧೆ ಮತ್ತು ಬೆಲೆದಮನಕ್ಕೆ ಒಳಗಾಗುತ್ತವೆ ಎಂದು ಅದು ಹೇಳಿದೆ.

ಈ ಸಭೆಯಲ್ಲಿ ಭಾರತದ ನಿಯೋಗಕ್ಕೆ ನೇತೃತ್ವ ನೀಡಿರುವ ಮಂತ್ರಿ ನಿರ್ಮಲಾ ಸೀತಾರಾಮನ್ ಈ ರೀತಿ ದೇಶದ ರೈತರ ಮತ್ತು ಒಟ್ಟಾರೆಯಾಗಿ ಜನತೆಯ ಹಿತಗಳನ್ನು ಕಾಪಾಡುವಲ್ಲಿ ವಿಫಲರಾಗಿರುವುದಕ್ಕೆ ಉತ್ತರ ನೀಡಬೇಕಾಗಿದೆ ಎಂದು ಎಐಕೆಎಸ್ ಹೇಳಿದೆ. ನರೇಂದ್ರ ಮೋದಿ ಸರಕಾರದ ಸಾಮ್ರಾಜ್ಯಶಾಹಿ-ಪರ ಧೋರಣೆಗಳನ್ನು ಪ್ರತಿಭಟಿಸಬೇಕು ಎಂದು ಅದು ರೈತಾಪಿ ಜನಗಳಿಗೆ ಕರೆ ನೀಡಿದೆ.

ಈ ಘೋಷಣೆ 2008ರ ತೀವ್ರ ಆರ್ಥಿಕ ಮತ್ತು ಹಣಕಾಸು ಬಿಕ್ಕಟ್ಟಿನಿಂದ ಚೇತರಿಗೆ ಬಹಳ ನಿಧಾನಗತಿಯಲ್ಲಿ ಸಾಗಿದೆ, ಅಸಮಾನವಾಗಿದೆ, ಇದರಿಂದಾಗಿ ಜಾಗತಿಕ ಆರ್ಥಿಕ ಬೆಳವಣಿಗೆ ಇಳಿದಿದೆ, ಕೃಷಿ ಮತ್ತು ಇತರ ಸರಕುಗಳ ಬೆಲೆಗಳನ್ನು ಕೆಳಕ್ಕೆ ದಬ್ಬಿದೆ, ಅಸಮಾನತೆಗಳನ್ನು, ನಿರುದ್ಯೋಗವನ್ನು ಹೆಚ್ಚಿಸಿದೆ, ಅಂತರ್ರಾಷ್ಟ್ರೀಯ ವ್ಯಾಪಾರದ ವಿಸ್ತರಣೆ ಬಹಳ ನಿಧಾನವಾಗಿದೆ ಎಂದೆಲ್ಲವನ್ನು ನಿರ್ವಾಹವಿಲ್ಲದೆ ಒಪ್ಪಿಕೊಳ್ಳಲೇ ಬೇಕಾಗಿ ಬಂದಿದೆ. ಇವೆಲ್ಲ ವಿಶ್ವ ವ್ಯಾಪಾರ ಸಂಘಟನೆಯ ಜನ-ವಿರೋಧಿ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಪರವಾದ ಧೋರಣೆಗಳ ಫಲಿತಾಂಶ ಎಂದು ಅಖಿಲ ಭಾರತ ಕಿಸಾನ್ ಸಭಾ ಅಭಿಪ್ರಾಯ ಪಟ್ಟಿದೆ.

ದಿಲ್ಲಿ ಕ್ರಿಕೆಟ್ ಅಸೋಸಿಯೇಶನ್‌ನ ಮುಖ್ಯಸ್ಥರಾಗಿದ್ದ ಕಾಲದಲ್ಲಿ ಈಗಿನ ಹಣಕಾಸು ಮಂತ್ರಿಗಳ ಭ್ರಷ್ಟಾಚಾರದ ಹಿನ್ನೆಲೆಯಲ್ಲಿ ಸ್ವತಃ ಬಿಜೆಪಿಯ ಸಂಸದ ಮತ್ತು ಮಾಜೀ ಕ್ರಿಕೆಟಿಗ ಭ್ರಷ್ಟಾಚಾರದ ಪ್ರಶ್ನೆ ಎತ್ತಿದ್ದಕ್ಕೆ ಅವರನ್ನು ಪಕ್ಷದಿಂದ ಸಸ್ಪೆಂಡ್ ಮಾಡಲಾಗಿದೆ. ಅವರು ಇದರ ವಿರುದ್ಧ ಪ್ರಧಾನ ಮಂತ್ರಿಗಳು ಮತ್ತು 'ಮಾರ್ಗದರ್ಶಕ ಮಂಡಳಿ'ಗೆ ಮೊರೆಯಿಟ್ಟಿದ್ದಾರೆ

–ಸುದ್ದಿ



ಬ್ಯಾಟ್‌ಮನ್ ರಕ್ಷಣೆಗೆ ಅಂಪಾಯರೇ ಬೌಲರ್‌ಗೆ ಕಾಲು ಕೊಟ್ಟರೆ?

ಡಿಎನ್‌ಎ ದೈನಿಕದಲ್ಲಿ ಮಂಜುಲ್ ವ್ಯಂಗ್ಯ

ನೈರೋಬಿ ಡಬ್ಲ್ಯುಟಿಒ ಸಭೆಯಲ್ಲಿ ದೇಶಕ್ಕೆ ಕೈಕೊಟ್ಟ ಬಿಜೆಪಿ ಸರಕಾರ

ಪುಟ 2 ರಿಂದ

'ಅಲ್ಲದೆ ದೋಹಾ ಅಭಿವೃದ್ಧಿ ಅಜೆಂಡಾದಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಹಿತ ಕಾಯುವ ಬಹಳೇನೂ ಅಂಶಗಳು ಇಲ್ಲದಿದ್ದರೂ, ರೈತರಿಗೆ ಸಬ್ಸಿಡಿಗಳನ್ನು ಕೊಡುವ ಬಗ್ಗೆ ಅಭಿವೃದ್ಧಿ ಹೊಂದಿರುವ ಮತ್ತು ಹೊಂದುತ್ತಿರುವ ದೇಶಗಳ ನಡುವೆ ಸಾಮ್ಯತೆ ತರುವಂತೆ ಮಾಡಬಹುದಾದ ಕೆಲವು ಅಂಶಗಳು ಇದ್ದವು. ಅವನ್ನೆಲ್ಲ ಈಗ ಬದಿಗೊತ್ತಿದಂತೆಯೇ ಆಗಿದೆ. ಸದ್ಯಕ್ಕೆ ಅಮೆರಿಕ ಮತ್ತು ಯುರೋಪಿಯನ್ ಒಕ್ಕೂಟದ ದೇಶಗಳು, ಭಾರತದಂತೆ ಕನಿಷ್ಟ ಬೆಂಬಲ ಬೆಲೆ ಎಂಬ ಬೆಲೆ ನಿಗದಿ ವ್ಯವಸ್ಥೆಯ ಮೂಲಕ ತಮ್ಮ ರೈತರಿಗೆ ಸಬ್ಸಿಡಿಗಳನ್ನು ಕೊಡದೆ, ನೇರವಾಗಿಯೇ ನಗದು ಸೌಲಭ್ಯಗಳು ಮತ್ತು ವರ್ಗಾವಣೆಗಳ ಮೂಲಕ ಭಾರೀ ಪ್ರಮಾಣದ ಸಬ್ಸಿಡಿಗಳನ್ನು ಕೊಡುತ್ತಿವೆ. ಬೆಲೆಗಳಿಗೆ ಸಂಬಂಧಪಟ್ಟ ಯಾವುದೇ ಸಬ್ಸಿಡಿಯನ್ನು ತೆಗೆದು ಹಾಕಬೇಕು, ಸದ್ಯಕ್ಕೆ ಅದರಲ್ಲಿ ಕಡಿತವನ್ನಾದರೂ ಮಾಡಬೇಕು ಎಂದು ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೇಲೆ ಒತ್ತಡ ಹಾಕಲಾಗುತ್ತಿದೆ. ಆದರೆ ಅತ್ತ ಅಮೆರಿಕಾ ತನ್ನ ರೈತರಿಗೆ 2014ರಲ್ಲಿ 140 ಬಿಲಿಯ(14000 ಕೋಟಿ) ಡಾಲರುಗಳಷ್ಟು ಸಬ್ಸಿಡಿಗಳನ್ನು ಕೊಟ್ಟಿದೆ. ಈಗ ಅವರು ಇಂತಹ ವಿಷಯಗಳ ಬಗ್ಗೆ ಚರ್ಚೆಯೇ ನಡೆಯದಂತೆ ಮಾಡುವ ಹವಣಿಕೆಯಲ್ಲಿ ಇರುವಂತೆ ಕಾಣುತ್ತದೆ.

ಹಿಂದಿನ ಯುಪಿಎ ಸರಕಾರ 2005ರ ಮಂತ್ರಿಗಳ ಮಟ್ಟದ ಸಭೆಯಲ್ಲಿ ಭಾರತದ ಹಿತಗಳನ್ನು ಬಿಟ್ಟುಕೊಟ್ಟಿತ್ತು. ಈ ಬಿಜೆಪಿ ಸರಕಾರ ದೋಹಾ ಅಭಿವೃದ್ಧಿ ಕಾರ್ಯಸೂಚಿಯ ಬಗ್ಗೆ ಪ್ರಸ್ತಾಪವನ್ನೆಲ್ಲ ಕಿತ್ತು ಹಾಕಿ ಅಂತಹ ಹಾಂಕಾಂಗ್ ಸಭೆಯ ಘೋಷಣೆಯ ಬಗ್ಗೆಯಷ್ಟೇ ಮಾತಾಡಿ ಬಹುರಾಷ್ಟ್ರೀಯ ಕಂಪನಿಗಳ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸಿಕೊಳ್ಳುವ ಬಯಕೆಗಳಿಗೆ ಭಾರತದ ಹಿತಗಳನ್ನು ಒಪ್ಪಿಸಿ ಬಿಟ್ಟಿದೆ. ಹಿಂದೆ 1996ರಲ್ಲಿ ಸಿಂಗಾಪುರದ ಮಂತ್ರಿಗಳ ಮಟ್ಟದ ಶೃಂಗ ಸಭೆಯಲ್ಲಿ ಭಾರತದ ಒತ್ತಡದಿಂದಾಗಿ (ಆಗ ಸಂಯುಕ್ತ ರಂಗ ಸರಕಾರ ಇತ್ತು) ಹೂಡಿಕೆ ಕುರಿತ ಬಹುಪಕ್ಷೀಯ ಒಪ್ಪಂದವನ್ನು ಕೈಬಿಡಲಾಗಿತ್ತು. ಈಗ ಅದನ್ನು ಮತ್ತೆ ತರುವ ಅಪಾಯವೂ ಇದೆ ಎಂದು ಸಿಪಿಐ(ಎಂ) ಹೇಳಿದೆ.

ಬಿಜೆಪಿ ಸರಕಾರ ಅಮೆರಿಕಾದ ಒತ್ತಡಗಳಿಗೆ ಮತ್ತು ಅಭಿವೃದ್ಧಿ ಹೊಂದಿರುವ ದೇಶಗಳ ಹಿತಗಳಿಗೆ ಶರಣಾಗಿದೆ. ನಮ್ಮ ಜನಗಳ ಬದುಕು ಮತ್ತು ಜೀವನಾಧಾರಗಳು ಇದಕ್ಕೆ ಬೆಲೆ ತೆರಬೇಕಾಗಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದಿರುವ ಸಿಪಿಐ(ಎಂ) ಈ ಬಿಜೆಪಿ ಸರಕಾರ ಅಮೆರಿಕನ್ ಒತ್ತಡಗಳಿಗೆ ಶರಣಾಗಿರುವುದರ ವಿರುದ್ಧ ವ್ಯಾಪಕ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ಜನತೆಗೆ ಕರೆ ನೀಡಿದೆ.

ಐಡಿಬಿಐ ಶೇರು ಮಾರಾಟ: ಬ್ಯಾಂಕಿಂಗ್ ಅರಾಷ್ಟ್ರೀಕರಣದ ಮುನ್ಸೂಚನೆ



ಕೆ.ಎಂ.ನಾಗರಾಜ್

ಐಡಿಬಿಐ ಬ್ಯಾಂಕಿನ ಖಾಸಗೀಕರಣ ಪ್ರಕ್ರಿಯೆ ಆರಂಭಿಸಿರುವ ಸರ್ಕಾರದ ಪ್ರಯತ್ನವು ಸಾರ್ವಜನಿಕ ಒಡೆತನದ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅರಾಷ್ಟ್ರೀಕರಣಗೊಳಿಸುವ ಸೂಚನೆ. ನಂತರ, ಅದು ಇಡೀ ಬ್ಯಾಂಕಿಂಗ್ ವ್ಯವಸ್ಥೆಯನ್ನು ಒಂದು ರೀತಿಯ ಬಹಿಷ್ಕಾರ ಪದ್ಧತಿ ಅನುಸರಿಸುವತ್ತ ತಳ್ಳುವುದರ ಜೊತೆಗೆ ದೇಶದ ಅಭಿವೃದ್ಧಿಯ ಅಗತ್ಯಗಳಿಗೆ ವಿಮುಖವಾಗುವಂತೆ ಮಾಡುತ್ತದೆ ಎಂದು ಆರ್ಥಿಕ ತಜ್ಞರು ವಿಶ್ಲೇಷಿಸಿದ್ದಾರೆ.

ಐಡಿಬಿಐ ಅಂದರೆ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ(ಐಡಿಬಿಐ) ಸಂಸ್ಥೆಯನ್ನು 1964ರಲ್ಲಿ ಪಾರ್ಲಿಮೆಂಟಿನಲ್ಲಿ ಅಂಗೀಕರಿಸಿದ ಕಾಯ್ದೆಯ ಮೂಲಕ, ಭಾರತ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ಜಂಟಿ ಒಡೆತನದಲ್ಲಿ ಸ್ಥಾಪಿಸಲಾಗಿತ್ತು. ಠೇವಣಿ ಸ್ವೀಕರಿಸುವ ವಾಣಿಜ್ಯ ಬ್ಯಾಂಕುಗಳಿಗಿಂತ ಭಿನ್ನವಾಗಿದ್ದ ಅದು ದೇಶದ ಅಭಿವೃದ್ಧಿ ಕಾರ್ಯಗಳಿಗೆ ಮತ್ತು ಮೂಲ ಸೌಕರ್ಯಗಳ ಸ್ಥಾಪನೆಗೆ ಸಾಲ ಒದಗಿಸುವ ಒಂದು ಉತ್ತುಂಗ ಹಣ ಕಾಸು ಸಂಸ್ಥೆಯಾಗಿತ್ತು ಮತ್ತು ಅದಕ್ಕೆ ಬೇಕಾದ ಹಣಕಾಸು ನೆರವನ್ನು ಭಾರತ ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ಒದಗಿಸುತ್ತಿದ್ದವು. ಆಗ ತಾನೆ ಗರಿಗೆದರುತ್ತಿದ್ದ ಭಾರತದ ಆಧುನಿಕ ಕೈಗಾರಿಕಾ ವಲಯದಲ್ಲಿ ಉದ್ಯಮಶೀಲತೆ ಮತ್ತು ನೈಪುಣ್ಯತೆ ಬೆಳಸಲು ಉದ್ದಿಮೆಗಳಿಗೆ ದೀರ್ಘಾವಧಿ ಸಾಲ ಕೊಡುವ ಹೊಣೆ ಹೊತ್ತ ಸಂಸ್ಥೆಯಾಗಿತ್ತು ಐಡಿಬಿಐ.

ಐಡಿಬಿಐ ಬ್ಯಾಂಕ್ ಸರ್ಕಾರಿ ಒಡೆತನದಲ್ಲಿದ್ದರೂ ಅದನ್ನು ಖಾಸಗಿಯವರಿಗೆ ವರ್ಗಾಯಿಸಲು ಪಾರ್ಲಿಮೆಂಟಿನ ಅನುಮೋದನೆ ಬೇಕಿಲ್ಲ.

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸರ್ಕಾರದ ಒಡೆತನವನ್ನು ಶೇ.52ಕ್ಕಿಂತ ಕೆಳಗಿಳಿಸುವಂತಿಲ್ಲ. ಆದ್ದರಿಂದ, ಸಾರ್ವಜನಿಕ ವಲಯದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿರುವ ಅತ್ಯಂತ ದುರ್ಬಲ ಕೊಂಡಿಯನ್ನು ಕತ್ತರಿಸುವ ಮೂಲಕ ಖಾಸಗೀಕರಣ ಮಾಡುವ ಸರ್ಕಾರದ ಉದ್ದೇಶ ಸ್ಪಷ್ಟವಾಗಿದೆ ಎಂದು ಪ್ರೊ. ಸಿ.ಪಿ.ಚಂದ್ರಶೇಖರ್ ಅಭಿಪ್ರಾಯ ಪಡುತ್ತಾರೆ. ಐಡಿಬಿಐ ಬ್ಯಾಂಕ್ ಇದಕ್ಕೊಂದು ಉತ್ತಮ ನಿದರ್ಶನ ಎನ್ನುತ್ತಾರೆ ಅವರು.

ಬದಲಾದ ಉದಾರಿ ಆರ್ಥಿಕ ಧೋರಣೆಗಳ ಪರಿಸ್ಥಿತಿಯಲ್ಲಿ, ಅಭಿವೃದ್ಧಿ ಬ್ಯಾಂಕಿಂಗ್ ಮತ್ತು ವಾಣಿಜ್ಯ ಬ್ಯಾಂಕಿಂಗ್ ಪರಿಕಲ್ಪನೆಗಳ ನಡುವಿನ ಭಿನ್ನತೆ, ವಿಶಿಷ್ಟತೆಗಳನ್ನು ಮತ್ತು ರಿಯಾಯ್ತಿ ಬಡ್ಡಿ ಸಾಲಗಳನ್ನು ತೊಡೆದುಹಾಕಲಾಯ್ತು. ಈ ಪ್ರಯೋಗದ ಮೊದಲ ಬಲಿ ಪಶು ಐಡಿಬಿಐ. ಅದು ಒಂದು ವಾಣಿಜ್ಯ ಬ್ಯಾಂಕ್ ಆಗಿ ಬದಲಾಯಿತು. ಈ ಪ್ರಕ್ರಿಯೆಯಲ್ಲಿ ಅನೇಕ ಹಂತಗಳಿದ್ದವು. ಮೊದಲಿಗೆ, 2003ರಲ್ಲಿ 1964ರ ಐಡಿಬಿಐ ಕಾಯ್ದೆಯನ್ನು ರದ್ದುಪಡಿಸಿದ ಪಾರ್ಲಿಮೆಂಟ್, ಅದನ್ನು ಸರ್ಕಾರದ ಒಂದು ಕಂಪೆನಿಯಾಗಿ (ಐಡಿಬಿಐ ಲಿಮಿಟೆಡ್) ಮಾರ್ಪಡಿಸುವಂತೆ ಅಂಗೀಕಾರ ನೀಡಿತು. ನಂತರ 2005ರಲ್ಲಿ, ಐಡಿಬಿಐ ಲಿಮಿಟೆಡ್‌ನ ಸಂಪೂರ್ಣ ಸ್ವಾಮ್ಯದ ಅಂಗ ಸಂಸ್ಥೆಯಾಗಿ ಐಡಿಬಿಐ ಬ್ಯಾಂಕ್ ಲಿಮಿಟೆಡ್ ಸ್ಥಾಪಿಸಲಾಯಿತು. ಅದನ್ನು ಮುನ: ಐಡಿಬಿಐ ಲಿಮಿಟೆಡ್‌ನೊಂದಿಗೆ ವಿಲೀನಗೊಳಿಸಲಾಯಿತು. 2008ರಲ್ಲಿ ಐಡಿಬಿಐ ಲಿಮಿಟೆಡ್‌ನ ಹೆಸರನ್ನು ಐಡಿಬಿಐ ಬ್ಯಾಂಕ್ ಲಿಮಿಟೆಡ್ ಎಂದು ಬದಲಾಯಿಸಲಾಯಿತು. ಐಡಿಬಿಐ ಬ್ಯಾಂಕ್‌ನ ಚರಿತ್ರೆ ಮತ್ತು ಪುರಾಣದ ಸಾರಾಂಶ ಏನೆಂದರೆ, ಈಗ ಅದೊಂದು ಕಂಪೆನಿ. ಅದರ ಒಡೆತನದ ಬದಲಾವಣೆಗೆ ಪಾರ್ಲಿಮೆಂಟಿನ ಒಪ್ಪಿಗೆಯ ಅವಶ್ಯಕತೆ ಇಲ್ಲ. ಒಡೆತನ ಮತ್ತು ನಿಯಂತ್ರಣಗಳಿಗೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕಿನ ನಿಯಮಗಳನ್ನು ಪಾಲಿಸಿದರೆ ಸಾಕು.

ಇದಕ್ಕೂ ಹಿಂದೆ, ಯುಟಿಐ ಬ್ಯಾಂಕ್ (ಅದರ ಈಗಿನ ಹೆಸರು–ಆಕ್ಸಿಸ್ ಬ್ಯಾಂಕ್) ಕತೆಯೂ ಇದೇ ಆಗಿತ್ತು. ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ ಮತ್ತು ಜೀವ ವಿಮಾ ಕಾರ್ಪೊರೇಷನ್ ಮತ್ತು ಇತರೆ ಸರ್ಕಾರಿ ವಿಮಾ ಕಂಪೆನಿಗಳು ಸೇರಿ 'ಯುಟಿಐ ಬ್ಯಾಂಕ್' ಸ್ಥಾಪಿಸಿದ್ದವು. ಕಾಲಕ್ರಮದಲ್ಲಿ ಬಂಡವಾಳ ಹಿಂಪಡೆಯುವ ಮೂಲಕ ಅದನ್ನು ಒಂದು ಖಾಸಗಿ ಬ್ಯಾಂಕ್ ಆಗಿ ಪರಿವರ್ತಿಸಲಾಗಿದೆ. ಅದರ ಮೂಲ ಪ್ರವರ್ತಕರ ಬಂಡವಾಳ ಶೇ.30ಕ್ಕೆ ಇಳಿದಿದ್ದು, ವಿದೇಶಿಯರು ಅದರಲ್ಲಿ ಶೇ.46ರಷ್ಟು ಬಂಡವಾಳ ಹೊಂದಿದ್ದಾರೆ.

ಐಡಿಬಿಐ ಬ್ಯಾಂಕ್ ಈಗ ಇದೇ ಪಥದಲ್ಲಿ ಕ್ರಮಿಸುತ್ತಿದೆ. ಉದ್ದೇಶವೂ ಸ್ಪಷ್ಟವಾಗಿದೆ. ಇದು ಸಾರ್ವಜನಿಕ ವಲಯದ ಬ್ಯಾಂಕುಗಳ ಅರಾಷ್ಟ್ರೀಕರಣದ ಆರಂಭದ ಮುನ್ಸೂಚನೆ ಎನ್ನುತ್ತಾರೆ ಪ್ರೊ. ಚಂದ್ರಶೇಖರ್.

'ನುಸುಳುವ ಖಾಸಗೀಕರಣ' ತಂತ್ರ

1969ರಲ್ಲಿ ರಾಷ್ಟ್ರೀಕರಣದ ನಂತರ, ಬ್ಯಾಂಕ್‌ಗಳು ನಿರ್ಲಕ್ಷಕ್ಕೆ ಒಳಗಾಗಿದ್ದ ಹಳ್ಳಿಗಳಲ್ಲಿ ಶಾಖೆ ಆರಂಭಿಸಿ, ಕೃಷಿ, ಸಣ್ಣ ಕೈಗಾರಿಕೆಗಳಿಗೆ ಸಾಲ ಒದಗಿಸಿ ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿವೆ. ಆದಾಗ್ಯೂ, ಕಡಿಮೆ ಲಾಭಗಳಿಕೆ, ಬಾಕಿ ಉಳಿಸಿಕೊಂಡವರ ಸಂಖ್ಯೆಯಲ್ಲಿ ಹೆಚ್ಚಳ, ಸೇವೆಗಳಲ್ಲಿ ಗುಣ ಮಟ್ಟದ ಕೊರತೆ ಮುಂತಾದ ಅಂಶಗಳ ಮೇಲೆ ಧೂಳೆಬ್ಬಿಸಿ ಸಾರ್ವಜನಿಕ ಒಡೆತನದ ಬ್ಯಾಂಕುಗಳನ್ನು ಖಾಸಗೀಕರಣ ಮಾಡುವಂತೆ ಖಾಸಗಿ ಹಿತಾಸಕ್ತಿಗಳ ಬೆಂಬಲಿಗರು ಒತ್ತಾಯ ಹಾಕುತ್ತಿದ್ದಾರೆ.

ಬ್ಯಾಂಕುಗಳ ಸಾರ್ವಜನಿಕ ಒಡೆತನವನ್ನು ವಿರೋಧಿಸುವವರ ನಿಜವಾದ ಕಾರಣಗಳೇ ಬೇರೆ. ಸಣ್ಣ ಬಂಡವಾಳದಿಂದ ಆರಂಭಿಸಿದ ಬ್ಯಾಂಕುಗಳು ಸಾರ್ವಜನಿಕರಿಂದ ಸಂಗ್ರಹಿಸಿದ ಠೇವಣಿ ಹಣವನ್ನು ಲಾಭದಾಯಕ ವ್ಯವಹಾರಗಳಲ್ಲಿ ತೊಡಗಿಸುತ್ತಿದ್ದವು. ಬ್ಯಾಂಕ್ ನಡೆಸುತ್ತಿದ್ದ ಕಾರ್ಪೊರೇಟ್ ಕುಳಗಳು ಕಡಿಮೆ ರಿಸ್ಕ್‌ನಲ್ಲಿ ಅಗಾಧ ಪ್ರಮಾಣದ ಆರ್ಥಿಕ ಅಧಿಕಾರ ಚಲಾಯಿಸುತ್ತಿದ್ದರು. ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದರಿಂದ, ಬೃಹತ್ ಪ್ರಮಾಣದ ಆರ್ಥಿಕ ಸಂಪನ್ಮೂಲಗಳ ಮೇಲೆ ತಾವು ಹೊಂದಿದ್ದ ಹಿಡಿತ ಕಳೆದುಕೊಂಡ ಕಾರ್ಪೊರೇಟ್ ಕುಳಗಳ ಕೆಂಗಣ್ಣು ಸರ್ಕಾರದ ಮೇಲೆ ನೆಟ್ಟಿದೆ. ತೊಂಭತ್ತರ ದಶಕದ ನವ ಉದಾರವಾದಿ ಆರ್ಥಿಕ ನೀತಿಗಳು ಜಾರಿಗೆ ಬಂದ ನಂತರ ತಾವು ಮತ್ತೊಮ್ಮೆ ಬ್ಯಾಂಕುಗಳ ಮೇಲೆ ಹಿಡಿತ ಸಾಧಿಸಬಹುದೆಂಬ ಆಸೆ ಕಾರ್ಪೊರೇಟ್ ಕುಳಗಳ ಮನಸ್ಸಿನಲ್ಲಿ ಚಿಗುರೊಡೆಯುತ್ತಿದೆ.

ಬಂಡವಾಳ ಹೂಡಿಕೆ ಹಿಂಪಡೆಯುವ ಮೂಲಕ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಖಾಸಗೀಕರಣಗೊಳಿಸಿ ಅವುಗಳ ನಿಯಂತ್ರಣವನ್ನು ಖಾಸಗಿಯವರಿಗೆ ವಹಿಸಬೇಕಾದರೆ ಪಾರ್ಲಿಮೆಂಟಿನ ಅಂಗೀಕಾರ ಪಡೆಯಬೇಕಾಗುತ್ತದೆ. ಅದು ಸುಲಭದ ಮಾತಲ್ಲ. ರಾಷ್ಟ್ರೀಕರಣಕ್ಕೆ ಮೊದಲು ಬ್ಯಾಂಕುಗಳ ಕಾರ್ಯವೈಖರಿಯನ್ನು ಜನತೆ ಇನ್ನೂ ಮರೆತಿಲ್ಲ. ಉದಾಹರಣೆಗೆ, ದೇಶದ ಜಿಡಿಪಿಯ ಶೇ.40 ಭಾಗ ಉತ್ಪತ್ತಿ ಮಾಡುತ್ತಿದ್ದ ಕೃಷಿಗೆ ಹರಿಯುತ್ತಿದ್ದ ಸಾಲದ ಪ್ರಮಾಣ ಕೇವಲ ಶೇ.2 ಭಾಗ ಇತ್ತು. ಜೊತೆಗೆ, ರಾಷ್ಟ್ರೀಕರಣದ ನಂತರವೂ, ದೇಶದ ಅಭಿವೃದ್ಧಿಯಲ್ಲಿ ಬ್ಯಾಂಕುಗಳು ವಹಿಸಿದ ಪಾತ್ರವನ್ನು ಮರೆಯುವಂತಿಲ್ಲ.

ಬ್ಯಾಂಕುಗಳಿಗಿರುವ ಇಂತಹ ಹಿನ್ನೆಲೆಯಿಂದಾಗಿ, ಖಾಸಗೀಕರಣ ಮತ್ತು ಆರ್ಥಿಕ ಉದಾರೀಕರಣ ನೀತಿಗಳಿಗೆ ಬದ್ಧವಾಗಿರುವ ಸರ್ಕಾರವು ಸಾರ್ವಜನಿಕ ಒಡೆತನದ ಬ್ಯಾಂಕುಗಳನ್ನು ಖಾಸಗೀಕರಣಗೊಳಿಸುವ ಸಲುವಾಗಿ ತನ್ನ ಷೇರುಗಳನ್ನು ಮಾರುಕಟ್ಟೆಯಲ್ಲಿ ಸಣ್ಣ ಸಣ್ಣ ಪ್ರಮಾಣದಲ್ಲಿ ಮಾರುವ ಮೂಲಕ 'ನುಸುಳುವ ಖಾಸಗೀಕರಣ' ತಂತ್ರವನ್ನು ಅನುಸರಿಸುತ್ತದೆ . ಆದರೆ, ಕೆಲವು ನಿರ್ಬಂಧಗಳಿಂದಾಗಿ, ಷೇರುಗಳ ಮಾರಾಟದ ಮೂಲಕವೇ ಬ್ಯಾಂಕುಗಳ ಮೇಲಿನ ನಿಯಂತ್ರಣವನ್ನು ಖಾಸಗಿಯವರಿಗೆ ಒಪ್ಪಿಸಲು ಸಾಧ್ಯವಾಗುವುದಿಲ್ಲ ಎನ್ನುತ್ತಾರೆ ಪ್ರೊ.ಸಿ.ಪಿ.ಚಂದ್ರಶೇಖರ್.

ತಮ್ಮ ಖಾಸಗೀಕರಣದ ಗುರಿ ಸಾಧನೆಗೆ ಅಡ್ಡಿಯಾಗುವ ಇಂತಹ ಸಮಸ್ಯೆಗಳನ್ನು ದಾಟಿ ಮುಂದೆ ಹೋಗಲು ಸರ್ಕಾರ ಮತ್ತು ಖಾಸಗೀಕರಣದ ಲಾಬಿಯು 'ಬಾಸೆಲ್–3' ಗುಮ್ಮವನ್ನು ಮುಂದೆ ಮಾಡಿವೆ. ಬಾಸೆಲ್ ನಗರದಲ್ಲಿರುವ ಬ್ಯಾಂಕ್ ಫಾರ್ ಇಂಟರ್‌ನ್ಯಾಷನಲ್ ಸೆಟ್ಲ್‌ಮೆಂಟ್ಸ್ ಸಮಿತಿಯು ಬ್ಯಾಂಕ್‌ಗಳು ಹೊಂದಿರಬೇಕಾದ ಕನಿಷ್ಠ ಬಂಡವಾಳದ ಅವಶ್ಯಕತೆಯನ್ನು ಸಾಲಗಳ ಮೊತ್ತಕ್ಕೆ ಅನುಗುಣವಾಗಿ ನಿಗದಿಪಡಿಸಿದೆ. ಹಾಗಾಗಿ, ಬ್ಯಾಂಕ್ ಸಾಲಗಳ ಮೊತ್ತ ಹೆಚ್ಚಿದಂತೆ ಬಂಡವಾಳದ ಅವಶ್ಯಕತೆಯೂ ಹೆಚ್ಚುತ್ತದೆ. ಈ ಹೆಚ್ಚುವರಿ ಬಂಡವಾಳದ ಅವಶ್ಯಕತೆಯನ್ನು ಪೂರೈಸಲು ಬ್ಯಾಂಕ್‌ಗಳ ಒಡೆತನ ಹೊಂದಿರುವ ಸರ್ಕಾರ ತನ್ನ ಬಜೆಟ್‌ನಿಂದ ಹಣ ಕೊಡಲು ಹಿಂಜರಿಯುವುದರಿಂದ, ಪರ್ಯಾಯವಾಗಿ, ಮಾರುಕಟ್ಟೆಯಲ್ಲಿ ಹೊಸ ನೀಡಿಕೆಯ ಷೇರುಗಳ ಮಾರಾಟದ ಮೂಲಕ ಸಂಗ್ರಹಿಸುತ್ತದೆ. ಈ ಕ್ರಮದಿಂದಾಗಿ ಸರ್ಕಾರದ ಒಡೆತನ ಶೇ.50ಕ್ಕಿಂತ ಕೆಳಗಿಳಿಯುವ ಸಾಧ್ಯತೆಯೂ ಇದೆ. ಅದಕ್ಕಿಂತಲೂ ಹೆಚ್ಚಾಗಿ, ಬಂಡವಾಳ ಹಿಂತೆಗೆತ/ಷೇರುಗಳ ಮಾರಾಟ ಪ್ರಕ್ರಿಯೆ ಯಶಸ್ವಿಯಾಗಲು ಬ್ಯಾಂಕ್‌ಗಳ ನಿಯಂತ್ರಣವನ್ನು ಖಾಸಗಿಯವರಿಗೆ ವಹಿಸಿದರೆ ತಪ್ಪೇನು ಎನ್ನುವ ವಾದವೂ ಪ್ರಚಲಿತವಾಗಿದೆ.

'ಬಾಸೆಲ್–3' ಉಪಕ್ರಮಗಳು ಅನಿವಾರ್ಯವಾಗಿ ಅನುಸರಿಸಲೇಬೇಕಾದ ಒಪ್ಪಂದವೇನಲ್ಲ. ಆದರೂ, ಬ್ಯಾಂಕ್‌ಗಳು ಸದೃಢವಾಗಿ ಉಳಿಯಲು ಹೆಚ್ಚುವರಿ ಬಂಡವಾಳವು ಅನಿವಾರ್ಯ ಎಂಬಂತೆ ಬಿಂಬಿಸಲಾಗುತ್ತಿದೆ. ಅದು ಹಾಗೇನಲ್ಲ ಎಂಬುದು ಕೆಲವು ಆರ್ಥಿಕ ತಜ್ಞರ ಅಭಿಪ್ರಾಯ. ಆದರೂ, ಬ್ಯಾಂಕ್‌ಗಳನ್ನು ಸದೃಢವಾಗಿ ಉಳಿಸುವ ಸಲುವಾಗಿ ಅವುಗಳ ನಿಯಂತ್ರಣವನ್ನು ಖಾಸಗಿಯವರಿಗೆ ಒಪ್ಪಿಸುವುದೇ ಸರಿ ಎಂಬ ಕುತರ್ಕ ಹೂಡಲಾಗುತ್ತಿದೆ. ಹಾಗಾಗಿ, ಬಲವಂತದ ಖಾಸಗೀಕರಣವನ್ನು ನೇತು ಹಾಕಲು ಉಪಯೋಗಿಸುವ ಗೂಟವಾಗಿದೆ 'ಬಾಸೆಲ್–3'.

ಪ್ರಜಾಪ್ರಭುತ್ವದಲ್ಲಿ ಇತಿಮಿತಿಗಳು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ಕೆಲವು ಇತಿಮಿತಿಗಳೂ ಸರ್ಕಾರಕ್ಕೆ ತಡೆ ಒಡ್ಡುತ್ತವೆ. ಇತ್ತೀಚಿಗೆ, ಸರ್ಕಾರ ಏಳು ಸಾರ್ವಜನಿಕ ಬ್ಯಾಂಕುಗಳ ಹೆಚ್ಚುವರಿ ಬಂಡವಾಳದ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ ಅವು ಹೊಸ ನೀಡಿಕೆಯ ಷೇರುಗಳನ್ನು ಮಾರುಕಟ್ಟೆಯಲ್ಲಿ ಮಾರಲು ಅನುಮತಿ ನೀಡಿದ ಸಂದರ್ಭದಲ್ಲಿ ಈ ಬ್ಯಾಂಕುಗಳಲ್ಲಿ ಸರ್ಕಾರದ ಒಡೆತನ ಕನಿಷ್ಠ ಶೇ.52ಕ್ಕಿಂತ ಕೆಳಗಿಳಿಯದಂತೆ ನೋಡಿಕೊಳ್ಳಲು ತಿಳಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ಐಡಿಬಿಐ ಬ್ಯಾಂಕಿನ ಖಾಸಗೀಕರಣ ಪ್ರಕರಣವನ್ನು ಗಮನಿಸಬೇಕಾಗುತ್ತದೆ. ಐಡಿಬಿಐ ಬ್ಯಾಂಕಿನ ಷೇರುಗಳ ಮಾರಾಟವು ಒಂದು ಸಾರ್ವಜನಿಕ ಬ್ಯಾಂಕಿನ ಖಾಸಗೀಕರಣ ಎಂಬುದನ್ನು ಮರೆಮಾಚುತ್ತಿರುವ ಸರ್ಕಾರವು ಅದನ್ನು ಹಾಲಿ ಆರ್ಥಿಕ ವರ್ಷದ ಬಜೆಟ್ ಕೊರತೆಯ 69,500 ಕೋಟಿ ರೂಪಾಯಿಗಳನ್ನು ಹೊಂದಿಸಿಕೊಳ್ಳುವ ಒಂದು ಉಪಕ್ರಮವಾಗಿ ಬಿಂಬಿಸುತ್ತಿದೆ.

ಈ ಬ್ಯಾಂಕನ್ನು ಖಾಸಗೀಕರಣಗೊಳಿಸಲು ಆಡಳಿತ ಸರಿಯಾಗಿಲ್ಲ ಅಥವಾ ನಷ್ಟದಲ್ಲಿದೆ ಎನ್ನುವಂತಹ ಕಾರಣಗಳೇ ಇಲ್ಲ. ಏಕೆಂದರೆ, 2014–15ರಲ್ಲಿ ಈ ಬ್ಯಾಂಕ್ 873 ಕೋಟಿ ರೂಪಾಯಿಗಳ ಲಾಭ ದಾಖಲಿಸಿದೆ. ಆದರೂ, ಸರ್ಕಾರ ಅದನ್ನು ಖಾಸಗೀಕರಿಸುವತ್ತ ಸಾಗಿದೆ. ಬಂಡವಾಳ ಹಿಂತೆಗೆಯುವ ಕ್ರಮದಿಂದಾಗಿ ಸರ್ಕಾರದ ಒಡೆತನ ಶೇ.76.6ರಿಂದ ಶೇ.51ಕ್ಕಿಂತ ಕೆಳಗೆ ಇಳಿಯಲಿದ್ದು, ಸರ್ಕಾರ ಅದನ್ನು ಬಜೆಟರಿ ಅವಶ್ಯಕತೆ ಮತ್ತು ಖಾಸಗಿ ಆಡಳಿತದ ದಕ್ಷತೆಯ ಕಾರಣಗಳನ್ನೊಡ್ಡಿ ಸಮರ್ಥಿಸಿಕೊಳ್ಳುತ್ತಿದೆ. ಆದರೆ, ಇದು ಮೇಲ್ನೋಟದಲ್ಲಿ ಕಾಣುವ ಹಾಗೆ ಕೇವಲ ಐಡಿಬಿಐ ಬ್ಯಾಂಕಿನ ಖಾಸಗೀಕರಣವಲ್ಲ. ಬದಲಿಗೆ, ಇಡೀ ಸಾರ್ವಜನಿಕ ಒಡೆತನದ ಬ್ಯಾಂಕುಗಳನ್ನು ಖಾಸಗೀಕರಣ ಮಾಡುವ ಷಡ್ಯಂತ್ರದ ಮುನ್ಸೂಚನೆ ಎಂದು ಪ್ರೊ.ಚಂದ್ರಶೇಖರ್ ಹೇಳುತ್ತಾರೆ.

ಈ ಯೋಜನೆ ಯಶಸ್ವಿಯಾದರೆ, ಭಾರತದ ಜಾತಿ ಪದ್ಧತಿಯ ರೀತಿಯಲ್ಲಿ, ಇಡೀ ಬ್ಯಾಂಕಿಂಗ್ ವ್ಯವಸ್ಥೆಯು ಆರ್ಥಿಕ ಬಹಿಷ್ಕಾರ ಪದ್ಧತಿ ಆಚರಿಸುವ ಮಟ್ಟ ತಲುಪುವುದೇ ಅಲ್ಲದೆ ಅದು ದೇಶದ ಅಭಿವೃದ್ಧಿಯ ಅವಶ್ಯಕತೆಗಳಿಗೆ ವಿಮುಖವಾಗುತ್ತದೆ ಎಂಬುದು ಅವರ ಅಭಿಪ್ರಾಯ.

ಐಡಿಬಿಐ ಬ್ಯಾಂಕ್‌ನ ಅಧಿಕಾರಿಗಳು ಮತ್ತು ನೌಕರರು ಬ್ಯಾಂಕಿನ ಖಾಸಗೀಕರಣ ವಿರೋಧಿಸಿ ನವೆಂಬರ್ 27ರಂದು ಯಶಸ್ವಿ ಮುಷ್ಕರ ನಡೆಸಿದ್ದಾರೆ. ಅವರಿಗೆ ಬ್ಯಾಂಕ್ ನೌಕರರ ಅಖಿಲ ಭಾರತ ಮಟ್ಟದ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ. ಅವರ ಪ್ರತಿರೋಧ ವ್ಯಾಪಕವಾದ ಬೆಂಬಲವನ್ನೂ ಮತ್ತು ವೇಗವನ್ನೂ ಪಡೆಯಲಿದೆ.

ಭಾರತದಂತಹ ದೇಶಗಳನ್ನು ದೋಷಿಗಳಾಗಿಸುವ ಪ್ಯಾರಿಸ್ ಒಪ್ಪಂದ

ಪುಟ 2 ರಿಂದ

ಹೊರೆಯನ್ನು ನ್ಯಾಯಯುತವಾಗಿ ಹಂಚಿಕೊಳ್ಳದಂತೆ ಮಾಡಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಅಮೆರಿಕಾದ ಹುನ್ನಾರದಂತೆ ಈ ಹಿಂದಿನ ವಾಯುಮಾಲಿನ್ಯದ ಅಂಶವನ್ನು ಸಂಪೂರ್ಣವಾಗಿ ಉಪೇಕ್ಷಿಸಲಾಗಿದೆ. ಈ ಮಾಲಿನ್ಯಕ್ಕೆ 75ಶೇ.ದಷ್ಟು ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಇತರ ಯುರೋಪಿನ ಅಭಿವೃದ್ಧಿ ಹೊಂದಿರುವ ದೇಶಗಳೇ ಕಾರಣ. ಈ ರೀತಿ ಹಿಂದಿನ ಉತ್ಸರ್ಜನೆಗಳನ್ನು ಉಪೇಕ್ಷಿಸಿ ಕೇವಲ ಭವಿಷ್ಯದ ಉತ್ಸರ್ಜನೆಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳೇ ಅವುಗಳ ಪ್ರಸಕ್ತ ಬೆಳವಣಿಗೆಯ ಹಂತದಿಂದಾಗಿ ಅಭಿವೃದ್ಧಿ ಹೊಂದಿರುವ ದೇಶಗಳಿಗಿಂತ ದೊಡ್ಡ ದೋಷಿಗಳಾಗಿ ಕಾಣುತ್ತವೆ. ಪ್ಯಾರಿಸ್ ಒಪ್ಪಂದದ ಚೌಕಟ್ಟು ಹವಾಮಾನ ಬದಲಾವಣೆಯ ಸಮಸ್ಯೆಯ ಹೊರೆಯನ್ನು ನಿರ್ಣಾಯಕವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಹೆಗಲಿಗೆ ದಾಟಿಸಿದೆ.

ಪರಿಸರ ಮಾಲಿನ್ಯವನ್ನು ಕಡಿಮೆ ಮಾಡುವಲ್ಲಿ, ಅದಕ್ಕೆ ಅನುಗುಣವಾದ ತಂತ್ರಜ್ಞಾನಗಳನ್ನು ಅಂಗೀಕರಿಸುವಲ್ಲಿ ನೆರವಾಗಲು ಅಭಿವೃದ್ಧಿಶೀಲ ದೇಶಗಳಿಗೆ ಹಣಕಾಸು ಮತ್ತು ತಂತ್ರಜ್ಞಾನಗಳ ನೆರವು ಒದಗಿಸುವ ಬಾಧ್ಯತೆ ಅಭಿವೃದ್ಧಿ ಹೊಂದಿರುವ ದೇಶಗಳ ಮೇಲಿದೆ. ಆದರೆ ಈ ಬಗ್ಗೆ ಪ್ಯಾರಿಸ್ ಒಪ್ಪಂದ ಜಾರಿ ಮಾಡಲಾಗದ ಹೇಳಿಕೆಗಳನ್ನಷ್ಟೇ ಹೊಂದಿದೆ.

ಭಾರತದ ಭವಿಷ್ಯದ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯ ಮೇಲೆ ಅಪಾರ ಮಿತಿಗಳನ್ನು ಹೇರುವ ಅಮೆರಿಕಾದ ಹುನ್ನಾರಗಳಿಗೆ ಭಾರತ ಸರಕಾರ ಮಣಿದಿರುವುದು ಅತ್ಯಂತ ಖೇದದ ಸಂಗತಿ ಎಂದು ಸಿಪಿಐ(ಎಂ) ಹೇಳಿದೆ.

ಮುಂಬರುವ ವರ್ಷಗಳಲ್ಲಿ ಭಾರತ ಈ ರೀತಿ ಅಮೆರಿಕಾದ ಹಿತಾಸಕ್ತಿಗಳಿಗೆ ಶರಣಾಗಿರುವುದಕ್ಕೆ ಭಾರೀ ಬೆಲೆ ತೆರಬೇಕಾಗುತ್ತದೆ. ವಿಶ್ವ ಸಾಮ್ರಾಜ್ಯಶಾಹಿಯ ಈ ಕಾರ್ಯತಂತ್ರವನ್ನು ಪ್ರತಿರೋಧಿಸಬೇಕು, ಅವರು ಬಯಸುವಂತೆ ಭಾರತ ಸರಕಾರ ಮಾಯ ಮಾಲಿನ್ಯ ಕಡಿಮೆ ಮಾಡುವ ಪ್ರತಿಜ್ಞೆಯನ್ನು ಕಾರ್ಪೊರೇಟ್ ಪರ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದಕ್ಕೆ ಬಳಸದೆ, ಜನ–ಪರ ಅಭಿವೃದ್ಧಿಗೆ ಬಳಸುವಂತೆ, ಅದರಲ್ಲೂ ಭಾರತದ ವಂಚಿತ ವಿಭಾಗಗಳಿಗೆ ಹೆಚ್ಚಿನ ಇಂಧನಶಕ್ತಿ ಲಭ್ಯವಾಗುವಂತೆ ಒತ್ತಡಗಳನ್ನು ಹಾಕಬೇಕು ಎಂದು ಸಿಪಿಐ(ಎಂ) ಎಲ್ಲ ಪ್ರಗತಿಪರ ಶಕ್ತಿಗಳಿಗೆ ಕರೆ ನೀಡಿದೆ.

ಗ್ರಾಮೀಣ ಮಹಿಳೆಯರ ಪ್ರಜಾಪ್ರಭುತ್ವ ಹಕ್ಕನ್ನು ವಂಚಿಸುತ್ತಿರುವವರ ಪ್ರಶಸ್ತಿಯ ಪಟ್ಟಿಯಲ್ಲಿ ನನ್ನ ಹೆಸರು ಬೇಡ– ಜಗ್ಮತಿ ಸಂಗ್ವಾನ್



ಹರ್ಯಾಣದಲ್ಲಿ 'ಮರ್ಯಾದಾ ಹತ್ಯೆ'ಗಳ ವಿರುದ್ಧ ಮತ್ತು ಅದರಲ್ಲಿ ಖಾಪ್ ಪಂಚಾಯತ್‌ಗಳ ಪಾತ್ರದ ವಿರುದ್ಧ ಹಲವು ಹೋರಾಟಗಳನ್ನು ನಡೆಸಿರುವ ಈಗ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿಯಾಗಿರುವ ಜಗ್ಮತಿ ಸಂಗ್ವಾನ್ ಮಹಿಳಾ ಸಾಧಕಿಯೆಂದು ಮೋದಿ ಸರಕಾರ ನೀಡಬೇಕೆಂದಿದ್ದ ಸನ್ಮಾನವನ್ನು ನಿರಾಕರಿಸಿದ್ದಾರೆ.

ಡಿಸೆಂಬರ್ 10 ರ ಅಂತರ್ರಾಷ್ಟ್ರೀಯ ಮಾನವ ಹಕ್ಕುಗಳ ದಿನದ ವೇಳೆಗೆ ಕೇಂದ್ರ ಸರಕಾರದಿಂದ ಅವರಿಗೆ ಒಂದು ಪತ್ರ ಬಂತು. 'ಸಾರ್ವಜನಿಕ ಜೀವನದಲ್ಲಿ ಮಹಿಳೆಯರು' ಎಂಬ ವಿಧದಲ್ಲಿ ಗೌರವಿಸಲು 100 ಮಹಿಳಾ ಸಾಧಕಿಯರ ಪಟ್ಟಿ ತಯಾರಿಸಿದ್ದು ಅದರಲ್ಲಿ ಜಗ್ಮತಿಯವರ ಹೆಸರು ಇದೆ ಎಂದು ಅದರಲ್ಲಿ ತಿಳಿಸಲಾಗಿತ್ತು.

ಡಿಸೆಂಬರ್ 14ರಂದು ಜಗ್ಮತಿಯವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿ ಮನೇಕಾ ಗಾಂಧಿಗೆ ಪತ್ರ ಬರೆದು ತಾನು ಈಗ ಲಕ್ಷಾಂತರ ಸಹಯೋಗಿಗಳೊಂದಿಗೆ ಮಾಡುತ್ತಿರುವ ಕೆಲಸಕ್ಕೂ ಮೋದಿ ಸರಕಾರದ ಗುರಿಗಳಿಗೂ ಬಹಳಷ್ಟು ವೈರುಧ್ಯಗಳಿರುವುದರಿಂದ ಈ ಪ್ರಶಸ್ತಿಯ ಪ್ರಕ್ರಿಯೆಯಿಂದ ತನ್ನ ಹೆಸರನ್ನು ಕೈಬಿಡಬೇಕು ಎಂದು ನಯವಾಗಿ, ಆದರೆ ದೃಢವಾಗಿ ಕೋರುವ ಪತ್ರವನ್ನು ಬರೆದಿದ್ದಾರೆ. ಅವರು ಬರೆದ ಪತ್ರಿಕೆಯ ಒಕ್ಕಣಿಕೆ ಹೀಗಿದೆ:

"ನನ್ನ ಹೆಸರನ್ನು ಈ ಪ್ರಶಸ್ತಿಯ ಪ್ರಕ್ರಿಯೆಯಿಂದ ಹೊರ ತೆಗೆಯಬೇಕೆಂದು ನಿಮ್ಮನ್ನು ಅತ್ಯಂತ ವಿನಯದಿಂದ ಕೋರುತ್ತೇನೆ. ಹರ್ಯಾಣ ಸರಕಾರ ಪಂಚಾಯತು ಚುನಾವಣೆಗಳಲ್ಲಿ ಸ್ಪರ್ಧೆಗೆ ಶರತ್ತುಗಳನ್ನು ಹಾಕಿ 83% ಪರಿಶಿಷ್ಟ ಜಾತಿಗಳ ಮಹಿಳೆಯರು, 72% ಸಾಮಾನ್ಯ ವರ್ಗದ ಮಹಿಳೆಯರು, 71% ಪರಿಶಿಷ್ಟ ಜಾತಿಗಳ ಪುರುಷರು ಮತ್ತು 56% ಸಾಮಾನ್ಯ ವರ್ಗದ ಪುರುಷರನ್ನು, ಒಟ್ಟಾರೆಯಾಗಿ 67% ಸಾಮಾನ್ಯ ನಾಗರಿಕರನ್ನು ಸ್ಥಳೀಯ ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ಮಾಡಿರುವ ನಿರ್ಣಯದ ಹಿನ್ನೆಲೆಯಲ್ಲಿ ಭಾರವಾದ ಹೃದಯದಿಂದ ನಾನಿದನ್ನು ನಿಮಗೆ ಬರೆಯುತ್ತಿದ್ದೇನೆ.

ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರು ಭಾಗವಹಿಸಲು ಸಾಧ್ಯವಾಗಿರುವುದು ಒಂದು ದೀರ್ಘವಾಗಿ ನಡೆದ ಹೋರಾಟ ಮತ್ತು ಹಕ್ಕೊತ್ತಾಯದಿಂದ ಎಂಬುದು ನಿಮಗೆ ಗೊತ್ತಿರಬಹುದು. ಆದರೆ ರಾಜ್ಯ ಸರಕಾರ ಕೈಗೊಂಡಿರುವ ಇಂತಹ ಒಂದು ನಿರ್ಣಯ ನಾವು ಇದುವರೆಗೆ ಸಾಧಿಸಿದ್ದಕ್ಕೆ ಕೇಡುಂಟು ಮಾಡುತ್ತದಷ್ಟೇ.


2015ರ ಬಜೆಟಿನಲ್ಲಿ ಕೇಂದ್ರ ಸರಕಾರ ಮಹಿಳಾ–ಸ್ನೇಹಿ ಕಾಯ್ದೆಗಳ ಅಡಿಯಲ್ಲಿ ಹಣ ನೀಡಿಕೆಯಲ್ಲಿ ಭಾರೀ ಕಡಿತ ಮಾಡಿರುವ ಬಗ್ಗೆ ನಿಮಗೂ ತಿಳಿದಿದೆ.

ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರ ದೈನಂದಿನ ಬದುಕು ಹೆಚ್ಚೆಚ್ಚು ಕಷ್ಟಕರವಾಗುತ್ತಿದೆ ಮತ್ತು ಕೇಂದ್ರ ಸರಕಾರ ಮಹಿಳೆಯರು ಮತ್ತು ಮಕ್ಕಳೂ ಸೇರಿದಂತೆ ಇತರ ದುರ್ಬಲ ವಿಭಾಗಗಳನ್ನು ರಕ್ಷಿಸುವ ತನ್ನ ಹೊಣೆಗಾರಿಕೆಯಿಂದ ಹಿಂದೆ ಸರಿಯುತ್ತಿದೆ ಎಂದು ನಮಗೆ ಅನ್ನಿಸುತ್ತಿದೆ.

ಇಂತಹ ಪ್ರಸಕ್ತ ಸನ್ನಿವೇಶದಲ್ಲಿ ನನ್ನ ಸಂಘಟನೆಯ ಇತರ ಲಕ್ಷಾಂತರ ಕಾರ್ಯಕರ್ತರೊಂದಿಗೆ ನನ್ನ ಕೆಲಸಕ್ಕೂ ನಿಮ್ಮ ಸರಕಾರ ಸಾಧಿಸಬೇಕೆಂದಿರುವ ಗುರಿಗೂ ಸಂಪೂರ್ಣ ವೈರುಧ್ಯವಿದೆ ಎಂದು ನನಗನಿಸುತ್ತಿದೆ. ಆದ್ದರಿಂದ ಪ್ರಸಕ್ತ ಕಾಲಘಟ್ಟದಲ್ಲಿ ಸರಕಾರ ಕೊಡಮಾಡುವ ಯಾವುದೇ ಪ್ರಶಸ್ತಿಯಿಂದ ನನ್ನನ್ನು ದೂರವಿರಿಸಿಕೊಳ್ಳ ಬಯಸುತ್ತೇನೆ."

ಭಾರತದ ಅತ್ಯಂತ ದೊಡ್ಡ ಮಹಿಳಾ ಸಂಘಟನೆಯಲ್ಲಿ ಬುಡಮಟ್ಟದಲ್ಲಿ ತೊಡಗಿರುವ ಒಬ್ಬ ಮಹಿಳೆಯಿಂದ ಇಂತಹ ಪತ್ರ ಕೇವಲ ಸಾಂಕೇತಿಕ ಕ್ರಿಯೆಗಳಲ್ಲಿ ನಿಷ್ಣಾತರೆನಿಸಿಕೊಂಡಿರುವ, ಇಂತಹ ಪ್ರಶಸ್ತಿಗಳಿಂದಲೇ ಗೌರವ ಸಂಪಾದಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಮೋದಿ ಸರಕಾರಕ್ಕೆ ನೀಡಿರುವ ಒಂದು ಬಲವಾದ ಪೆಟ್ಟು ಎಂದು 'ಕಮ್ಯುನಲಿಸಂ ಕೊಂಬಾಟ್' ಪತ್ರಿಕೆ ಟಿಪ್ಪಣಿ ಮಾಡಿದೆ.

ಹಿರಿಯ ಕಮ್ಯುನಿಸ್ಟ್ ನೇತಾರ ನೂರುಲ್ ಹುದಾ ನಿಧನ



ಅಸ್ಸಾಂ ರಾಜ್ಯದ ಹಿರಿಯ ಕಮ್ಯುನಿಸ್ಟ್ ಚೇತನ, ದೇಶದ ರೈತ ಆಂದೋಲನದ ಹಿರಿಯ ಮುಖಂಡ ನೂರುಲ್ ಹುದಾ ಡಿಸೆಂಬರ್ 17 ರಂದು ನಿಧನರಾಗಿದ್ದಾರೆ, ಅವರಿಗೆ 85 ವರ್ಷವಾಗಿತ್ತು.

ಇಂಜಿನಿಯರಿಂಗ್ ಪದವಿ ಗಳಿಸಿದ್ದ ನೂರುಲ್ ಹುದಾ ಒಬ್ಬ ವಿದ್ಯಾರ್ಥಿ ಕಾರ್ಯಕರ್ತನಾಗಿ ಕಮ್ಯುನಿಸ್ಟ್ ಪಕ್ಷ ಸೇರಿದವರು. ಸ್ವಲ್ಪ ಕಾಲ ಇಂಜಿನಿಯರ್ ಆಗಿ ಕೆಲಸ ಮಾಡಿದ ಅವರು 1967ರಲ್ಲಿ ಅಸ್ಸಾಂನ ರೈತ ಆಂದೋಲನದಲ್ಲಿ ಪೂರ್ಣಕಾಲ ಕೆಲಸ ಮಾಡಲು ಉದ್ಯೋಗ ತ್ಯಜಿಸಿ ಸಿಲ್ಚಾರ್‌ನಲ್ಲಿ ನೆಲೆಸಿದರು. ರೈತರು ಮತ್ತು ಜನಸಾಮಾನ್ಯರ ಪರ ಹೋರಾಟಗಳಲ್ಲಿ ಹಲವು ಬಾರಿ ಜೈಲುವಾಸವನ್ನೂ ಅನುಭವಿಸಿದರು.

1967 ರಲ್ಲಿ ಅವರು ಅಖಿಲ ಭಾರತ ಕಿಸಾನ್ ಸಭಾದ ಕೇಂದ್ರ ಕಿಸಾನ್ ಮಂಡಳಿಯ ಸದಸ್ಯರಾಗಿ ಆಯ್ಕೆಗೊಂಡರು. ಅಂದಿನಿಂದ ಕೊನೆಯ ಉಸಿರಿನ ವರೆಗೂ ಭಾರತದ ರೈತ ಆಂದೋಲನದ ಈ ಉನ್ನತ ಸಮಿತಿಯ ಸದಸ್ಯರಾಗಿ ದುಡಿದರು. 2006ರಿಂದ 2013 ರವರೆಗೆ ಅವರು ದಿಲ್ಲಿಯಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಹಣಕಾಸು ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದರು.

1970ರಲ್ಲಿ ಸಿಪಿಐ(ಎಂ)ನ ರಾಜ್ಯಸಮಿತಿಗೆ ಆಯ್ಕೆಗೊಂಡ ನೂರುಲ್ ಹುದಾ 1985ರಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಗೆ ಆಯ್ಕೆಯಾದರು. ಮುಂದೆ 2012 ರವರೆಗೂ ಅವರು ಈ ಸ್ಥಾನದಲ್ಲಿ ಮುಂದುವರೆದರು.

ಅವರು ಅಸ್ಸಾಂ ವಿಧಾನ ಸಭೆಯ ಸದಸ್ಯರಾಗಿಯೂ, 1973ರಲ್ಲಿ ಅಸ್ಸಾಂನ ಸಿಲ್ಚಾರ್ ಕ್ಷೇತ್ರದಿಂದ ಲೋಕಸಭೆಗೂ ಆಯ್ಕೆಯಾಗಿದ್ದರು.

ಭಾರತದ ದುಡಿಯುವ ಜನರ ಏಳ್ಗೆಗಾಗಿ ಮಾರ್ಕ್ಸ್‌ವಾದ–ಲೆನಿನ್‌ವಾದಕ್ಕೆ ಬದ್ಧರಾಗಿ ನಿಸ್ವಾರ್ಥದಿಂದ ತನ್ನ ಜೀವನವನ್ನು ಮುಡಿಪಿಟ್ಟ ಈ ಹಿರಿಯ ಮುಖಂಡರ ನಿಧನದಿಂದ ದೇಶದ ಕಮ್ಯುನಿಸ್ಟ್ ಆಂದೋಲನಕ್ಕೆ ಮತ್ತು ರೈತ ಆಂದೋಲನಕ್ಕೆ ದೊಡ್ಡ ನಷ್ಟವಾಗಿದೆ ಎಂದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಶ್ರದ್ಧಾಂಜಲಿ ಅರ್ಪಿಸಿದೆ.

ತನ್ನ ಸಹಯೋಗಿಗಳ ಪ್ರೀತಿಪಾತ್ರರಾಗಿದ್ದ ಇವರು ತನ್ನ ಜೀವನವಿಡೀ ವರ್ಗ ಶೋಷಣೆ ಮತ್ತು ಅನ್ಯಾಯದ ವಿರುದ್ಧ ಅವಿರತ ಹೋರಾಟ ನಡೆಸಿದವರು, ಸದಾ ರೈತಾಪಿ ಜನಗಳು ಮತ್ತು ಶ್ರಮಜೀವಿಗಳ ಪರವಾಗಿ ನಿಂತವರು, ಅವರ ಬದುಕು ಹೊಸ ತಲೆಮಾರಿನ ಕಾರ್ಯಕರ್ತರಿಗೆ ಸ್ಫೂರ್ತಿಯ ಆಗರ ಎಂದು ಅಖಿಲ ಭಾರತ ಕಿಸಾನ್ ಸಭಾ ಶ್ರದ್ಧಾಂಜಲಿ ಅರ್ಪಿಸಿದೆ.

ಅನಕ್ಷರಸ್ಥರು ಅಪರಾಧಿಗಳಿಗೆ ಸಮವೇ? ಹರ್ಯಾಣ ಬಿಜೆಪಿ ಮುಖಂಡರ ಹೇಳಿಕೆಗೆ ಆಕ್ರೋಶ

ಹರ್ಯಾಣ ಬಿಜೆಪಿ ಸರಕಾರದ ಮಂತ್ರಿ ಓಂಪ್ರಕಾಶ್ ಧಂಕರ್ ಎಂಬಾತ ಹರ್ಯಾಣ ಸರಕಾರ ಪಂಚಾಯತು ಚುನಾವಣೆಗಳಲ್ಲಿ ಸ್ಪರ್ಧಿಸಲು ಹಾಕಿರುವ ಶರತ್ತುಗಳನ್ನು ಸುಪ್ರಿಂ ಕೋರ್ಟು ಎತ್ತಿ ಹಿಡಿದಿರುವುದು ಅಪರಾಧೀಕರಣಕ್ಕೆ ಆಗಿರುವ ಸೋಲು ಎಂದು ವರ್ಣಿಸಿದ್ದಾರೆ! ಅಂದರೆ ಅನಕ್ಷರಸ್ಥರು, ಮೆಟ್ರಿಕ್ ಪಾಸಾಗದವರು, ಬಡಜನರು ಮತ್ತು ಕ್ರಿಮಿನಲ್‌ಗಳು ಇವರ ಮಟ್ಟಿಗೆ ಒಂದೇ ಎಂದು ಅರ್ಥವೇ? ಈ ಹೇಳಿಕೆ ಬಿಜೆಪಿಯ ಪ್ರಜಾಪ್ರಭುತ್ವ–ವಿರೋಧಿ ಸವರೂಪವನ್ನು ಬಯಲಿಗೆಳೆದಿದೆ ಎಂದು ಹರ್ಯಾಣ ಸಿಪಿಐ(ಎಂ) ಕಾರ್ಯದರ್ಶಿ ಸುರೇಂದರ್ ಸಿಂಗ್ ಈ ಟಿಪ್ಪಣಿಯನ್ನು ಬಲವಾಗಿ ಖಂಡಿಸಿದ್ದಾರೆ. ಆ ಪಕ್ಷ ಈ ಬಗ್ಗೆ ಕ್ಷಮೆ ಕೇಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಹರ್ಯಾಣದ ಬಿಜೆಪಿ ಸರಕಾರ ಹಾಕಿರುವ ಶರತ್ತುಗಳ ಬಗ್ಗೆ ಜನತೆಯಲ್ಲಿ ಆಕ್ರೋಶ ಉಂಟಾಗಿದೆ, ಏಕೆಂದರೆ ಗ್ರಾಮೀಣ ಪ್ರದೇಶಗಳ ಮೂರನೇ ಎರಡರಷ್ಟು ಮಂದಿಯನ್ನು ಈ ಮೂಲಕ ಚುನಾವಣೆಗೆ ಸ್ಪರ್ಧಿಸದಂತೆ ಮಾಡಲಾಗಿದೆ. ದೇಶದ ಸರ್ವೋಚ್ಚ ನ್ಯಾಯಾಲಯವಾದರೂ ಈ ಪ್ರಜಾಪ್ರಭುತ್ವ ಹಕ್ಕನ್ನು ರಕ್ಷಿಸುತ್ತದೆ ಎಂಬ ನಿರೀಕ್ಷೆ ಈಡೇರಿಲ್ಲ ಎಂದು ಸುರೇಂದರ್ ಸಿಂಗ್ ಖೇದ ವ್ಯಕ್ತಪಡಿಸಿದ್ದಾರೆ. ಪಕ್ಷ ಈಗ ಚುನಾವಣೆಯಲ್ಲಿ ಇದನ್ನು ಒಂದು ಪ್ರಶ್ನೆಯಾಗಿ ಪ್ರಚಾರ ಮಾಡಲಿದೆ ಎಂದು ಅವರು ಹೇಳಿದ್ದಾರೆ. ಈ ಹಿಂದೆ ಹರ್ಯಾಣ ಸರಕಾರ ಎರಡು ಮಕ್ಕಳಿಗಿಂತ ಹೆಚ್ಚಿದದವರನ್ನು ಸ್ಪರ್ಧಿಸಲು ಅನರ್ಹಗೊಳಿಸಿತ್ತು. ಸುಪ್ರಿಂ ಕೋರ್ಟ್ ಅದನ್ನೂ ಎತ್ತಿ ಹಿಡಿದಿತ್ತು. ಆದರೆ ಜನರ ಪ್ರತಿಭಟನೆಯಿಂದಾಗಿ ಹರ್ಯಾಣ ವಿಧಾನ ಸಭೆ ಅದನ್ನು ಹಿಂತೆಗೆದುಕೊಂಡಿತು ಎಂದು ಅವರು ನೆನಪಿಸಿದ್ದಾರೆ.

ವಿಶ್ವ ಮಾನವ ಹಕ್ಕುಗಳ ದಿನದಂದು ಪ್ರಜಾಪ್ರಭುತ್ವ ಹಕ್ಕಿನ ವಂಚನೆಯ ತೀರ್ಪು –ಜನವಾದಿ ಮಹಿಳಾ ಸಂಘದ ಖೇದ

ಹರ್ಯಾಣದ ಪ್ರತಿ ಮೂರರಲ್ಲಿ ಇಬ್ಬರು ಗ್ರಾಮವಾಸಿಗಳನ್ನು ಚುನಾವಣೆಗಳಲ್ಲಿ ಸಪರ್ಧಿಸಲು ಅನರ್ಹಗೊಳಿಸಿರುವುದನ್ನು ಎತ್ತಿ ಹಿಡಿದಿರುವ ತೀರ್ಪಿನ ಬಗ್ಗೆ ತನ್ನ ತೀವ್ರ ಅಸಮ್ಮತಿಯನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ವ್ಯಕ್ತಪಡಿಸಿದೆ. ವಿಶ್ವ ಮಾನವ ಹಕ್ಕು ದಿನದಂದೇ ಈ ತೀರ್ಪು ಬಂದಿರುವುದು ಇನ್ನಷ್ಟು ಬೇಸರ ಉಂಟು ಮಾಡುವ ಸಂಗತಿ ಎಂದು ಅದು ಹೇಳಿದೆ. ಈ ತೀರ್ಪು ಮಹಿಳೆಯರು ಮತ್ತು ದಲಿತರು ಸೇರಿದಂತೆ ಎಲ್ಲ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಂಚಿಗೆ ತಳ್ಳಲ್ಪಟ್ಟಿರುವ ಜನವಿಭಾಗಗಳ ಮೂಲಭೂತ ಹಕ್ಕುಗಳ ಮೇಲೆ ದೀರ್ಘಕಾಲದ ದುಷ್ಪರಿಣಾಮ ಬೀರಲಿದೆ ಎಂದು ಅದು ಹೇಳಿದೆ.

ಸಂಘಟನೆಯ ಪ್ರಧಾನ ಕಾರ್ಯದರ್ಶಿ ಜಗ್ಮತಿ ಸಂಗ್ವಾನ್ ನೀಡಿರುವ ಪತ್ರಿಕಾ ಹೇಳಿಕೆ, ಸುಪ್ರಿಂಕೋರ್ಟ್ ತನ್ನ ಮುಂದಿಟ್ಟ ಎಲ್ಲ ಸಂಗತಿಗಳನ್ನು, ತರ್ಕಗಳನ್ನು ಗಮನಕ್ಕೆ ತೆಗೆದುಕೊಳ್ಳದೆ, ಬಹುಪಾಲು ರಾಜ್ಯ ಸರಕಾರ ಒದಗಿಸಿದ ಅಸಂಪೂರ್ಣ ಮಾಹಿತಿಯನ್ನೇ ಆಧರಿಸಿದೆ ಎಂದಿದೆ. ಕಾನೂನುವಿದರು ಈ ತೀರ್ಪಿನ ಮರುವಿಮರ್ಶೆಗೆ ಅರ್ಜಿಯನ್ನು ಸಲ್ಲಿಸುವ ಬಗ್ಗೆ ಪರಿಶೀಲಿಸುತ್ತಿದ್ದಾರೆ, ಈ ನಡುವೆ ಎಐಡಿಡಬ್ಲ್ಯುಎ ಸುಪ್ರಿಂ ಕೋರ್ಟಿನಿಂದ ನ್ಯಾಯ ನಿರೀಕ್ಷಿಸುತ್ತಿದ್ದ ಜನಗಳನ್ನು ಹೆಚ್ಚೆಚ್ಚು ಸಂಖ್ಯೆಯಲ್ಲಿ ಅಣಿನೆರಸುತ್ತದೆ ಎಂದಿದೆ.

ಎಂಟು ವರ್ಷಗಳ ನಂತರ ಅಯೋಧ್ಯೆಗೆ ಕಲ್ಲು ತುಂಬಿದ ಟ್ರಕ್‌ಗಳು: ಕೋರ್ಟ್ ನಿರ್ದೇಶನದ ಉಲ್ಲಂಘನೆ ಎಂದು ಕ್ರಮ ಕೈಗೊಳ್ಳಬೇಕು –ಪ್ರಕಾಶ ಕಾರಟ್

ಕಳೆದ ವಾರ ರಾಜಸ್ತಾನದಿಂದ ಎರಡು ಟ್ರಕ್ಕುಗಳಲ್ಲಿ ಮರಳುಗಲ್ಲುಗಳು ಅಯೋಧ್ಯಾ ತಲುಪಿ ದೇವಸ್ಥಾನ ನಿರ್ಮಾಣದ ಶಿಲಾಭಂಡಾರವನ್ನು ಸೇರಿವೆ. ವಿಶ್ವ ಹಿಂದೂ ಪರಿಷದ್ ನಡೆಸುವ ವರ್ಕಶಾಪ್ ದೇವಸ್ಥಾನ ಕಟ್ಟಲು ಕಲ್ಲುಗಳನ್ನು ಕೆತ್ತುವ ಕೆಲಸದಲಿ ತೊಡಗಿತ್ತು. ಈಗ ಎಂಟು ವರ್ಷಗಳ ಅಂತರದ ನಂತರ ಅಯೋಧ್ಯಾ ತಲುಪಿದ ಕಲ್ಲುಗಳ ಹೊಸ ಕಂತುಗಳನ್ನು ಬರಮಾಡಿಕೊಳ್ಳಲು ಸಮಾರಂಭಗಳನ್ನು ನಡೆಸಲಾಗಿದೆ. ಆರೆಸ್ಸೆಸ್ ಕೂಟ ತನ್ನ ರಾಮ ದೇವಸ್ಥಾನ ಅಜೆಂಡಾವನ್ನು ಎತ್ತಿ ನಿಲ್ಲಿಸಲು ನಿರ್ಧರಿಸಿದೆ ಎಂಬುದನ್ನು ಇದು ತೋರಿಸುತ್ತದೆ ಎಂದು ಸಿಪಿಐ(ಎಂ)ನ ಹಿರಿಯ ಮುಖಂಡರಾದ ಪ್ರಕಾಶ ಕಾರಟ್ ಅಭಿಪ್ರಾಯ ಪಟ್ಟಿದ್ದಾರೆ.

ವಿಹೆಚ್‌ಪಿ ನಡೆಸುವ ರಾಮಜನ್ಮಭೂಮಿ ನ್ಯಾಸ್‌ಗೆ ಮೋದಿ ಸರಕಾರ ಅಧಿಕಾರದಲ್ಲಿರುವುದರಿಂದ ದೇವಸ್ಥಾನ ಕಟ್ಟಲಾಗುವುದು ಎಂಬ 'ಸಕಾರಾತ್ಮಕ ಸಂಕೇತ'ಗಳು ಅವರಿಗೆ ದೊರೆತಿದೆಯಂತೆ. ಆರೆಸ್ಸೆಸ್ ಮುಖ್ಯಸ್ಥ ಮೋಹನ ಭಾಗವತರು ಡಿಸೆಂಬರ್ 3ರಂದು "ಯಾವಾಗ, ಹೇಗೆ ಆ ದೇವಸ್ಥಾನ ಕಟ್ಟಲಾಗುವುದು ಎಂದು ಯಾರೂ ಹೇಳಲಾರರು, ಆದರೆ ನಾವು ಸಿದ್ಧರಾಗಿರಬೇಕು" ಎಂದು ಹೇಳಿರುವುದೇ ಆ 'ಸಕಾರಾತ್ಮಕ ಸಂಕೇತ' ವಾಗಿರಬಹುದು ಎನ್ನುತ್ತಾರೆ ಪ್ರಕಾಶ ಕಾರಟ್ ತನ್ನ ಜೀವಮಾನದಲ್ಲಿ ದೇವಸ್ಥಾನ ಕಟ್ಟಲಾಗುವುದು ಎಂದೂ ಆರೆಸ್ಸೆಸ್ ಮುಖ್ಯಸ್ಥರು ಹೇಳಿದ್ದಾರಂತೆ.

ಅಯೋಧ್ಯೆಯಲ್ಲಿ ಮತ್ತೆ ಆರಂಭವಾಗಿರುವ ವಿಹೆಚ್‌ಪಿಯ ಹೊಸ ಚಟುವಟಿಕೆಗಳನ್ನು ಮತ್ತೊಮ್ಮೆ ದೇವಸ್ಥಾನದ ಪ್ರಶ್ನೆಯನ್ನು ರಾಜಕೀಯ ಉದ್ದೇಶದಿಂದ ಕೆದಕುವುದಕ್ಕೆ ನಡೆಸುತ್ತಿರುವ ತಯಾರಿ ಎಂದು ಕಾಣಬೇಕು. ಉತ್ತರ ಪ್ರದೇಶ ವಿಧಾನ ಸಭಾ ಚುನಾವಣೆಗಳು 2017ರ ಆರಂಭದಲ್ಲಿ ನಡೆಯಬೇಕಾಗಿದೆ. ಅದಕ್ಕೆ ಕೋಮುವಾದದ ಗಡಿಗೆಯನ್ನು ಕದಡುವ ಅಗತ್ಯ ಆರೆಸ್ಸೆಸ್–ಬಿಜೆಪಿಗಿದೆ. ಅಗತ್ಯ ಬಿದ್ದರೆ ಅದರ ಕೆಳಗೆ ಉರಿ ಹಾಕಿ ಕುದಿಯುವಂತೆಯೂ ಮಾಡಬಹುದಲ್ಲ! ಬಿಹಾರ ಚುನಾವಣೆಗಳಲ್ಲಿ ಬಿಜೆಪಿಯ ಬೆಂಬಲ ಕ್ಷಯಗೊಳ್ಳುತ್ತಿರುವುದನ್ನು ಕಂಡ ಮೇಲೆ ಆರೆಸ್ಸೆಸ್ ತನ್ನ ಬತ್ತಳಿಕೆಯಲ್ಲಿರುವ ಕೋಮುವಾದಿ ಅಸ್ತ್ರಗಳನ್ನು ಸಿದ್ದಗೊಳಿಸುತ್ತಿದೆ ಎಂದು ಪ್ರಕಾಶ ಕಾರಟ್ ಅಭಿಪ್ರಾಯ ಪಟ್ಟಿದ್ದಾರೆ.

ಅಯೋಧ್ಯಾ ವಿವಾದ ಸುಪ್ರಿಂ ಕೋರ್ಟಿನಲ್ಲಿದೆ. ಬಾಬ್ರಿ ಮಸೀದಿ ಇದ್ದ ಸ್ಥಳದಲ್ಲಿ ಯಥಾಸ್ಥಿತಿ ಕಾಪಾಡಬೇಕೆಂಬ ಕೋರ್ಟ್ ನಿರ್ದೇಶನ ಬಹಳ ಕಾಲದಿಂದ ಇದೆ. ದೇವಸ್ಥಾನ ಕಟ್ಟುವುದಕ್ಕಾಗಿ ಕಲ್ಲುಗಳನ್ನು ಸಂಗ್ರಹಿಸುವುದು ಈ ಕೋರ್ಟ್ ನಿರ್ದೇಶನದ ಉಲ್ಲಂಘನೆ ಎಂದು ಕಾಣಬೇಕಾಗಿದೆ. ಉತ್ತರ ಪ್ರದೇಶ ಮುಖ್ಯಮಂತ್ರಿಗಳು ಜಿಲ್ಲಾ ಆಡಳಿತಕ್ಕೆ ಜಾಗರೂಕರಾಗಿರಬೇಕು ಎಂದು ನಿರ್ದೇಶನ ನೀಡಿದ್ದಾರಂತೆ. ಆದರೆ ಇದಷ್ಟೇ ಸಾಲದು. ಜಿಲ್ಲಾ ಆಡಳಿತ ಕಲ್ಲುಗಳನ್ನು ಅಯೋಧ್ಯೆಗೆ ತರಿಸಿಕೊಳ್ಳುವುದು ಮುಂತಾದ ಯಾವುದೇ ಚಟುವಟಿಕೆಯನ್ನು ಯಥಾಸ್ಥಿತಿಯನ್ನು ಕದಡಲಿಕ್ಕಾಗಿ ಎಂದು ಪರಿಗಣಿಸಿ ತಡೆಯಬೇಕೆಂದು ಉತ್ತರ ಪ್ರದೇಶ ಸರಕಾರ ನಿರ್ದೇಶನ ನೀಡಬೇಕು. ಕಿತಾಪತಿಯ ಯೋಜನೆಯನ್ನು ಮೊಳಕೆಯಲ್ಲೇ ಹಿಸುಕಿ ಹಾಕಬೇಕು ಎಂದು ಪ್ರಕಾಶ ಕಾರಟ್ ಹೇಳಿದ್ದಾರೆ.

ಮಡೆಸ್ನಾನ, ಎಡೆಸ್ನಾನಗಳಿಗೆ ದ.ಕ.ಜಿಲ್ಲೆಯಲ್ಲಿ ಪ್ರತಿಭಟನೆ:

ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಈ ವರ್ಷಡಿಸೆಂಬರ್ 15 ರಂದು ಷಷ್ಠಿ ಜಾತ್ರೆ, ದೇವಸ್ಥಾನದ ಅಂಗಣದಲ್ಲಿ ಬ್ರಾಹ್ಮಣರು ಉಂಡ ಎಲೆಗಳ ಉಚ್ಚಿಷ್ಠದ ಮೇಲೆ ಹರಕೆ ಹೊತ್ತಇತರ ಭಕ್ತಾದಿಗಳು ಮಾಡುವ ಉರುಳು ಸೇವೆಯೇ ಮಡೆ ಮಡೆಸ್ನಾನ. ಬ್ರಾಹ್ಮಣರಿಗೆ ಇತರರಿಗೆ ಬೇರೆ ಬೇರೆ ಭೋಜನ ಪ್ರಸಾದ ನೀಡುವ ಪಂಕ್ತಿಭೇದವೆಂಬ ಜಾತಿತಾರತಮ್ಯ ಇದರ ಮೂಲ ಆಧಾರ. ಎಂಜಲನ್ನದ ಮೇಲೆ ಹೊರಳಾಡುವ ಮೂಢ ಆಚರಣೆ ಅತ್ಯಂತ ಹೀನ ಹಾಗೂ ಮಾನವ ಘನತೆಗೆ ತಕ್ಕುದಲ್ಲದ ಆಚರಣೆ. ಪಂಕ್ತಿಭೇದ ಹಾಗೂ ಮಡೆಸ್ನಾನವನ್ನು ನಿಷೇಧಿಸಬೇಕೆಂದು ಸಿಪಿಐ(ಎಂ), ದಲಿತ ಹಕ್ಕುಗಳ ಸಮಿತಿ, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ, ಪ್ರಗತಿಪರ ಜನಸಮೂಹ ಸರಕಾರವನ್ನು ಕಳೆದ 5 ವರ್ಷಗಳಿಂದ ಆಗ್ರಹಿಸುತ್ತಾ ಬಂದಿದೆ.

ಪಂಕ್ತಿಭೇದ ಮತ್ತು ಮಡೆಸ್ನಾನವನ್ನು ಇತರ ದೇವಾಲಯಗಳಲ್ಲೂ ನಿಷೇಧಿಸಬೇಕೆಂದು ಎರಡು ಬಾರಿ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಉಡುಪಿ ಶ್ರೀ ಕೃಷ್ಣಾ ದೇವಾಲಯದ ಹೊರಗಡೆ ಪ್ರತಿಭಟನೆ ನಡೆಸಲಾಗಿತ್ತು. ಅಲ್ಲಿ ನಡೆಸಲು ಕಾರಣ ಉಡುಪಿಯ ಪೇಜಾವರ ಸ್ವಾಮಿಗಳು ಪಂಕ್ತಿಭೇದವನ್ನು ಎತ್ತಿ ಹಿಡಿಯುವ ಹಿಂದುತ್ವದ ರಾಷ್ಟ್ರೀಯ ನಾಯಕರಲ್ಲೊಬ್ಬರಾಗಿರುವುದು. ಉಡುಪಿಯಲ್ಲಿ ನಡೆದ ಎರಡನೇ ಪ್ರತಿಭಟನೆ ವೇಳೆ ರಾಜ್ಯ ಪೊಲೀಸರು 180 ಮಂದಿ ಸಿಪಿಐ(ಎಂ) ಕಾರ್ಯಕರ್ತರನ್ನು ಬಂಧಿಸಿ ಕ್ರಿಮಿನಲ್ ಪ್ರಕರಣ ದಾಖಲೆ ಮಾಡಿದ್ದರು.

ಮಡೆಸ್ನಾನಕ್ಕೆ ರಾಜ್ಯಾದ್ಯಂತ ವಿರೋಧವಿದೆ ಎಂಬುದನ್ನು ಗಮನಿಸಿದ ಪೇಜಾವರ ಸ್ವಾಮಿಗಳು ಎಡೆಸ್ನಾನ ಎಂಬ ಪರ್ಯಾಯವನ್ನು ರಾಜ್ಯ ಸರಕಾರಕ್ಕೆ ಸಲಹೆ ಮಾಡಿದ್ದರು. ಅದೇನೆಂದರೆ ದೇವಾಲಯದ ದೇವರ ಭೋಜನ ಪ್ರಸಾದವನ್ನು ಗೋವುಗಳಿಗೆ ಉಣ್ಣಿಸಿ ಉಳಿದ ಭೋಜನವನ್ನು ದೇವಾಲಯದ ಅಂಗಣದಲ್ಲಿ ಚೆಲ್ಲುವುದು; ಹರಕೆ ಹೊತ್ತ ಭಕ್ತರು ಅದರ ಮೇಲೆ ಉರುಳು ಸೇವೆ ಮಾಡುವುದು. ಇದೂ ಇನ್ನೊಂದು ಮೂಢನಂಬಿಕೆಯೇ. ಹೊಸ ಮೂಢನಂಬಿಕೆಯನ್ನು ಸಿಪಿಐ(ಎಂ) ಮತ್ತು ದಲಿತ ಹಕ್ಕುಗಳ ಸಮಿತಿ, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಗಳು ವಿರೋಧಿಸಿವೆ. ಆದರೆ ರಾಜ್ಯ ಸರಕಾರ ಪೇಜಾವರ ಸ್ವಾಮಿಗಳ ಸಲಹೆಯನ್ನು ಸ್ವೀಕಾರ ಮಾಡಿ ಅದನ್ನು ಸುಬ್ರಹ್ಮಣ್ಯದಲ್ಲಿ ಅನುಷ್ಠಾನಕ್ಕೆ ತರಲು ನ್ಯಾಯಾಲಯದ ಸಮ್ಮತಿ ಕೋರಿದೆ. 2014 ಕಿರುಷಷ್ಠಿಯ ವೇಳೆ ಎಡೆಸ್ನಾನಕ್ಕೆ ರಾಜ್ಯ ಸರಕಾರ ಅವಕಾಶ ಮಾಡಿಕೊಟ್ಟಿತ್ತು. ಆದಾಗ್ಯೂ ಅಂತಿಮ ತೀರ್ಪನ್ನು ನ್ಯಾಯಾಲಯ ನೀಡಿರುವುದಿಲ್ಲ.



ಪಂಕ್ತಿಭೇದ, ಮಡೆಸ್ನಾನ, ಎಡೆಸ್ನಾನಗಳನ್ನು ನಿಷೇಧಿಸಬೇಕು ಎಂದು ಆಗ್ರಹಿಸುವ ಪ್ರತಿಭಟನಾ ಕಾರ್ಯಕ್ರಮವನ್ನು ಇದೇ ಡಿಸೆಂಬರ್ 15 ರಂದು ಹಮ್ಮಿಕೊಳ್ಳಲು ಕರ್ನಾಟಕ ದಲಿತ ಹಕ್ಕುಗಳ ಸಮಿತಿ ಹಾಗೂ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಕರೆ ಕೊಟ್ಟಿರುತ್ತದೆ. ಅದರ ಭಾಗವಾಗಿ ಬೆಳ್ತಂಗಡಿ ಮತ್ತು ಮಂಗಳೂರಿನಲ್ಲಿ ಪ್ರತಿಭಟನೆಗಳನ್ನು ಏರ್ಪಡಿಸಲಾಗಿತ್ತು.

ಬೆಳ್ತಂಗಡಿ:

ಡಿಸೆಂಬರ್ 14 ರಂದು ಬೆಳ್ತಂಗಡಿಯ ತಾಲೂಕು ಕಚೇರಿಯ ಎದುರು ಕರ್ನಾಟಕ ದಲಿತ ಹಕ್ಕುಗಳ ಸಮಿತಿ, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹವನ್ನು ಏರ್ಪಡಿಸಲಾಗಿತ್ತು. ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಕಾರ್ಯದರ್ಶಿ ಬಿ.ಎಂ.ಭಟ್, ಆದಿವಾಸಿ ಹಕ್ಕುಗಳ ಸಮಿತಿ ತಾಲೂಕು ಮುಖಂಡರಾದ ವಿಠಲ ಮಲೆಕುಡಿಯ, ವಸಂತ ನಡ, ದಲಿತ ಹಕ್ಕುಗಳ ಸಮಿತಿ ಮುಖಂಡರಾದ ಶೇಖರ ಲಾಯಿಲ, ಈಶ್ವರಿ ಧರಣಿ ಸತ್ಯಾಗ್ರಹ ನೇತೃತ್ವ ವಹಿಸಿದ್ದರು. ಬಳಿಕ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಮಂಗಳೂರು:

ಡಿಸೆಂಬರ್ 15 ರಂದು ಕರ್ನಾಟಕ ದಲಿತ ಹಕ್ಕುಗಳ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮಂಗಳೂರಿನಲ್ಲಿ ದ.ಕ.ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು. ಪ್ರತಿಭಟನೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ, ಸಮುದಾಯದ ವಾಸುದೇವ ಉಚ್ಚಿಲ, ದಲಿತ ಹಕ್ಕುಗಳ ಜಿಲ್ಲಾ ಸಮಿತಿ ಸಂಚಾಲಕ ಲಿಂಗಪ್ಪ ನಂತೂರು ಮಾತನಾಡಿದರು. ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಪ್ರಶಾಂತ್ ಎಂ.ಬಿ.ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಗಿರಿಜ ಮೂಡಬಿದರೆ ವಂದಿಸಿದರು.

ಮಡೆಸ್ನಾನ ತಡೆಯುವಲ್ಲಿ ಶ್ರೀ ಕೃಷ್ಣ ಮಠ ವಿಫಲ

ಷಷ್ಠಿಯ ದಿನದಂದು ಜಿಲ್ಲೆಯ ಹಲವಾರು ಸುಬ್ರಹ್ಮಣ್ಯ ದೇವಸ್ಥಾನಗಳಲ್ಲಿ 'ಮಡೆಸ್ನಾನ' ನಡೆದಿದೆ ಎಂದು ವರದಿಯಾಗಿದ್ದು, ಅದನ್ನು ತಡೆಯುವಲ್ಲಿ ಶ್ರೀ ಕೃಷ್ಣ ಮಠವು ಸೇರಿದಂತೆ ಕೆಲವು ದೇವಸ್ಥಾನಗಳ ಆಡಳಿತ ಹಾಗೂ ಜಿಲ್ಲಾಡಳಿತ ವಿಫಲವಾಗಿದೆಯೆಂದು ಸಿ.ಪಿ.ಐ.(ಎಂ.) ಉಡುಪಿ ಜಿಲ್ಲಾ ಸಮಿತಿ ಆರೋಪಿಸಿದೆ.

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ನಡೆಯುತ್ತಿದ್ದ ಮಡೆಸ್ನಾನದ ವಿರುದ್ಧ ಉನ್ನತ ನ್ಯಾಯಾಲಯದಲ್ಲಿ ನಡೆದ ದಾವೆಯಲ್ಲಿ ಪೇಜಾವರ ಶ್ರೀಗಳ ಸೂಚನೆಯ ಹಿನ್ನಲೆಯಲ್ಲಿ ಮಡೆಸ್ನಾನಕ್ಕೆ ತಡೆಯಾಜ್ಞೆ ನೀಡಲಾಗಿತ್ತು. ಆದ್ದರಿಂದ ಕುಕ್ಕೆಯಲ್ಲಿ 'ಎಡೆಸ್ನಾನ' ನಡೆಯುತ್ತಿದೆ. ಚಿಕ್ಕಬಳ್ಳಾಪುರದ ದೇವಸ್ಥಾನದಲ್ಲಿ ಜನರ ಪ್ರತಿಭಟನೆಯ ಅನಂತರ 'ಮಡೆಸ್ನಾನ' ನಿಷೇಧಿಸಲಾಗಿದೆ. 'ಎಡೆಸ್ನಾನ' ಕೂಡಾ ನಡೆಯುತ್ತಿಲ್ಲ.

ಇಂತಹ ಸಂದರ್ಭದಲ್ಲಿ ಮಧ್ವಮಠಗಳ ಆಡಳಿತದಲ್ಲಿರುವ ಹಾಗೂ ಪೇಜಾವರ ಶ್ರೀಗಳ ಪ್ರಭಾವ ಇರುವ ಶ್ರೀ ಕೃಷ್ಣಮಠದಲಿ 'ಮಡೆಸ್ನಾನ' ಮುಂದುವರಿಯುತ್ತಿರುವುದು ಶೋಚನೀಯ.

ಜನರ ನಂಬಿಕೆಗಳಿಗೆ ಅಡ್ಡಬರುವುದು ಸಿ.ಪಿ.ಐ.(ಎಂ.)ನ ಉದ್ದೇಶವಲ್ಲ. ಆದರೆ ನಂಬಿಕೆಯ ಹೆಸರಿನಲ್ಲಿ ಮನುಷ್ಯ, ಮನುಷ್ಯನನ್ನು ಕೀಳಾಗಿ ನೋಡುವ ಮೂಢನಂಬಿಕೆಗಳು ಜಾರಿಯಲ್ಲಿರುವುದು ಅಮಾನವೀಯ. ಅಂತಹವುಗಳನ್ನು ಸರಕಾರ ನಿಷೇಧಿಸಬೇಕು. ಹಿಂದೆ ಬೆತ್ತಲ ಸೇವೆ, ದೇವದಾಸಿ ಪದ್ಧತಿಗಳು ಜಾರಿಯಲ್ಲಿದ್ದವು. ಕೆಲವು ಜನರು ಅದನ್ನು ನಂಬುತ್ತಿದ್ದರು. ಈ ಅಮಾನವೀಯ ಪದ್ಧತಿಯ ವಿರುದ್ಧಜನರ ಪ್ರತಿಭಟನೆ ತೀವ್ರಗೊಂಡಾಗ ಸರಕಾರ ಅವುಗಳನ್ನು ನಿಷೇಧಿಸಿತು. ಆದ್ದರಿಂದ 'ಮಡೆಸ್ನಾನ' ಮತ್ತು 'ಎಡೆಸ್ನಾನ' ಪದ್ಧತಿಯನ್ನು ಸಂಬಂಧಪಟ್ಟ ದೇವಸ್ಥಾನಗಳ ಆಡಳಿತ ಮಂಡಳಿ ಕೈ ಬಿಡಬೇಕೆಂಬುದು ಸಿ.ಪಿ.ಐ.(ಎಂ.) ಒತ್ತಾಯ.

ರೈತರ ಆತ್ಮಹತ್ಯೆ ತಡೆಗೆ ದ.ಕ. ರೈತ ಸಂಘಗಳ ಆಗ್ರಹ:

ಕೃಷಿಗೆ ರಕ್ಷಣೆ ನೀಡಿ ರೈತರ ಆತ್ಮಹತ್ಯೆಗಳನ್ನು ತಡೆಯಬೇಕು, ಕೃಷಿಯಲ್ಲಿ ವಿದೇಶೀ ನೇರ ಬಂಡವಾಳ ಹೂಡಿಕೆಗೆ ಅವಕಾಶ ನೀಡಬಾರದು, ಬಗರ್ ಹುಕುಂ ಸಾಗುವಳಿದಾರರ 5 ಎಕರೆ ವಿಸ್ತೀರ್ಣದ ಕೃಷಿಗೆ ಮಂಜೂರಾತಿ ನೀಡಬೇಕು, ಉತ್ತರ ಕರ್ನಾಟಕ ಭಾಗದ ನೀರಾವರಿ ಯೋಜನೆ ತ್ವರಿತವಾಗಿ ಪೂರ್ಣಗೊಳಿಸಬೇಕು, ದಿನಕ್ಕೆ ಕನಿಷ್ಟ 12 ಗಂಟೆಗಳ ಕಾಲ ಗುಣಮಟ್ಟದ ವಿದ್ಯುತ್ತನ್ನು ಕೃಷಿಗೆ ಪೂರೈಸಬೇಕು, ಅನಗತ್ಯವಾಗಿ ಕೈಗಾರಿಕೆಗಳಿಗೆ ಜಮೀನು ಮಂಜೂರು ಮಾಡುವುದನ್ನು ನಿಲ್ಲಿಸಬೇಕು ಎಂಬುದಾಗಿ ಕರ್ನಾಟಕ ಪ್ರಾಂತರೈತ ಸಂಘದ ದ.ಕ.ಜಿಲ್ಲಾಧ್ಯಕ್ಷ ಹಿರಿಯ ಕಮ್ಯೂನಿಸ್ಟ್ ಮುಖಂಡ ಕೆ.ಆರ್.ಶ್ರೀಯಾನ್ ಆಗ್ರಹಿಸಿದರು.

ಅವರು ಡಿಸೆಂಬರ್ 15 ರಂದು ಮಂಗಳೂರಿನಲ್ಲಿ ದ.ಕ.ಜಿಲ್ಲಾಧಿಕಾರಿಗಳ ಕಚೇರಿಯ ಎದುರು ಕರ್ನಾಟಕ ರಾಜ್ಯ ರೈತ ಸಂಘ (ಹಸಿರು ಸೇನೆ) ಮತ್ತು ಕರ್ನಾಟಕ ಪ್ರಾಂತ ರೈತ ಸಂಘಗಳ ಜಿಲ್ಲಾ ಸಮಿತಿಗಳ ಜಂಟಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಮಲೆನಾಡು ಪ್ರದೇಶಗಳಲ್ಲಿ ರೈತರಿಗೆ ಬಾಧಕವಾಗಿರುವ ಕಸ್ತೂರಿ ರಂಗನ್ ವರದಿಯನ್ನು ಜಾರಿಗೊಳಿಸಬಾರದು. ಬೆಲೆ ಕುಸಿತದಿಂದ ಬಾಧಿತವಾಗಿರುವ ರಬ್ಬರ್ ಬೆಳೆಗಾರರಿಗೆ ಸೂಕ್ತ ಧಾರಣೆ ಒದಗಿಸಬೇಕು. ಎಂ.ಎಸ್. ಸ್ವಾಮಿನಾಥನ್ ವರದಿಯಂತೆ ಕೃಷಿ ವೆಚ್ಚದ ಒಂದೂವರೆ ಪಟ್ಟು ಬೆಲೆ ಕೃಷಿಕರಿಗೆ ಭದ್ರತೆ ಒದಗಿಸಬೇಕು. ಅಡಿಕೆ, ತೆಂಗು, ರಬ್ಬರ್, ಕಬ್ಬಿಗೆ ಧಾರಣೆ ಸ್ಥಿರತೆ ನೀಡಲು ವಿದೇಶದಿಂದ ಸಕ್ಕರೆ, ಅಡಿಕೆ, ತೆಂಗು, ರಬ್ಬರ್ ಆಮದನ್ನು ಸ್ಥಗಿತಗೊಳಿಸಬೇಕು ಎಂದು ಅವರು ಕೇಂದ್ರ ರಾಜ್ಯ ಸರಕಾರವನ್ನು ಆಗ್ರಹಿಸಿದರು.

ಕೇಂದ್ರ ಮತ್ತು ರಾಜ್ಯ ಸರಕಾರಗಳ ರೈತ ವಿರೋಧಿ ನೀತಿಯನ್ನು ವಿರೋಧಿಸಿ ರಾಜ್ಯಾದ್ಯಂತ 15 ರೈತ ಸಂಘಟನೆಗಳು ಕರೆಕೊಟ್ಟ ಮೇರೆಗೆ ದ.ಕ. ಜಿಲ್ಲೆಯಲ್ಲಿ ಈ ಪ್ರತಿಭಟನೆ ನಡೆದಿರುತ್ತದೆ. ಕರ್ನಾಟಕ ರಾಜ್ಯರೈತ ಸಂಘ (ಹಸಿರು ಸೇನೆ) ದ.ಕ.ಜಿಲ್ಲಾಧ್ಯಕ್ಷ ರವಿ ಪುಣಚ, ಕಾರ್ಯದರ್ಶಿ ಸುರೇಶ್ ಭಟ್ ಕೊಜಂಬೆ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಉಪಾಧ್ಯಕ್ಷರಾದ ಕೃಷ್ಣಪ್ಪ ಸಾಲ್ಯಾನ್, ವಾಸುದೇವ ಉಚ್ಚಿಲ, ರೈತ ಸಂಘದ ಇತರ ಮುಖಂಡರು ಭಾಗವಹಿಸಿದ್ದರು.

ಮಂಗಳೂರು ಪಾಲಿಕೆ ಎದುರು ನಿವೇಶನ ರಹಿತರ 24 ಗಂಟೆಗಳ ಧರಣಿಅನ್ನಸತ್ಯಾಗ್ರಹ:

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಲವಾರು ವರ್ಷಗಳಿಂದ ಬಡ ನಿವೇಶನ ರಹಿತರಿಗೆ ನಿವೇಶನ ನೀಡುವ ಪ್ರಕ್ರಿಯೆ ನಡೆದಿರುವುದಿಲ್ಲ. 5 ವರ್ಷಗಳ ಹಿಂದೆ ಡಿವೈಎಫ್ಐ ನೇತೃತ್ವದಲ್ಲಿ ನಿವೇಶನ ರಹಿತರು ಪಾಲಿಕೆಗೆ ಅರ್ಜಿ ಸಲ್ಲಿಸಿ ಚಳುವಳಿ ನಡೆಸಿದರು. ಕಳೆದ 2 ವರ್ಷಗಳಿಂದ ಸಿಪಿಐ(ಎಂ) ಮಂಗಳೂರು ನಗರ ಸಮಿತಿಯ ನೇತೃತ್ವದಲ್ಲಿ ಮಹಾನಗರದ ನಿವೇಶನ ರಹಿತರ ಹೋರಾಟ ಸಮಿತಿ ಚಳುವಳಿಯನ್ನು ಮುಂದುವರೆಸಿಕೊಂಡು ಬರುತ್ತಿದೆ. ಸತ್ಯಾಗ್ರಹಿಗಳು, ಪಾಲಿಕೆ ಹಾಗೂ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆಗಳು, 24 ಗಂಟೆಗಳ ಧರಣಿ, ಶಾಸಕರ ಕಚೇರಿಗೆ ಮುತ್ತಿಗೆ, ಪಾಲಿಕೆ ಕಚೇರಿ ಚಲೋ – ಹೀಗೆ ಹತ್ತು ಹಲವು ರೀತಿಯಲ್ಲಿ ಪ್ರತಿಭಟನೆಗಳು ನಡೆದಿದ್ದರೂ ಮಂಗಳೂರು ನಗರ ಪಾಲಿಕೆಯ ಆಡಳಿತದ ಪ್ರಕ್ರಿಯೆ ಜಡತೆಯಿಂದ ಕೂಡಿದ್ದಾಗಿದೆ. ನಿವೇಶನ ರಹಿತರ ಹೋರಾಟ ಸಮಿತಿಯು 800 ಕ್ಕೂ ಮೀರಿ ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದು ತಿಳಿದು ಬರುತ್ತಿದೆ. ಇದೀಗ 2010 ರಲ್ಲಿ ಪಾಲಿಕೆ ಸಿದ್ಧಪಡಿಸಿದ್ದ ಪಟ್ಟಿಯ ಅರ್ಜಿದಾರರ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ತಿಳಿದು ಬಂದಿದೆ. ಈ ಆಮೆಗತಿಯ ನಡವಳಿಕೆಯನ್ನು ಪ್ರತಿಭಟಿಸಿ ಮಂಗಳೂರು ನಗರದ 12 ಜನ ಸಿಪಿಐ(ಎಂ) ಮುಖಂಡರು 24 ಗಂಟೆಗಳ ಅನ್ನ ಸತ್ಯಾಗ್ರಹವನ್ನು ಡಿಸೆಂಬರ್ 7 ರಂದು ಕೈಗೊಂಡಿದ್ದು, ಅವರಿಗೆ ಬೆಂಬಲವಾಗಿ ನೂರಾರು ಮಂದಿ 24 ಗಂಟೆ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು.

ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಸದಸ್ಯ ವೆಂಕಟೇಶ ಕೋಣಿ ಈ ಅನ್ನಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡಿ ಪ್ರತಿಭಟನೆಗೆ ಸ್ಫೂರ್ತಿತುಂಬಿದರು. ಅಲ್ಲದೇ ಅವರೂ ಸತ್ಯಾಗ್ರಹಿಗಳೊಂದಿಗೆ 24 ಗಂಟೆಗಳ ಅನ್ನ ಸತ್ಯಾಗ್ರಹ ನಡೆಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಸಿಪಿಐ(ಎಂ) ಮಂಗಳೂರು ನಗರ ಉತ್ತರ ಸಮಿತಿ ಕಾರ್ಯದರ್ಶಿ ಕೃಷ್ಣಪ್ಪಕೊಂಚಾಡಿ, ನಗರದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ, ಖ್ಯಾತ ವಿಚಾರವಾದಿ ಪ್ರೊ.ನರೇಂದ್ರ ನಾಯಕ್, ಪಿ.ಹರೀಶ್ಚಂದ್ರರಾವ್, ಡಿವೈಎಫ್ಐ ರಾಜ್ಯಾ ಧ್ಯಕ್ಷ ಮುನೀರ್ ಕಾಟಿಪಳ್ಳ ಮತ್ತಿತರರು ಬೆಂಬಲಿಸಿ ಮಾತನಾಡಿದರು. ನಿವೇಶನ ರಹಿತರ ಹೋರಾಟ ಸಮಿತಿಯಅಧ್ಯಕ್ಷ ಪ್ರೇಮನಾಥ್ ಜಲ್ಲಿಗುಡ್ಡೆ, ಕಾರ್ಯದರ್ಶಿ ಸಂತೋಷ್ ಶಕ್ತಿನಗರ, ಯೋಗೀಶ್ ಜಪ್ಪಿನ ಮೊಗರು, ನವೀನ್ ಬೊಲ್ಪುಗುಡ್ಡೆ, ನಾಗೇಶ್ ಕೋಟ್ಯಾನ್ ಭಾಗವಹಿಸಿದ್ದರು.

ನಗರ ಪಾಲಿಕೆಯ ಮೇಯರ್ ಹಾಗೂ ಕಮಿಷನರರಿಗೆ ಮನವಿ ಸಲ್ಲಿಸಿ ಸಲ್ಲಿಸಿರುವ ಎಲ್ಲಾ ಅರ್ಜಿಗಳ ಪರಿಶೀಲನೆ 3 ತಿಂಗಳೊಳಗೆ ಮುಗಿಸಬೇಕೆಂದೂ 2010ರ ಪಟ್ಟಿಯಲ್ಲಿರುವ ಬೋಗಸ್ ಹೆಸರುಗಳನ್ನು ವಜಾ ಮಾಡಬೇಕೆಂದೂ ಆಗ್ರಹಿಸಲಾಯಿತು. ನಿವೇಶನಕ್ಕಾಗಿ ಕಾದಿರಿಸಿದ ಜಾಗದ ಬಗ್ಗೆ ಬೇಗನೆ ಸೂಕ್ತ ಕಾರ್ಯಯೋಜನೆ ತಯಾರಿಸಬೇಕೆಂದು ಒತ್ತಾಯಿಸಲಾಯಿತು.

PEA½ZAAY

ಮೋದಿ ಅತ್ಯುತ್ಕೃಷ್ಟ 'ಈವೆಂಟ್ ಮ್ಯಾನೇಜರ್'..

"ಈ ವರೆಗೆ ಘೋಷಿಸಿದ ಹೊಸ ಕಾರ್ಯಕ್ರಮಗಳಲ್ಲಿ ಯಾವುದೂ ಹೊಸದಲ್ಲ. ಸಾಮಾಜಿಕ ಕ್ಷೇತ್ರದಲ್ಲಿ ಹಳೆಯ ಕಾರ್ಯಕ್ರಮಗಳಿಗೆ ಹೊಸ ಪ್ಯಾಕೇಜು ತೊಡಿಸಿದ್ದು ಅಷ್ಟೇ. ಇವೆಲ್ಲಾ ಭರಾಟೆಯ ಪ್ರಚಾರವಷ್ಟೆ. ನರೇಂದ್ರ ಮೋದಿ ಅತ್ಯುತ್ಕೃಷ್ಟ 'ಈವೆಂಟ್ ಮ್ಯಾನೇಜರ್'' ಅಂತ ನಾನು ಹೇಳಿದ್ದಲ್ಲ. ಅಡ್ವಾಣಿಯವರು ಹೇಳಿದ್ದು. ಫಿಲಂ ನಿರ್ಮಾಪಕ ಮನಮೋಹನ ದೇಸಾಯಿ ಅವರನ್ನು ಅವರ ಯಶಸ್ಸಿನ ಗುಟ್ಟಿನ ಬಗ್ಗೆ ಕೇಳಿದಾಗ, "ಪ್ರೇಕ್ಷಕ ಥಿಯೇಟರ್ ಒಳ ಹೊಕ್ಕಾಗಿಂದ. ಹೊರ ಹೋಗುವ ವರೆಗೆ, ಒಂದು ಕ್ಷಣವೂ ವಿಚಾರ ಮಾಡದಂತೆ ನೋಡಿಕೊಳ್ಳುತ್ತೇನೆ" ಎಂದಿದ್ದರಂತೆ. ಒಂದರ ನಂತರ ಇನ್ನೊಂದು 'ಈವೆಂಟ್' ಗಳೊಂದಿಗೆ ಭಾರತದ ಜನರನ್ನು ಅಂತಹ ಪ್ರೇಕ್ಷಕರಾಗಿಸಲು ಮೋದಿ ಪ್ರಯತ್ನಿಸುತ್ತಿದ್ದಾರೆ.' "

ಸೀತಾರಾಂ ಯೆಚುರಿ (ಸ್ವಚ್ಛ ಭಾರತ್ ಮುಂತಾದ ಕಾರ್ಯಕ್ರಮಗಳ ಬಗ್ಗೆ – ಔಟ್ ಲುಕ್ ಸಂದರ್ಶನದಲ್ಲಿ)

ಬಳ್ಳಾರಿಯಲ್ಲಿ ಅಂತ್ಯ ಸಂಸ್ಕಾರ

ಪುಟ 9 ರಿಂದ

ಮಾತ್ರವಲ್ಲದೆ ದೇಶದ ದುಡಿಯುವ ವರ್ಗದ ವಿಮೋಚನೆಗಾಗಿ ತನ್ನನ್ನು ತಾನು ತೊಡಗಿಸಿಕೊಂಡಿದ್ದರು. ಸಂಘಟಿತ ವಲಯದ ಕಾರ್ಮಿಕರನ್ನು ಮತ್ತು ಅಸಂಘಟಿತ ವಲಯದ ಕಾರ್ಮಿಕರ ನಡುವೆ ವ್ಯಾಪಕವಾಗಿ ಕೆಲಸ ಮಾಡಿದ್ದಾರೆ. ಇವರ ಕನಸುಗಳನ್ನು ನನಸು ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು. ಕಾ.ಪ್ರಸನ್ನ ಎಲ್ಲವನ್ನೂ ಗ್ರಹಿಸುವ ಮತ್ತು ಪ್ರತಿಯೊಂದನ್ನು ಹುಡುಕಾಡುವ ತವಕ ಇದ್ದವರು. ಅವರನ್ನು ಕಳೆದುಕೊಂಡಿರುವುದು ದೇಶದ ದುಡಿಯುವ ವರ್ಗದ ಚಳುವಳಿಗೆ ತುಂಬಲಾರದ ನಷ್ಟ ಎಂದು ಕಾ. ವಿ.ಜೆ.ಕೆ.ನಾಯರ್ ಹೇಳಿದರು.

ಶ್ರದ್ಧಾಂಜಲಿ ಸಭೆಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯೆ ಕಾ.ಪುಣ್ಯವತಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾ. ಶ್ರೀರಾಮರೆಡ್ಡಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರುಗಳಾದ ಕಾ. ಯು. ಬಸವರಾಜ್, ಕಾ. ನಿತ್ಯಾನಂದಸ್ವಾಮಿ, ಕಾ. ವರಲಕ್ಷ್ಮಿ, ಕಾ. ಮೀನಾಕ್ಷಿಸುಂದರಂ; ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಆರ್. ಎಸ್. ಬಸವರಾಜ, ಎಡಪಕ್ಷಗಳ ಜಿಲ್ಲಾ ನಾಯಕರುಗಳಾದ ಕಾ. ನಾಗಭೂಷಣ(ಸಿಪಿಐ), ಕಾ.ಸೋಮಶೇಖರ್(ಎಸ್.ಯು.ಸಿ.ಐ.), ಮಾಜಿ ಶಾಸಕ ಭೂಪತಿ ಅವರುಗಳು ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿದ್ದರು.

ಶ್ರದ್ಧಾಂಜಲಿ ಸಭೆಯ ನಂತರ ಸಂಘದ ಕಲ್ಲು ರುದ್ರಭೂಮಿಯಲ್ಲಿ ಕಾಂ॥ಪ್ರಸನ್ನಕುಮಾರ್ ರವರ ಪಾರ್ಥಿವ ಶರೀರ ಮಣ್ಣಲ್ಲಿ ಲೀನವಾಯಿತು.







.....ಬೆಳಕಿನ ಕಿರಣ – ಜನನುಡಿ

ಪುಟ 8 ರಿಂದ

ಸೇರಬೇಕು. ಆದರೆ ಸಾಧ್ಯವಾದ ಜಿಲ್ಲೆಗಳಲ್ಲಿ ಜನನುಡಿ ಸಮಾವೇಶಗಳು, ರಾಜ್ಯವ್ಯಾಪಿಯಾಗಿ ಇನ್ನಷ್ಟು ಜನರನ್ನೂ ತಲುಪಲು ನೆರವಾಗುವುದಿಲ್ಲವೇ? ಎಂಬ ಪ್ರಶ್ನೆಗಳೂ ಎದ್ದಿವೆ. ಕಳೆದ ವರ್ಷವೂ ಈ ಪ್ರಶ್ನೆಗಳು ಬಂದಿದ್ದವು. ಇಂತಹ ಹೊಸ ಸಾಧ್ಯತೆಗಳಿಗೆ ಜನನುಡಿ ಬಾಗಿಲು ತೆರೆದಿದೆ ಎನ್ನಬಹುದು.

ಪರಿಹಾರ, ಪರ್ಯಾಯ ಎಲ್ಲಿ?

‘ಸಾಹಿತ್ಯ ಮತ್ತು ಸಂಸ್ಕೃತಿಯನ್ನು ದೇಶ–ಕಾಲದೊಂದಿಗೆ ಮುಖಾಮುಖಿಯಾಗಿಸಿ ಎದುರಾಗುವ ಸವಾಲುಗಳಿಗೆ ಪರಿಹಾರದ ಪರ್ಯಾಯವನ್ನು ಕಂಡುಕೊಳ್ಳುವುದು’ ಜನನುಡಿಯ ಉದ್ದೇಶಗಳಲ್ಲಿ ಒಂದು. ಜನನುಡಿ 2015ರ ಗೋಷ್ಠಿಗಳಲ್ಲಿ ಇಂತಹ ಪರ್ಯಾಯಗಳು ಪರಿಹಾರಗಳು ಎಲ್ಲಿವೆ ಎಂದು ಹೆಚ್ಚಿನ ಗೋಷ್ಠಿಗಳಲ್ಲಿ ಬಂದ ಪ್ರಶ್ನೆಯಾಗಿತ್ತು. ನಾವು ಮುಖಾಮುಖಿಯಾಗುತ್ತಿರುವ ಮತ್ತು ಈ ಬಾರಿ ಆಯ್ದುಕೊಂಡ ಗೋಷ್ಠಿಯ ವಿಷಯಗಳು ಅತ್ಯಂತ ಸಂಕೀರ್ಣವಾದವು. ಅವುಗಳಿಗೆ ಸರಳ ಪರಿಹಾರವಾಗಲಿ ಪರ್ಯಾಯವಾಗಲಿ ಇಲ್ಲ ಎಂಬುದು ವೇದಿಕೆಯಿಂದ ಬದ್ದ ಉತ್ತರವಾಗಿತ್ತು. ಇದು ನಿಜ. ಆದರೆ ಇಂತಹ ಪರ್ಯಾಯ ಬೆಳೆಸುವತ್ತ ದಿಕ್ಸೂಚಿ ಮಂಡನೆಗಳು, ಚರ್ಚೆಗಳಾದರೂ ನಡೆಯಬೇಕಿತ್ತಲ್ಲ. ಕನಿಷ್ಟ ವಿಷಯದ ಸಂಕೀರ್ಣತೆಯ ಸಮರ್ಥ ಮಂಡನೆಯಾದರೂ ಇರಬೇಕಿತ್ತು. ಈ ಪರಿವಾರದಲ್ಲಿ ಇದ್ದವರು, ಹೊಸದಾಗಿ ಸೇರಿಕೊಂಡವರು ಇಲ್ಲಿಂದ ವಾಪಸು ಒಯ್ಯಬೇಕಾದ ಕೆಲವಾದರೂ ಹೊಸ ಒಳನೋಟಗಳು, ಹೊಳಹುಗಳು, ಐಡಿಯಾಗಳು, ಅನುಭವಗಳು ಇರಬೇಕಾಗಿತ್ತು ಎಂಬ ನಿರೀಕ್ಷೆ ಸರಿಯಾದ್ದೇ. ಅಭಿವೃದ್ಧಿಯ ಸವಾಲುಗಳು ಮತ್ತು ಸ್ವಲ್ಪ ಮಟ್ಟಿಗೆ ನುಡಿಮಾರ್ಗ ಗೋಷ್ಠಿ ಬಿಟ್ಟರೆ ಇಂತಹ ನಿರೀಕ್ಷೆ ಈಡೇರಲಿಲ್ಲ. ಈ ನಿಟ್ಟಿನಲ್ಲಿ ಜನನುಡಿ 2015 ಹೊಸ ಎತ್ತರಗಳನ್ನು ಏರಲಾಗಲಿಲ್ಲ ಎನ್ನಬಹುದು.

ಒಟ್ಟಂದದಲ್ಲಿ ಹೇಳುವುದಾದರೆ, ‘ಜನನುಡಿ ಕನ್ನಡ ನಾಡಿನ ಈ ಕಾಲದ ಹೆಗ್ಗುರುತುಗಳಲ್ಲಿ ಒಂದು’ ಎಂಬುದನ್ನು ಯಾರೂ ನಿರಾಕರಿಸಲಾಗದು. “ಹೊಸ ಸಾಧ್ಯತೆಗಳಿಗೆ ಜನನುಡಿ ಬಾಗಿಲು ತೆರೆದಿದೆ. ನಮ್ಮೆಲ್ಲರಲ್ಲಿ ಆತ್ಮವಿಶ್ವಾಸ ತುಂಬಿದೆ. ಪಯಣ ದೂರವಿದೆ. ಗಮ್ಯ ತಲುಪುವುದು, ಗುರಿ ಮುಟ್ಟುವುದು ತಮಾಷೆಯ ಮಾತಲ್ಲ. ಅದಕ್ಕಾಗಿ ಕಠಿಣವಾದ ದಾರಿಯಲ್ಲಿ ಬಹುದೂರ ಸಾಗಬೇಕಾಗಿದೆ. ಜನನುಡಿ ಆ ದಾರಿಯಲ್ಲಿರುವ ಬೆಳಕಿನ ಕಿರಣ.” ಎಂಬ ಸಂಘಟಕರ (ಅಭಿಮತ, ಮಂಗಳೂರು) ವಂದನಾರ್ಪಣೆಯ ಮಾತುಗಳು ನೂರಕ್ಕೆ ನೂರು ನಿಜ.


ಜನನುಡಿ ವೇದಿಕೆಯಲ್ಲಿ ಬಿಡುಗಡೆಗೊಂಡ ಪುಸ್ತಕಗಳು:

ಬಹುಸಂಖ್ಯಾತವಾದ
(ಚಿಂತಕರು ಕಂಡಂತೆ)
ಮತ್ತು
ಹಿಂದುತ್ವ ರಾಜಕಾರಣ
(ಅಂದು ಇಂದು ಮುಂದು)
---- ಬಿ. ಶ್ರೀಪಾದ;

ಸೆಕ್ಯುಲರ್ವಾದ ಮತ್ತು
ಅದರ ಬಗೆಗಿನ ಅತೃಪ್ತಿಗಳು
---- ಪ್ರೊ. ಅಮರ್ತ್ಯಸೇನ್
(ಅನು: ಎಸ್. ಶಿವಾನಂದಸಾಸ್ವೆಹಳ್ಳಿ),

ಸಂಘ ಪರಿವಾರದ ಇಟಾಲಿಯನ್ ಕನೆಕ್ಷನ್.
----ಎ.ಜಿ. ನೂರಾಣಿ ಮತ್ತು
ಮಾರ್ಝಿಯಾ ಕಾಸೊಲರಿ
(ಅನು: ಟಿ.ಯಶವಂತ)

ಜನನುಡಿ 2015 – ಬದ್ಧತೆಯ ಘೋಷಣೆ




ಜನನುಡಿ ಜನ ಬದುಕಿಗೆ ಒದಗಿ ಬಂದ ಆತಂಕಗಳನ್ನು ಚರ್ಚಿಸುತ್ತಾ, ಸಂವಾದ ಮಾಡುತ್ತಾ, ಈ ಆತಂಕಗಳ ಒಳ–ಹೊರಗನ್ನು ಬಯಲು ಮಾಡುತ್ತಾ ಹೊಸ ಪರ್ಯಾಯಗಳನ್ನು, ಹೊಸ ಕನಸುಗಳನ್ನು ಕಟ್ಟಿಕೊಳ್ಳುವ ಒಂದು ವೇದಿಕೆಯಾಗಿ ರೂಪುಗೊಳ್ಳುತ್ತಿದೆ. ಈ ಎರಡೂ ದಿನದ ಈ ರೂಪುಗೊಳ್ಳುವಿಕೆಯಲ್ಲಿ ನಾವೆಲ್ಲರೂ ಭಾಗಿಗಳಾಗಿದ್ದೇವೆ. ಜನರನ್ನು ಒಂದೆಡೆ ಸೇರಿಸಿ ಆ ಜನಸಮುದಾಯವನ್ನು ಬಂಡವಾಳ ಮಾಡಿಕೊಳ್ಳುವ, ಅವರ ತಲೆಯಲ್ಲಿ ವಿಷಬೀಜ ಬಿತ್ತುವ ಪ್ರಕ್ರಿಯೆಗಳು ಬಲಗೊಳ್ಳುತ್ತಿರುವ ಈ ಹೊತ್ತು, ಜನರ ಎದೆಯೊಳಗೆ ಪ್ರೀತಿಯನ್ನು, ಮಾನವೀಯತೆಯನ್ನು ಬಿತ್ತುವ, ಜನನುಡಿಯಂತಹ ಪರ್ಯಾಯ ವೇದಿಕೆಗಳು ಹೆಚ್ಚೆಚ್ಚು ಆಗಬೇಕು.

ಈ ಎರಡು ದಿನ ವರ್ತಮಾನದ ವಿದ್ಯಮಾನಗಳನ್ನು ಜನನುಡಿಯ ದೃಷ್ಟಿಕೋನದಲ್ಲಿ ಚರ್ಚಿಸಿ, ಚಿಂತಿಸಿ, ಸಂವಾದ ಮಾಡಿದ್ದೇವೆ. ಇದರ ಭಾಗವಾಗಿ ನಾವುಗಳೆಲ್ಲ ಒಗ್ಗೂಡಿ, ದನಿಗೂಡಿಸಿ ನಮ್ಮ ಬದ್ಧತೆಯನ್ನು ನಾವೇ ಹೇಳಿಕೊಳ್ಳುವ ಹಾಗೆ ಗಟ್ಟಿಯಾಗಿ ಹೇಳಬೇಕಾಗಿದೆ.

ಈ ನಿಟ್ಟಿನಲ್ಲಿ 2015ನೇ ಸಾಲಿನ ಜನನುಡಿ ಬದ್ಧತೆಯ ಘೋಷಣೆ:

1. ಈ ನಾಡಿನ ಜನರು, ಸಂತರು, ಚಳವಳಿಕಾರರು ಶತಮಾನಗಳಿಂದ ರೂಪಿಸಿರುವ ಸಹಬಾಳ್ವೆಯ ಬಗ್ಗೆ ನಮಗೆ ಅಭಿಮಾನವಿದೆ. ಅದನ್ನು ರಕ್ಷಿಸಿ, ಬೆಳೆಸಲು ಸಂಘಟಿತ ಪ್ರಯತ್ನ ಮಾಡುತ್ತೇವೆ. ಸೌಹಾರ್ದ ಬಾಳ್ವೆಯನ್ನು ನಾಶಗೊಳಿಸುವ ಮತೀಯ ಶಕ್ತಿಗಳ ವಿರುದ್ಧ ನಡೆಸುವ ಎಲ್ಲಾ ಹೋರಾಟಗಳಲ್ಲಿ ಸಹಭಾಗಿಗಳಾಗುತ್ತೇವೆ.



2. ನಮ್ಮ ನೆಲ, ಜಲ, ಸಂಪನ್ಮೂಲಗಳು ಈ ಭೂಮಿಯ ಮೇಲಿನ ಜೀವಿಗಳಿಗೆಲ್ಲಾ ಸೇರಿದ್ದಾಗಿದೆ. ಇದು ಎಲ್ಲರ ಹಿತಕ್ಕೆ ಬಳಕೆಯಾಗಬೇಕೆಂದು ಪ್ರತಿಪಾದಿಸುತ್ತೇವೆ.
3. ನನ್ನ ಅಭಿವ್ಯಕ್ತಿ ನನ್ನ ಹಕ್ಕು. ಇತರರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುತ್ತಲೇ ನನ್ನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುತ್ತೇನೆ.
4. ಜೀವ ವಿರೋಧಿ ಅಂಧಶ್ರದ್ಧೆಗಳನ್ನು ವಿರೋಧಿಸುತ್ತೇವೆ. ಮಾನವೀಯ ಆಚರಣೆಗಳನ್ನು ಜಾರಿಗೆ ತರಲು ಬದ್ಧರಾಗಿದ್ದೇವೆ.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**